ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಜುಲೈ 11 ಗುರುವಾರ 2024

45

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 86 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಪತ್ನಿ ಹೆಸರಿಗೆ ಮಂಜೂರಾದ ನಿವೇಶನ ಕ್ರಮಬದ್ಧವಾಗಿದೆ: ಸಿಎಂ ಸಿದ್ದರಾಮಯ್ಯ ಪುನರುಚ್ಚಾರ

● 50:50 ಅನುಪಾತದ ನಿವೇಶನ ಹಂಚಿಕೆಯಲ್ಲಿ ನಿಯಮ ಉಲ್ಲಂಘಿಸಿದ್ದರೆ ಕಠಿಣ ಕ್ರಮ ● ತನಿಖಾ ವರದಿ ಬಂದ ನಂತರ ತಪ್ಪು ಮಾಡಿರುವವರ ವಿರುದ್ಧ ಕ್ರಮದ ನಿರ್ಧಾರ ● ಸಿಬಿಐ ಸಂಸ್ಥೆಯನ್ನು ಬಿಜೆಪಿ ಚೋರ್ ಬಚಾವ್ ಸಂಸ್ಥೆ ಎನ್ನುತ್ತಾ ಬಂದಿತ್ತು

ಮೈಸೂರು, ಜು.10(ಎಂಟಿವೈ)– ಪತ್ನಿ ಹೆಸರಲ್ಲಿದ್ದ ಭೂಮಿಯನ್ನು ನಿಯಮ ಉಲ್ಲಂಘಿಸಿ ಮುಡಾ ಸ್ವಾಧೀನಕ್ಕೆ ಪಡೆದು ನಿವೇಶನವನ್ನಾಗಿ ಪರಿವರ್ತಿಸಿ ಹಂಚಿಕೆ ಮಾಡಿದ್ದಕ್ಕೆ ತಪ್ಪೊಪ್ಪಿಕೊಂಡು ನಿಯಮಾನುಸಾರವೇ ವಿಜಯನಗರದಲ್ಲಿ ಬದಲಿ ನಿವೇಶನ ನೀಡಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪುನರುಚ್ಚರಿಸಿದ್ದಾರೆ.

ಬೆಂಗಳೂರಿನ ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸಿದ ಅವರು, ಅಲ್ಲಿ ಪತ್ರಕರ್ತರೊಂದಿಗೆ ಮಾತನಾಡುತ್ತಾ, ಪತ್ನಿ ಹೆಸರಲ್ಲಿ ನಿವೇಶನ ನೀಡಿರುವುದು ಕ್ರಮಬದ್ಧವಾಗಿಯೇ ಇದೆ. ಆದರೆ ಬಿಜೆಪಿಯವರು ಈ ವಿಚಾರವನ್ನು ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳುತ್ತಿದ್ದಾರೆ. ಈಗಾಗಲೇ ಈ ವಿಚಾರಕ್ಕೆ ಸಂಬಂಧಿಸಿದಂತೆ ಡಾ.ಹೆಚ್.ಸಿ. ಮಹದೇವಪ್ಪ ಹಾಗೂ ಇತರ ಮುಖಂಡರು ಹೇಳಿದ್ದಾರೆ. ಆದರೂ, ಮತ್ತೆ ಮತ್ತೆ ಅದನ್ನೇ ಕೇಳುತ್ತಿದ್ದೀರಾ ಎಂದು ಕಿಡಿಕಾರಿದರು.

ನಾನು ವಿಜಯನಗರದಲ್ಲಿ ಸೈಟ್ ಕೊಡಿ ಅಂತ ಕೇಳಿರಲಿಲ್ಲ. ಅರ್ಜಿಯನ್ನು ಹಾಕಿರಲಿಲ್ಲ. ನಮ್ಮ ಜಮೀನನ್ನು ನಿಯಮಬಾಹಿರವಾಗಿ ಭೂಸ್ವಾಧೀನಪಡಿಸಿಕೊಂಡಿದ್ದಾರೆ. ಅದಕ್ಕೆ ಅವರೇ ತಪ್ಪೊಪ್ಪಿಗೆ ಪತ್ರದೊಂದಿಗೆ ಸೈಟ್ ಕೊಟ್ಟಿದ್ದಾರೆ. ಒಂದು ವೇಳೆ ನಿಮ್ಮ ಜಮೀನನ್ನು ಸ್ವಾಧೀನಪಡಿಸಿಕೊಂಡಿದ್ದರೆ ಸುಮ್ಮನೆ ಬಿಟ್ಟುಬಿಡ್ತಾ ಇದ್ರಾ? ಪರಿಹಾರ ಕೇಳ್ತಾ ಇದ್ರೋ, ಇಲ್ಲವೋ ಎಂದು ಪತ್ರಕರ್ತರನ್ನೇ ಪ್ರಶ್ನಿಸಿದರು.



ಮೈಸೂರಿನ ವಿಮಾನ ನಿಲ್ದಾಣದಲ್ಲಿ ಪತ್ರಕರ್ತರೊಂದಿಗೆ ಸಿಎಂ ಸಿದ್ದರಾಮಯ್ಯ ಮಾತನಾಡಿದರು.

ನಾವ್ಯಾರೂ ಕೇಳಿರಲಿಲ್ಲ: ನಾನಾಗಲೀ ಅಥವಾ ನನ್ನ ಪತ್ನಿಯಾಗಲೀ ವಿಜಯನಗರದಲ್ಲೇ ನಿವೇಶನ ನೀಡಿ ಎಂದು ಕೇಳಿದ್ದೀವಾ? ಅಥವಾ ಪತ್ರ ಬರೆದಿದ್ದೀವಾ? ನಿವೇಶನ ಕೇಳಿರುವ ದಾಖಲೆಯಿದ್ದರೆ ತೋರಿಸಿ. ಕಾನೂನುಪ್ರಕಾರ ಬದಲಿ ನಿವೇಶನ ಕೊಡಲಾಗಿದೆ. ಇದರಲ್ಲಿ ಯಾವ ವಿವಾದ ಇದೆ ಹೇಳಿ. ಸುಮ್ಮನೇ ವಿವಾದ ಮಾಡುತ್ತಿದ್ದಾರೆ. ಬಿಜೆಪಿಯವರು ಪ್ರತಿಭಟನೆ ಮಾಡ್ತೇವೆ, ಮುತ್ತಿಗೆ ಹಾಕ್ತೇವೆ ಅಂತ ಹೇಳಿದ್ದಾರೆ. ರಾಜಕೀಯ ಕಾರಣಕ್ಕಾಗಿ ವಿವಾದ ಮಾಡುತ್ತಿದ್ದಾರೆ. ಮುಡಾ ಅಕ್ರಮದ ಬಗ್ಗೆ ಇಬ್ಬರು ಐಎಎಸ್ ಅಧಿಕಾರಿಗಳ ನೇತೃತ್ವದಲ್ಲಿ ತನಿಖೆ ನಡೆಯುತ್ತಿದೆ. ತನಿಖೆಯಲ್ಲಿ ತಪ್ಪಾಗಿದೆ ಎಂಬುದು ಸಾಬೀತಾದರೆ ಎಲ್ಲರ ಮೇಲೂ ಕಠಿಣ ಕ್ರಮ ಜರುಗಿಸುತ್ತೇವೆ ಎಂದು ತಿಳಿಸಿದರು.

ವರದಿ ಆಧರಿಸಿ ಕ್ರಮ: 50:50 ಅನುಪಾತದಡಿ ನಿವೇಶನ ಹಂಚಿಕೆ ಸೇರಿದಂತೆ ಮುಡಾದಲ್ಲಿ ನಡೆದಿರುವ ಹಗರಣವನ್ನು ಐಎಎಸ್ ಅಧಿಕಾರಿಗಳ ನೇತೃತ್ವದ ತಂಡ ತನಿಖೆ ನಡೆಸುತ್ತಿದ್ದು, ವರದಿಯಲ್ಲಿ ತಪ್ಪಿತಸ್ಥರು ಎಂದು ಕಂಡುಬರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುತ್ತೇವೆ. ವರದಿಯಲ್ಲಿ ನಿಯಮ ಉಲ್ಲಂಘಿಸಿ ನಿವೇಶನ ಹಂಚಿಕೆ ಮಾಡಿರುವುದು ಸಾಬೀತಾದರೆ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಲಾಗುತ್ತದೆ. ಯಾರನ್ನೂ ರಕ್ಷಣೆ ಮಾಡುವ ಪ್ರಶ್ನೆಯೇ ಇಲ್ಲ ಎಂದು ಸ್ಪಷ್ಟಪಡಿಸಿದರು.

■ 9ನೇ ಪುಟಕ್ಕೆ

ವಾಲ್ಮೀಕಿ ನಿಗಮದ ಹಣ ಅಕ್ರಮ ವರ್ಗಾವಣೆ

ಶಾಸಕರಾದ ನಾಗೇಂದ್ರ, ಬಸನಗೌಡ ದದ್ದಲ್ ಇಡಿ ವಶಕ್ಕೆ ಸಾಧ್ಯತೆ

ಬೆಂಗಳೂರು, ಜು. 10(ಕೆಎಂಶಿ)– ಮಾಜಿ ಸಚಿವ, ಹಾಲಿ ಕಾಂಗ್ರೆಸ್ ಶಾಸಕರಾದ ಬಿ.ನಾಗೇಂದ್ರ ಹಾಗೂ ಬಸನಗೌಡ ದದ್ದಲ್ ಅವರನ್ನು ಯಾವುದೇ ಕ್ಷಣದಲ್ಲಿ ಜಾರಿ ನಿರ್ದೇಶನಾಲಯ (ಇಡಿ) ತನ್ನ ವಶಕ್ಕೆ ಪಡೆಯಲಿದೆ.

ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡದ ಅಭಿವೃದ್ಧಿ ನಿಗಮದ ಹಗರಣಕ್ಕೆ ಸಂಬಂಧಿಸಿದಂತೆ ನಾಗೇಂದ್ರ ಅವರ ಆಪ್ತ ಸಹಾಯಕ ಹರೀಶ್ ಅವರನ್ನು ಇಡಿ ಬಂಧಿಸಿದೆ. ಅಷ್ಟೇ ಅಲ್ಲ, ಉಭಯ ಶಾಸಕರು ಮತ್ತು ಅವರ ಆಪ್ತರ ನಿವಾಸ, ಕಚೇರಿಗಳ ಮೇಲೆ ಮುಂಜಾನೆಯೇ ಬೆಂಗಳೂರು, ಬಳ್ಳಾರಿ, ಹೈದರಾಬಾದ್‌ನಲ್ಲಿ ಏಕಕಾಲಕ್ಕೆ ದಾಳಿ ನಡೆಸಿ ದಾಖಲೆಗಳನ್ನು ವಶಪಡಿಸಿಕೊಂಡಿದೆ.

■ 9ನೇ ಪುಟಕ್ಕೆ

ಯಾವುದೇ ಕಾರಣಕ್ಕೂ 'ಗ್ಯಾರಂಟಿ' ನಿಲ್ಲಿಸಲ್ಲ

■ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತೊಮ್ಮೆ ಸ್ಪಷ್ಟ ಭರವಸೆ
■ ಚಾಮರಾಜನಗರದಲ್ಲಿ ಮತದಾರರಿಗೆ ಕೃತಜ್ಞತಾ ಸಭೆ



ಚಾಮರಾಜನಗರದ ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಚಾಮರಾಜನಗರ ಲೋಕಸಭಾ ಕ್ಷೇತ್ರದ ಮತದಾರರ ಕೃತಜ್ಞತಾ ಸಮಾರಂಭವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು.

ಚಾಮರಾಜನಗರ, ಜು.10–ರಾಜ್ಯ ಸರ್ಕಾರ ಬಜೆಟ್‌ನಲ್ಲಿ ಘೋಷಿಸಿದ ಯಾವುದೇ ಯೋಜನೆಗಳಿಗೂ ಹಣದ ಕೊರತೆ ಇಲ್ಲ. ಅಲ್ಲದೆ, ಐದು ಗ್ಯಾರಂಟಿ ಯೋಜನೆಗಳನ್ನು ಯಾವುದೇ ಕಾರಣಕ್ಕೂ ನಿಲ್ಲಿಸಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟ ಭರವಸೆ ನೀಡಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಬುಧವಾರ ಚಾಮರಾಜನಗರ ಹಾಗೂ ಮೈಸೂರು ಗ್ರಾಮಾಂತರ ಕಾಂಗ್ರೆಸ್‌ನಿಂದ ಆಯೋಜಿಸಿದ್ದ ಚಾಮರಾಜನಗರ ಲೋಕಸಭಾ ಕ್ಷೇತ್ರದ ಮತದಾರರ ಕೃತಜ್ಞತಾ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಬಿಜೆಪಿಯವರು ಚುನಾವಣೆ ವೇಳೆ ಯಾವುದೇ ಕಾರಣಕ್ಕೂ ಗ್ಯಾರಂಟಿ ಜಾರಿಯಾಗಲ್ಲ ಎನ್ನುತ್ತಿದ್ದರು. ಈಗ, ಸರ್ಕಾರದಲ್ಲಿ ಹಣ ಇಲ್ಲ ಎನ್ನುತ್ತಿದ್ದಾರೆ. ಆದರೆ, ಮುಖ್ಯಮಂತ್ರಿಯಾಗಿ ನಾನು ಹೇಳುತ್ತಿದ್ದೇನೆ ಸರ್ಕಾರದಲ್ಲಿ ಹಣದ ಕೊರತೆ ಇಲ್ಲ. ಗ್ಯಾರಂಟಿ ಯೋಜನೆ ಯಾವುದೇ ಕಾರಣಕ್ಕೂ ನಿಲ್ಲಲ್ಲ ಎಂದರು.

> ❝ ನಾವು ನುಡಿದಂತೆ ನಡೆಯದಿದ್ದರೆ ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲಿ 1.80 ಲಕ್ಷ ಮತಗಳ ಅಂತರದಲ್ಲಿ ಕಾಂಗ್ರೆಸ್ ಗೆಲ್ಲಲು ಸಾಧ್ಯವಾಗುತ್ತಿರಲಿಲ್ಲ. ಬಿಜೆಪಿಯವರು ದೇಶದ ಮತದಾರರನ್ನು ದಡ್ಡರು ಎಂದು ಬಿಂಬಿಸುತ್ತಿದ್ದಾರೆ. ಆದರೆ, ನಮ್ಮ ಮತದಾರರು ದಡ್ಡರಲ್ಲ. ರಾಜ್ಯಕ್ಕೆ ಬರಗಾಲ ಬಂದರೂ ಕೇಂದ್ರ ಸರ್ಕಾರ ನಮ್ಮ ರಾಜ್ಯದ ಪಾಲಿನ ಹಣ ಕೊಡಲಿಲ್ಲ. ನಾವು ಕಾನೂನು ಹೋರಾಟ ಶುರು ಮಾಡಿದ್ದೆವು. ಸುಪ್ರೀಂ ಕೋರ್ಟ್ ಛೀಮಾರಿ ಹಾಕಿದ ಬಳಿಕ ಕೇಂದ್ರ ಸರ್ಕಾರ ರಾಜ್ಯದ ಪಾಲಿನ ಸ್ವಲ್ಪ ಹಣ ಬಿಡುಗಡೆ ಮಾಡಿತು.
>
> –ಸಿದ್ದರಾಮಯ್ಯ, ಮುಖ್ಯಮಂತ್ರಿ

ನನ್ನ–ನಿಮ್ಮ ಸಂಬಂಧ 40 ವರ್ಷಗಳದ್ದು: ನನ್ನ ಮತ್ತು ನಿಮ್ಮ ಸಂಬಂಧ 40 ವರ್ಷಗಳಷ್ಟು ಹಳೆಯದು ಮತ್ತು ಗಟ್ಟಿತನದ್ದು. ರಾಜ್ಯದ ಪರವಾಗಿ ಕೇಂದ್ರದಲ್ಲಿ ನಿರಂತರ ಹೋರಾಟ ಮುಂದುವರೆಸಿ ಎಂದು

■ 9ನೇ ಪುಟಕ್ಕೆ

ನಿವೇಶನ ಹಂಚಿಕೆ ಹಗರಣ ಹಿನ್ನೆಲೆ: ಮುಡಾ ಸೇರಿದಂತೆ

ರಾಜ್ಯದಲ್ಲಿನ ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿಕಾರಕ್ಕೆ ಕತ್ತರಿ

● ನಗರಾಭಿವೃದ್ಧಿ ಪ್ರಾಧಿಕಾರಗಳು ಮತ್ತು ಗ್ರಾಮಾಂತರ ಯೋಜನಾ ಆಯುಕ್ತರಿಗೆ ನಿಯಂತ್ರಣ ಅಧಿಕಾರ ● ಮುಡಾ ಮುಚ್ಚಬೇಕು ಎಂಬ ಆಗ್ರಹಕ್ಕೆ ಸರ್ಕಾರದ ಮನ್ನಣೆಯೇ?

■ ಎಸ್.ಟಿ.ರವಿಕುಮಾರ್

ಮೈಸೂರು, ಜು. 10–ಹಲವು ಹಗರಣಗಳಿಂದಲೇ ಮಸಿ ಬಳಿದುಕೊಂಡಿರುವ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ವನ್ನು ಮುಚ್ಚಬೇಕೆಂಬ ಹಲವರ ಆಗ್ರಹ ನಿಜವಾಗುವ ಸಮಯ ಸಮೀಪಿಸುತ್ತಿದೆಯೇ?

ಸ್ವಾಧೀನಪಡಿಸಿಕೊಳ್ಳದೇ ಅಭಿವೃದ್ಧಿಪಡಿಸಿದ ವಸತಿ ಬಡಾವಣೆಯ ಭೂಮಿಗೆ ಪರಿಹಾರವಾಗಿ ಮುಡಾದಿಂದ ಪ್ರತಿಷ್ಠಿತ ಬಡಾವಣೆಯಲ್ಲಿ ಅಭಿವೃದ್ಧಿಪಡಿಸಿದ ನಾಲ್ಕು ಪಟ್ಟು ಬೆಲೆ ಬಾಳುವ ನಿವೇಶನಗಳನ್ನು ನಿಯಮಬಾಹಿರವಾಗಿ ಭೂ ಮಾಲೀಕರು ಹಾಗೂ ಜಿಪಿಎ ಹೊಂದಿರುವವರಿಗೆ ಹಂಚಿಕೆ ಮಾಡುವ ಮೂಲಕ ಬ್ರಹ್ಮಾಂಡ ಭ್ರಷ್ಟಾಚಾರ ಮಾಡಿದ್ದು, ಸಾವಿರಾರು



ಕೋಟಿ ರೂ. ಹಗರಣ ಬೆಳಕಿಗೆ ಬಂದಿದೆ. ಈ ಸಂಬಂಧ ತನಿಖೆ ಪ್ರಗತಿಯಲ್ಲಿರುವ ಬೆನ್ನಲ್ಲೇ ಸರ್ಕಾರ ರಾಜ್ಯದ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧ್ಯಕ್ಷರು, ಸದಸ್ಯರು, ಆಯುಕ್ತರಿಗೆ ದತ್ತವಾಗಿದ್ದ ಅಧಿಕಾರವನ್ನು ಮೊಟಕುಗೊಳಿಸಿದೆ. ನಗರಾಭಿವೃದ್ಧಿ ಪ್ರಾಧಿಕಾರಗಳು, ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯ (Urban Development Authorities and Town and Country Planning Commissionerate)ದ ಆಯುಕ್ತರಿಗೆ ರಾಜ್ಯದಲ್ಲಿರುವ ನಗರಾಭಿವೃದ್ಧಿ ಪ್ರಾಧಿಕಾರ (Urban Development Authorities)ಗಳ ಕಾರ್ಯ ಹಂಚಿಕೆ, ಕರ್ತವ್ಯ ಹಾಗೂ ಅಧಿಕಾರವನ್ನು ಹಸ್ತಾಂತರಿಸಿ ಜುಲೈ 8ರಂದು ಸರ್ಕಾರ ಆದೇಶ ಹೊರಡಿಸಿದೆ.

ಅದರಂತೆ, ಪ್ರಾಧಿಕಾರಗಳು ಮಂಡಿಸುವ ವಾರ್ಷಿಕ ಬಜೆಟ್‌ಗಳನ್ನು ಪರೀಕ್ಷಿಸಿ ಅನುಮೋದಿಸಿದ ನಂತರವಷ್ಟೇ ಯೋಜನೆ ಅನುಷ್ಠಾನಗೊಳಿಸಬೇಕು. ವಾರ್ಷಿಕ ವರದಿ, ಆಡಿಟ್ ರಿಪೋರ್ಟ್‌ಗಳನ್ನು ಸರ್ಕಾರವೇ ಪರಿಶೀಲಿಸಬೇಕು. ಪ್ರತಿ ಸಭೆಯ ನಡಾವಳಿ ಅನುಮೋದನೆ, ನಿರ್ದೇಶನಗಳು,

■ 9ನೇ ಪುಟಕ್ಕೆ

ಅಧೀನ ಅಧಿಕಾರಿಗಳಿಗೆ ಧಮ್ಕಿ ಹಾಕಿ ತಮಗೆ ಬೇಕಾದಂತೆ ಫೈಲ್ ರೆಡಿ ಮಾಡಿಸುತ್ತಿದ್ದರು!

ಮೈಸೂರು, ಜು. 10(ಆರ್‌ಕೆ)– ಪರಸ್ಪರ ಒಪ್ಪಂದದಂತೆ ಶೇ. 50:50ರ ಅನುಪಾತದಡಿ ನಿಯಮಬಾಹಿರವಾಗಿ ಸಾವಿರಾರು ನಿವೇಶನ ಹಂಚಿ ಮುಡಾ ಮತ್ತು ಸರ್ಕಾರಕ್ಕೆ ಸಾವಿರಾರು ಕೋಟಿ ರೂ. ನಷ್ಟ ಉಂಟುಮಾಡಿರುವ ಹಗರಣ ಕುರಿತಂತೆ ತನಿಖೆ ತೀವ್ರ ಪ್ರಗತಿಯಲ್ಲಿ ನಡೆಯುತ್ತಿದೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಉನ್ನತ ಅಧಿಕಾರಿಗಳು ವ್ಯವಸ್ಥಿತವಾಗಿ ತಮ್ಮ ಅಧಿಕಾರ ದುರುಪಯೋಗಪಡಿಸಿಕೊಂಡು ಕಚೇರಿ ಸಿಬ್ಬಂದಿಗೆ ಧಮ್ಕಿ ಹಾಕಿ, ತಮಗೆ ಬೇಕಾಗಿರುವ ನಿವೇಶನಗಳ ಫೈಲ್‌ಗಳನ್ನು ರೆಡಿ ಮಾಡಿಸಿದ್ದಾರೆ. ಪೂರಕ ಅಭಿಪ್ರಾಯ (ಪಾಸಿಟಿವ್ ಒಪಿನಿಯನ್)ದೊಂದಿಗೆ ಮಂಡಿಸಬೇಕೆಂದು ತಾಕೀತು ಮಾಡುತ್ತಿದ್ದರು ಎಂದು ಮುಡಾ ಕಚೇರಿ ಪ್ರಾಂಗಣದಲ್ಲೀಗ ಸಿಬ್ಬಂದಿಗಳೇ ಮಾತನಾಡಿಕೊಳ್ಳುತ್ತಿದ್ದಾರೆ.

ಸಚಿವರು (ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್) ಫೈಲ್‌ಗಳನ್ನು ಕೇಳಿದ್ದಾರೆ. ತುರ್ತಾಗಿ ಕೊಂಡೊಯ್ಯಬೇಕಾಗಿದೆ. ಪೂರಕ ವರದಿಯೊಂದಿಗೆ ಕಳುಹಿಸಿ. ಇಲ್ಲದಿದ್ದರೆ ಗ್ರಹಚಾರ

ಪೂರಕ ಟಿಪ್ಪಣಿ ಬರೆಯದಿದ್ದರೆ ಮಾತೃ ಇಲಾಖೆಗೆ ಎತ್ತಂಗಡಿ ಎಚ್ಚರಿಕೆ; ಸಹಕರಿಸಿದರೆ ಮೆಚ್ಚುಗೆ ಮಾತು!

ನೆಟ್ಟಗಿರಲ್ಲ. ನಿಮ್ಮ ಮಾತೃ ಇಲಾಖೆಗೆ ವರ್ಗವಾಗುವುದು ಗ್ಯಾರಂಟಿ. ತಡಮಾಡದೇ ರೆಡಿ ಮಾಡಿಕೊಂಡು ತನ್ನಿ ಎಂದು ಉನ್ನತ ಅಧಿಕಾರಿಗಳು, ಅಧೀನಾಧಿಕಾರಿಗಳಿಗೆ ಧಮ್ಕಿ ಹಾಕಿ, ರೆಡಿ ಮಾಡಿಸಿ, ನಿವೇಶನಗಳನ್ನು ರಾತ್ರೋರಾತ್ರಿ ಹಂಚಿಕೆ ಮಾಡುತ್ತಿದ್ದರು ಎಂಬ ಮಾತುಗಳು ಕೇಳಿಬರುತ್ತಿವೆ.

ಪೂರಕವಲ್ಲದ ವರದಿ ನೀಡುವ, ತಮ್ಮ ಆದೇಶಕ್ಕೆ ಮನ್ನಣೆ ನೀಡದ ಇಂಜಿನಿಯರ್ ಒಬ್ಬರನ್ನು ಡಿಮೋಷನ್ ಮಾಡಿದ್ದಲ್ಲದೆ, ಬೇರೆ ವಲಯ ಕಚೇರಿಗೆ ಆಂತರಿಕ ವರ್ಗಾವಣೆ ಮಾಡಲಾಗಿದೆ ಎಂದು ಹೇಳಲಾಗುತ್ತಿದೆ. ಸಹಕರಿಸದ ಇನ್ನು ಕೆಲ ಇಂಜಿನಿಯರ್‌ಗಳ ಬಗ್ಗೆ, ಇತ್ತೀಚೆಗೆ ಮೈಸೂರಿಗೆ

■ 9ನೇ ಪುಟಕ್ಕೆ

ಮೈಸೂರು ವಿಮಾನ ನಿಲ್ದಾಣದ ರನ್‌ವೇ ವಿಸ್ತರಣೆಗೆ ಅಡ್ಡಿ

ಚಾ.ನಗರ ಮಾರ್ಗದ ರೈಲು ಹಳಿ ಸ್ಥಳಾಂತರದ ಸಾಧ್ಯಾಸಾಧ್ಯತೆ ಅಧ್ಯಯನ

ಮೈಸೂರು, ಜು. 10 (ಆರ್‌ಕೆ)– ಮೈಸೂರು ವಿಮಾನ ನಿಲ್ದಾಣದ ರನ್‌ವೇ ವಿಸ್ತರಣೆಗೆ ಅಡ್ಡಿಯಾಗಿರುವ ಚಾಮರಾಜನಗರ ಮಾರ್ಗದ ರೈಲು ಹಳಿ ಮಾರ್ಗ ಸ್ಥಳಾಂತರ ಅಥವಾ ಅಂಡರ್ ಗ್ರೌಂಡ್ ಪ್ಯಾಸೇಜ್ ಮಾಡುವ ಸಂಬಂಧ ಸಾಧ್ಯಾಸಾಧ್ಯತೆಗಳ ಬಗ್ಗೆ ಅಧ್ಯಯನ ನಡೆಸಿ ಸಮೀಕ್ಷಾ ವರದಿ ಸಿದ್ಧಪಡಿಸಲು ನೈರುತ್ಯ ರೈಲ್ವೆ ಟೆಂಡರ್ ಕರೆದಿದೆ.

ಮಂಡಕಳ್ಳಿ ವಿಮಾನ ನಿಲ್ದಾಣದ ರನ್‌ವೇ ಮಧ್ಯೆ ಹಾದು ಹೋಗಿರುವ ಪ್ರಸ್ತುತ ಮೈಸೂರು–ಚಾಮರಾಜನಗರ ನಡುವಿನ ಕಿಲೋಮೀಟರ್ 8/147 ರಿಂದ 12/576 ವರೆಗಿನ ರೈಲು ಮಾರ್ಗದಿಂದಾಗಿ ಪಶ್ಚಿಮ ಭಾಗದಲ್ಲಿ ರನ್‌ವೇ ವಿಸ್ತರಣೆಗೆ ತೊಡಕುಂಟಾಗಿದೆ.

ಪ್ರಸ್ತುತ ಇರುವ ರನ್‌ವೇಯನ್ನು 1,740 ಮೀಟರ್‌ನಿಂದ (30 ಮೀಟರ್ ಅಗಲ) 2,750 ಮೀಟರ್ (45 ಮೀಟರ್ ಅಗಲ)ಗೆ ವಿಸ್ತರಿಸಲು ಯೋಜಿಸಲಾಗಿತ್ತಾದರೂ, ಅಲ್ಲಿ ರೈಲು ಹಳಿ ಹಾದು ಹೋಗಿರುವುದರಿಂದ ಡೈರೆಕ್ಟೋರೇಟ್ ಜನರಲ್ ಆಫ್ ಸಿವಿಲ್ ಏವಿಯೇಷನ್ (ಡಿಜಿಸಿಎ) ಮತ್ತು ಭಾರತ್ ವಿಮಾನ ನಿಲ್ದಾಣಗಳ ಪ್ರಾಧಿಕಾರವು ಅದನ್ನು ಸ್ಥಳಾಂತರಿಸಬೇಕು ಇಲ್ಲವೇ ಅಂಡರ್ ಗ್ರೌಂಡ್ ಪ್ಯಾಸೇಜ್ ಮಾಡಬೇಕೆಂದು ಅಭಿಪ್ರಾಯಪಟ್ಟಿತ್ತು.

■ 6ನೇ ಪುಟಕ್ಕೆ



ವಿಸ್ತರಿಸಲು ಉದ್ದೇಶಿಸಿರುವ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದ ರನ್‌ವೇ.

ಪ್ರವೇಶ ರಕ್ಷಾಕವಚಕ್ಕೆ ಪ್ರತಾಪ್‌ಸಿಂಹ ಸಲಹೆ



ಪ್ರತಾಪ್‌ಸಿಂಹ

ಮೈಸೂರು, ಜು. 10(ಆರ್‌ಕೆ)– ರೈಲ್ವೆ ಮೂಲ ಸೌಕರ್ಯ ಮತ್ತು ಏರ್‌ಪೋರ್ಟ್ ಆಪರೇಷನ್ಸ್ ನಡುವೆ ವಿದ್ಯುತ್ಕಾಂತೀಯ ಹಸ್ತಕ್ಷೇಪ ಕಡಿತಗೊಳಿಸಲು ಪ್ರವೇಶ ರಕ್ಷಾಕವಚ ಮಾದರಿಗೆ ಈ ಹಿಂದೆ ಸಂಸದರಾಗಿದ್ದ ಪ್ರತಾಪ್ ಸಿಂಹ ಸಲಹೆ ನೀಡಿದ್ದರು.

ಕಳೆದ ಕೆಲ ತಿಂಗಳ ಹಿಂದೆ ನಡೆದ ಮೈಸೂರು ವಿಭಾಗದ ಗತಿ ಶಕ್ತಿ ಸಭೆಯಲ್ಲಿ ಈ ಬಗ್ಗೆ ಚರ್ಚೆ ನಡೆಸಿದ್ದ ಅವರು, ಇಂಡಕ್ಷನ್ ಶೀಲ್ಡಿಂಗ್ ತಂತ್ರಜ್ಞಾನವನ್ನು ಚೆನ್ನೈ ಏರ್‌ಪೋರ್ಟ್ ಬಳಿ ಚೆನ್ನೈ ಮೆಟ್ರೋ ರೈಲ್ ಲಿಮಿಟೆಡ್ (ಸಿಎಂಆರ್‌ಎಲ್) ಯಶಸ್ವಿಯಾಗಿ ಅಳವಡಿಸಿಕೊಂಡಿರುವ ಬಗ್ಗೆ ವಿವರಿಸಿದ್ದರು.

ಡೆಲ್ಲಿ ಮೆಟ್ರೋ ರೈಲ್ ಕಾರ್ಪೊರೇಷನ್ (ಡಿಎಂಆರ್‌ಸಿ) ಸಹ ದೆಹಲಿ ಏರ್‌ಪೋರ್ಟ್‌ನ ಟರ್ಮಿನಲ್ 3 ಲೈನ್‌ಗಳಿಗೆ ರೇಡಿಯೇಷನ್ ಶೀಲ್ಡ್ ನಿರ್ಮಿಸಿದೆ. ಅಲ್ಲದೆ ಇಂಡಕ್ಷನ್ ಶೀಲ್ಡ್ ರಾಡಾರ್ ಮತ್ತು ಐಎಲ್‌ಎಸ್‌ನೊಂದಿಗೆ ಓವರ್‌ಹೆಡ್ ರೈಲ್ವೆ ಎಲೆಕ್ಟ್ರಿಸಿಟಿ ಕೇಬಲ್ ಮೇಲಿನ ಪರಿಣಾಮವನ್ನು ತಗ್ಗಿಸುತ್ತದೆ ಎಂದು ಅವರು ಅಭಿಪ್ರಾಯಿಸಿದ್ದರು.

ಮೈಸೂರು–ಕನಕಪುರ ನಡುವೆ ಎರಡನೇ

ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಸ್ಥಾಪನೆ ಸಾಧ್ಯತೆ

● ರಾಜ್ಯ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಮಾಹಿತಿ
● ಈಗಾಗಲೇ ಐದಾರು ಸ್ಥಳಗಳ ಪರಿಶೀಲನೆ ● ಹಾಲಿ ವಿಮಾನ ನಿಲ್ದಾಣಕ್ಕೆ 60–70 ಕಿಲೋಮೀಟರ್ ದೂರದಲ್ಲಿ ಎರಡನೇ ಏರ್‌ಪೋರ್ಟ್ ಸ್ಥಾಪನೆ ನಿರ್ಧಾರ ● ಜಪಾನ್, ದಕ್ಷಿಣ ಕೊರಿಯಾ ಉದ್ಯಮಿಗಳು 6450ಕೋಟಿ ಹೂಡಿಕೆ ಭರವಸೆ



ಎಂ.ಬಿ.ಪಾಟೀಲ್

ಬೆಂಗಳೂರು, ಜು. 10(ಕೆಎಂಶಿ)– ಮೈಸೂರು–ಕನಕಪುರ ನಡುವೆ 2ನೇ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಸ್ಥಾಪನೆಯಾಗುವ ಸಾಧ್ಯತೆ ಇದೆ.

ದೇವನಹಳ್ಳಿ ಸಮೀಪದ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಮೇಲೆ ಒತ್ತಡ ಹೆಚ್ಚಿರುವ ಹಿನ್ನೆಲೆಯಲ್ಲಿ ಬೆಂಗಳೂರು ದಕ್ಷಿಣ ಭಾಗದಲ್ಲಿ ಇನ್ನೊಂದು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಬರಲಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮೂಲಸೌಕರ್ಯ ಮತ್ತು ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್, ಹೊಸ ವಿಮಾನ ನಿಲ್ದಾಣ ಸ್ಥಾಪನೆಗೆ ಐದಾರು ಸ್ಥಳಗಳನ್ನು ಗುರುತಿಸಲಾಗಿದೆ. ಹಾಲಿ ವಿಮಾನ ನಿಲ್ದಾಣಕ್ಕೆ 60 ರಿಂದ 70 ಕಿಲೋ ಮೀಟರ್ ದೂರದಲ್ಲಿ ಹೊಸ ವಿಮಾನ ನಿಲ್ದಾಣ ಸ್ಥಾಪಿಸಲು ಸರ್ಕಾರ ಮುಂದಾಗಿದೆ ಎಂದರು. ಯಾವ ಸ್ಥಳ ಸೂಕ್ತ ಎಂಬ ಬಗ್ಗೆ ನಮಗೆ ಪ್ರಾಥಮಿಕ ವರದಿ ಸಿಕ್ಕಿದೆ. ಆದರೆ, ತಾಂತ್ರಿಕ ತಜ್ಞರನ್ನು ನೇಮಿಸಿ ಅವರಿಂದ ವರದಿ ಪಡೆದು ಚಾಲನೆ ನೀಡಲಾಗುವುದು.

ನಮ್ಮವರೇ ಕೇಂದ್ರದಲ್ಲಿ ಕೈಗಾರಿಕಾ ಸಚಿವರು ಇರುವುದರಿಂದ ಹೊಸ ವಿಮಾನ ನಿಲ್ದಾಣಕ್ಕೆ ತ್ವರಿತಗತಿಯಲ್ಲಿ ಅನುಮೋದನೆ ದೊರೆಯಬಹುದೆಂಬ ವಿಶ್ವಾಸ ವ್ಯಕ್ತಪಡಿಸಿದರು. ಆನೇಕಲ್‌ನ ಜಿಗಣಿ, ಕನಕಪುರ, ಮೈಸೂರು ರಸ್ತೆ, ತುಮಕೂರು ಸೇರಿದಂತೆ ಹಲವು ಸ್ಥಳಗಳನ್ನು ಗುರುತಿಸಿದ್ದೇವೆ. ಪ್ರಯಾಣಿಕರು ಹೆಚ್ಚು ಎಲ್ಲಿ ಲಭಿಸುತ್ತಾರೆ ಎಂಬುದಲ್ಲದೆ, ರಸ್ತೆ, ರೈಲು

■ 6ನೇ ಪುಟಕ್ಕೆ

ಉತ್ತಮ ಮಾರ್ಗದರ್ಶನದೊಂದಿಗೆ ಶಿಸ್ತಿನ ಅಧ್ಯಯನ ನಡೆಸಿದ್ದಲ್ಲಿ ಯಶಸ್ಸು ಸಾಧ್ಯ

ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕಿ ಎಂ.ಕೆ.ಸವಿತಾ ಕಿವಿಮಾತು





ಮೈಸೂರು ನಗರ ಕೇಂದ್ರ ಗ್ರಂಥಾಲಯದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುತ್ತಿರುವ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಸಾಮಾನ್ಯ ಜ್ಞಾನ ಮತ್ತು ಭೂಗೋಳ ಶಾಸ್ತ್ರಕ್ಕೆ ಸಂಬಂಧಿಸಿದಂತೆ ವಿಶೇಷ ಉಪನ್ಯಾಸದಲ್ಲಿ ಮೈಸೂರು ವಿಭಾಗದ ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕಿ ಎಂ.ಕೆ.ಸವಿತಾ ಮಾತನಾಡಿದರು.

ಮೈಸೂರು,ಜು.10–ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ಉತ್ತಮ ಮಾರ್ಗದರ್ಶನದೊಂದಿಗೆ ಶಿಸ್ತಿನ ಅಧ್ಯಯನ ನಡೆಸಿದಲ್ಲಿ ಯಶಸ್ಸು ಪಡೆಯುವುದು ಖಚಿತ ಎಂದು ಮೈಸೂರು ವಿಭಾಗದ ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕಿ ಎಂ.ಕೆ.ಸವಿತಾ ಹೇಳಿದರು.

ನಗರ ಕೇಂದ್ರ ಗ್ರಂಥಾಲಯದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುತ್ತಿರುವ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಸಾಮಾನ್ಯ ಜ್ಞಾನ ಮತ್ತು ಭೂಗೋಳ ಶಾಸ್ತ್ರಕ್ಕೆ ಸಂಬಂಧಿಸಿದಂತೆ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು.

ವಿದ್ಯಾರ್ಥಿಗಳು ವಿಶೇಷವಾಗಿ ದೈನಂದಿನ ಪತ್ರಿಕೆಗಳನ್ನು ಓದುವ ಹವ್ಯಾಸ ಹಾಗೂ ಕನ್ನಡ ಮತ್ತು ಇಂಗ್ಲೀಷ್ ವಾರ್ತೆಗಳನ್ನು ಹಾಗೂ ರೇಡಿಯೋದಲ್ಲಿ ಪ್ರಸಾರವಾಗುವ ವಿಶೇಷ ಕಾರ್ಯಕ್ರಮಗಳನ್ನು ಆಲಿಸುವುದರಿಂದ ತಮ್ಮ ಸಾಮಾನ್ಯಜ್ಞಾನ ಮಟ್ಟವನ್ನು ಹೆಚ್ಚಿಸಿಕೊಳ್ಳಬಹುದಾಗಿದೆ ಎಂದು ವಿದ್ಯಾರ್ಥಿಗಳಿಗೆ ಸಾಮಾನ್ಯ ಜ್ಞಾನದ ಅಧ್ಯಯನದ ಕುರಿತು ಅನೇಕ ಸಲಹೆ ಹಾಗೂ ಸೂಚನೆಗಳನ್ನು ನೀಡಿದರು.

ಕಾರ್ಯಕ್ರಮದಲ್ಲಿ ನಿವೃತ್ತ ವಾಣಿಜ್ಯ ತೆರಿಗೆ ಅಧಿಕಾರಿ ರಮೇಶ್ ನರಸಯ್ಯ, ಗ್ರಂಥಾಲಯದ ಸಿಬ್ಬಂದಿ ವರ್ಗದವರು ಹಾಗೂ 50ಕ್ಕೂ ಹೆಚ್ಚು ಸ್ಪರ್ಧಾತ್ಮಕ ಪರೀಕ್ಷಾ ಆಕಾಂಕ್ಷಿಗಳು ಹಾಜರಾಗಿದ್ದರು.

ಜು.13, ಸಾಧಕ ವೈದ್ಯರಿಗೆ ವೈದ್ಯಶ್ರೀ ಪ್ರಶಸ್ತಿ ಪ್ರದಾನ

ಮೈಸೂರು,ಜು.10–ಮೈಸೂರಿನ ಅನ್ವೇಷಣಾ ಸೇವಾ ಟ್ರಸ್ಟ್ ವತಿಯಿಂದ ವಿಶ್ವ ವೈದ್ಯರ ದಿನಾಚರಣೆ ಅಂಗವಾಗಿ ವೈದ್ಯಕೀಯ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ವೈದ್ಯರಿಗೆ ವೈದ್ಯಶ್ರೀ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಜು.13ರಂದು ಬೆಳಗ್ಗೆ 10.30ಕ್ಕೆ ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಕಾರ್ಯಕ್ರಮ ಉದ್ಘಾಟಿಸುವರು. ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆಯ ನಿರ್ದೇಶಕಿ ಡಾ.ಎಂ.ಪುಷ್ಪಾವತಿ ಅಧ್ಯಕ್ಷತೆ ವಹಿಸುವರು. ಮೈಸೂರು ವಿವಿ ಕುಲಪತಿ ಎನ್.ಕೆ.ಲೋಕನಾಥ್ ವೈದ್ಯ ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡುವರು.

ಚುಟುಕು ಯೋಗಾಚಾರ್ಯ ಡಾ.ಎಂ.ಜಿ.ಆರ್.ಅರಸ್, ಮೈಸೂರು ಮೆಡಿಕಲ್ ಕಾಲೇಜಿನ ವಿಶ್ರಾಂತ ಡೀನ್ ಡಾ.ಹೆಚ್.ಹನುಮಂತಪ್ಪ ಮತ್ತು ಅನ್ವೇಷಣಾ ಸೇವಾ ಟ್ರಸ್ಟಿನ ಸ್ಥಾಪಕ ಅಧ್ಯಕ್ಷ ಆರ್ಯ ಅಮರನಾಥರಾಜೇ ಅರಸ್ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಲಲಿತಕಲಾ ಅಕಾಡೆಮಿಗೆ ಡಿ.ಅಭಿಲಾಷ್ ನೇಮಕ

ಮೈಸೂರು, ಜು.10–ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ಲಲಿತಕಲಾ ಅಕಾಡೆಮಿಯ ಸದಸ್ಯರಾಗಿ ನಗರದ ರಾಜರಾಜೇಶ್ವರಿನಗರದ ನಿವಾಸಿ ಚಿತ್ರಕಲಾವಿದ ಡಿ. ಅಭಿಲಾಷ್ ಅವರನ್ನು ಸರ್ಕಾರದ ಆದೇಶದ ಮೇರೆಗೆ ನಾಮನಿರ್ದೇಶನ ಮಾಡಲಾಗಿದೆ ಎಂದು ಇಲಾಖೆಯ ಅಧೀನ ಕಾರ್ಯದರ್ಶಿ ಎಸ್.ಗೀತಾಬಾಯಿ ತಿಳಿಸಿದ್ದಾರೆ. ಮೂಲತಃ ಪಾಂಡವಪುರ ತಾಲೂಕಿನ ಡಿಂಕಾಶೆಟ್ಟಿಹಳ್ಳಿ ಗ್ರಾಮದವರಾದ ಡಿ.ಅಭಿಲಾಷ್ ಮೈಸೂರಿನಲ್ಲಿ ಚಿತ್ರಕಲಾ ಶಿಕ್ಷಣ ವಿದ್ಯಾಭ್ಯಾಸ ಮಾಡಿದ ಬಳಿಕ ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಉನ್ನತ ಪದವಿ ಪಡೆದಿದ್ದಾರೆ. ವಿಶ್ವವಿಖ್ಯಾತ ಮೈಸೂರು ದಸರಾದಲ್ಲಿ ವಿವಿಧ ಜಿಲ್ಲೆಗಳ ಸ್ತಬ್ಧಚಿತ್ರ ನಿರ್ಮಾಣ ಮಾಡಿ ಮೂರು ಬಾರಿ ಬಹುಮಾನ ಪಡೆದಿದ್ದಾರೆ. ಅಲ್ಲದೆ ಲಲಿತಕಲಾ ಕಲಾ ಅಕಾಡೆಮಿಯ ಪ್ರಶಸ್ತಿಗೂ ಭಾಜನರಾಗಿರುವ ಪ್ರತಿಭಾವಂತ ಕಲಾವಿದರಾಗಿದ್ದಾರೆ.



ಡಿ.ಅಭಿಲಾಷ್

ಮಂಡಿ ಮಾರುಕಟ್ಟೆಯಲ್ಲಿ ಡೆಂಗ್ಯೂ ಜಾಗೃತಿ

ಭಿತ್ತಿಪತ್ರ ಹಿಡಿದು ಜಾಗೃತಿ ಮೂಡಿಸಿದ ಪಾಲಿಕೆ ಆರೋಗ್ಯ ಅಧಿಕಾರಿ ಡಾ.ವೆಂಕಟೇಶ್



ಡೆಂಗ್ಯೂ ಜ್ವರ ಹೆಚ್ಚಳವಾಗುತ್ತಿರುವ ಹಿನ್ನೆಲೆಯಲ್ಲಿ ಮೈಸೂರಿನ ಮಂಡಿ ಮೊಹಲ್ಲಾದಲ್ಲಿರುವ ಮಾರುಕಟ್ಟೆಯಲ್ಲಿ ಗ್ರಾಹಕರು, ವ್ಯಾಪಾರಸ್ಥರು, ಅಂಗಡಿ ಮಾಲೀಕರಿಗೆ ಕರಪತ್ರ ನೀಡಿ, ಮುಂಜಾಗ್ರತಾ ಕ್ರಮಗಳ ಕುರಿತು ಜಾಗೃತಿ ಮೂಡಿಸಲಾಯಿತು.

ಮೈಸೂರು, ಜು.10–ರಾಜ್ಯಾದ್ಯಂತ ಡೆಂಗ್ಯೂ ಜ್ವರ ಹೆಚ್ಚಳವಾಗುತ್ತಿರುವ ಹಿನ್ನೆಲೆಯಲ್ಲಿ ಜೀವಧಾರ ರಕ್ತನಿಧಿ ಕೇಂದ್ರದ ವತಿಯಿಂದ ಮಂಡಿ ಮೊಹಲ್ಲಾದಲ್ಲಿರುವ ಮಾರುಕಟ್ಟೆಯಲ್ಲಿ ಗ್ರಾಹಕರು, ವ್ಯಾಪಾರಸ್ಥರು ಹಾಗೂ ಅಂಗಡಿ ಮಾಲೀಕರಿಗೆ ಕರಪತ್ರ ನೀಡಿ ಡೆಂಗ್ಯೂ ನಿಯಂತ್ರಣಕ್ಕೆ ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಕುರಿತು ಜಾಗೃತಿ ಮೂಡಿಸಲಾಯಿತು.

ಡೆಂಗ್ಯೂ ಜ್ವರದ ಬಗ್ಗೆ ಸಾರ್ವಜನಿಕರಲ್ಲಿ ಭಯ ಬೇಡ, ಜಾಗೃತಿ ಇರಲಿ. ಸುತ್ತಮುತ್ತ ಸ್ವಚ್ಛತೆ ಕಾಪಾಡಿಕೊಳ್ಳಬೇಕು, ನೀರು ನಿಲ್ಲದಂತೆ ಜಾಗೃತಿ ವಹಿಸಬೇಕು, ಸೊಳ್ಳೆಗಳಿಂದ ಹರಡುವ ಜ್ವರ ಇದಾಗಿರುವುದರಿಂದ, ಸೊಳ್ಳೆ ನಿಯಂತ್ರಣವೇ ಏಕೈಕ ಪರಿಹಾರ, ಇದಕ್ಕಾಗಿ ಪಾಲಿಕೆ ಫಾಗಿಂಗ್ ಮಾಡುತ್ತಿದ್ದು, ಸ್ವಚ್ಛತೆ ಕಾಪಾಡುವಲ್ಲಿ ನಮ್ಮ ಪೌರಕಾರ್ಮಿಕರು ಸಾಕಷ್ಟು ಶ್ರಮ ಪಡುತ್ತಿದ್ದಾರೆ. ಜೊತೆಗೆ ಸಾರ್ವಜನಿಕರು ಅವರ ಜೊತೆ ಕೈಜೋಡಿಸಿ ಸ್ವಚ್ಛತೆಗೆ ಪ್ರಮುಖ ಆದ್ಯತೆ ನೀಡಬೇಕು ಎಂದು ನಗರಪಾಲಿಕೆ ಆರೋಗ್ಯ ಅಧಿಕಾರಿ ವೆಂಕಟೇಶ್ ಹೇಳಿದರು.

ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್ ಮಾತನಾಡಿ, ಮನುಷ್ಯರಿಗೆ ಆರೋಗ್ಯ ಎಂಬುದು ಮುಖ್ಯವಾಗಿರುತ್ತದೆ. ಇತ್ತೀಚಿನ ದಿನಗಳಲ್ಲಿ ಹೊಸ ಹೊಸ ರೋಗಗಳು ಪತ್ತೆಯಾಗುತ್ತಿವೆ. ಇದರಲ್ಲಿ ಡೆಂಗ್ಯೂ ಜ್ವರವು ಸಹ ಒಂದಾಗಿದ್ದು, ಇದರ ಬಗ್ಗೆ ಪ್ರತಿಯೊಬ್ಬರು ಎಚ್ಚರಿಕೆ ವಹಿಸಬೇಕು.

ಡೆಂಗ್ಯೂ ನಿಯಂತ್ರಣ ಮಾಡುವುದು ನಮ್ಮೆಲ್ಲರ ಜವಾಬ್ದಾರಿ. ಪ್ರತಿಯೊಬ್ಬರೂ ಈಡೀಸ್ ಲಾರ್ವ ಉತ್ಪತ್ತಿ ತಾಣಗಳನ್ನು ನಾಶಪಡಿಸಿ, ಡೆಂಗ್ಯೂ ಜ್ವರ ಹರಡದಂತೆ ಮುಂಜಾಗ್ರತೆ ವಹಿಸಬೇಕೆಂದು ಮನವಿ ಮಾಡಿದರು. ಮಂಡಿ ಪೊಲೀಸ್ ಠಾಣೆಯ ಉಪನಿರೀಕ್ಷಕ ರಂಗಸ್ವಾಮಿ, ಕೇಬಲ್ ವಿಜಿ, ಗಣೇಶ, ರಾಜು, ಸಂತೋಷ್, ಸದಾಶಿವ, ಸೂರಜ್, ಕಣ್ಣನ್, ರಶ್ಮಿ, ಪ್ರಭು, ಮಹಾಂತೇಶ್ ಇನ್ನಿತರರು ಹಾಜರಿದ್ದರು.

ರಾಷ್ಟ್ರೀಯ ಸೇವಾ ಯೋಜನೆ ಚಟುವಟಿಕೆಗಳ ಉದ್ಘಾಟನೆ



ಮೈಸೂರಿನ ಮಂಚೇಗೌಡನಕೊಪ್ಪಲು ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಏರ್ಪಡಿಸಿದ್ದ ಕ್ರೀಡೆ, ಸಂಸ್ಕೃತಿ ಮತ್ತು ರಾಷ್ಟ್ರೀಯ ಸೇವಾ ಯೋಜನೆ ಚಟುವಟಿಕೆಗಳ ಉದ್ಘಾಟನೆ ಹಾಗೂ ಪ್ರಥಮ ಪಿಯುಸಿ ವಿದ್ಯಾರ್ಥಿಗಳ ಸ್ವಾಗತ ಸಮಾರಂಭವನ್ನು ಅಭಿವೃದ್ಧಿ ಸಮಿತಿ ಅಧ್ಯಕ್ಷರೂ ಆದ ಚಾಮರಾಜ ಕ್ಷೇತ್ರದ ಇಂದಿರಾ ಗಾಂಧಿ ಬ್ಲಾಕ್‌ನ ಅಧ್ಯಕ್ಷರಾದ ರವಿ ಮಂಚೇಗೌಡನಕೊಪ್ಪಲು ಉದ್ಘಾಟಿಸಿದರು. ಮಾಜಿ ಉಪ ಮಹಾಪೌರ ಮಹದೇವಪ್ಪ, ಕಾಲೇಜಿನ ಪ್ರಾಂಶುಪಾಲ ಶಿವಮಲ್ಲು, ಜೀವಶಾಸ್ತ್ರ ಉಪನ್ಯಾಸಕಿ ಶ್ರೀಮತಿ ಕಲ್ಪನಾ, ಇತರರು ಉಪಸ್ಥಿತರಿದ್ದರು. ಇದೇ ವೇಳೆ ಜೀವಶಾಸ್ತ್ರ ವಿಭಾಗದಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿನಿಗೆ 10,000 ರೂ. ನಗದು ಬಹುಮಾನ ನೀಡಲಾಯಿತು.

ಮುಡಾ ಹಗರಣ; ಸಿಎಂ ರಾಜೀನಾಮೆಗೆ ಆಗ್ರಹಿಸಿ ಮುಡಾ ಮುತ್ತಿಗೆ ಯತ್ನ

ಕೆಆರ್‌ಎಸ್ ಕಾರ್ಯಕರ್ತರ ಬಂಧನ, ಬಿಡುಗಡೆ



ಮುಡಾಗೆ ಮುತ್ತಿಗೆ ಹಾಕಲು ಯತ್ನಿಸಿದ ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಪಕ್ಷದ ಕಾರ್ಯಕರ್ತರನ್ನು ಪೊಲೀಸರು ಬಂಧಿಸಿದರು.

ಮೈಸೂರು, ಜು.10(ಜಿಎ)–ಮುಡಾ ಹಗರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಹೆಸರು ಕೇಳಿಬರುತ್ತಿರುವ ಹಿನ್ನೆಲೆಯಲ್ಲಿ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿ ಪ್ರತಿಭಟನಾ ಮೆರವಣಿಗೆ ನಡೆಸಿ ಮುಡಾ ಕಚೇರಿಗೆ ಮುತ್ತಿಗೆ ಹಾಕಲು ಮುಂದಾಗಿದ್ದ ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಪಕ್ಷದ ಕಾರ್ಯಕರ್ತರನ್ನು ಪೊಲೀಸರು ಬಂಧಿಸಿ, ಬಿಡುಗಡೆಗೊಳಿಸಿದರು.

ಗನ್‌ಹೌಸ್ ಬಳಿ ಜಮಾಯಿಸಿದ ಕಾರ್ಯಕರ್ತರು 'ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ನೀಡಿ', 'ಮುಡಾದ 50:50 ಹಗರಣದಲ್ಲಿ ಭಾಗಿಯಾದವರಿಗೆ ಶಿಕ್ಷೆಯಾಗಲಿ' ಇತ್ಯಾದಿ ಬರಹವುಳ್ಳ ಫಲಕ ಪ್ರದರ್ಶಿಸಿದರು. ಸರ್ಕಾರದ ವಿರುದ್ಧ ಘೋಷಣೆ ಕೂಗುತ್ತಾ ಮುಡಾ ಕಚೇರಿಗೆ ಮುತ್ತಿಗೆ ಹಾಕಲು ಪಾದಯಾತ್ರೆಯ ಮೂಲಕ ತೆರಳಿದರು. ಈ ವೇಳೆ ಪೊಲೀಸರು ಅವರನ್ನು ತಡೆದು ಬಂಧಿಸಿದರು.

ಇನ್ನೊಂದೆಡೆ ಬೇರೆ ಬೇರೆ ಕಡೆಯಿಂದ ಬಂದ ಪ್ರತಿಭಟನಾಕಾರರು ರೈಲ್ವೇ ನಿಲ್ದಾಣದ ಬಳಿ ಸೇರಿ ಮುಡಾ ಕಚೇರಿ ಕಡೆಗೆ ಹೆಜ್ಜೆ ಹಾಕಿದರು. ಘೋಷಣೆಗಳನ್ನು ಕೂಗುತ್ತಾ ಧಾವಿಸಿದರು. ರೋಟರಿ ಶಾಲೆಯ ಬಳಿಯ ವೃತ್ತದಲ್ಲಿ ಅವರನ್ನು ಪೊಲೀಸರು ತಡೆದರು. ಈ ವೇಳೆ ಪ್ರತಿಭಟನಾಕಾರರು ಹಾಗೂ ಪೊಲೀಸರ ನಡುವೆ ಮಾತಿನ ಚಕಮಕಿ ನಡೆಯಿತು. ಪ್ರತಿಭಟನಾಕಾರರು ಬ್ಯಾರಿಕೇಡ್ ದಾಟಿ ಮುನ್ನುಗ್ಗಲು ಯತ್ನಿಸಿದಾಗ ಅವರನ್ನೂ ಬಂಧಿಸಿ, ಕರೆದೊಯ್ದರು.

ಸಿದ್ದರಾಮಯ್ಯ 50:50 ಸಿಎಂ ಆಗಿದ್ದು, ಕೇವಲ ಮುಡಾದಲ್ಲಿ ಅಕ್ರಮವಾಗಿ 50:50 ಸೈಟ್ ಪಡೆಯದೆ ವಿರೋಧ ಪಕ್ಷಗಳೊಂದಿಗೆ 50:50 ಹೊಂದಾಣಿಕೆ ರಾಜಕೀಯವನ್ನೂ ಮಾಡುತ್ತಿದ್ದಾರೆ. ಅವರು ಸಾರ್ವಜನಿಕ ಜೀವನದಲ್ಲಿ ಮುಂದುವರೆಯಲು ಯಾವುದೇ ನೈತಿಕತೆ ಉಳಿಸಿಕೊಂಡಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಪಕ್ಷದ ರಾಜ್ಯಾಧ್ಯಕ್ಷ ರವಿ ಕೃಷ್ಣಾರೆಡ್ಡಿ ಮಾತನಾಡಿ, ಸೈಟ್‌ಗಳಾಗಿ ಮಾರಾಟವಾಗಿರುವ ಜಮೀನನ್ನು ಬೇನಾಮಿ ಮೂಲಕ ಕೊಂಡು, ದಾನಪತ್ರದ ಮೂಲಕ ಪತ್ನಿಯ ಹೆಸರಿಗೆ ವರ್ಗಾಯಿಸಿಕೊಂಡು, ಈಗ ಬಿಜೆಪಿಯವರು ಕೊಟ್ಟಿದ್ದಾರೆ, ನಾನು ತೆಗೆದುಕೊಂಡಿದ್ದೇನೆ ಎಂದು ನಿರ್ಲಜ್ಜೆಯಿಂದ ಮಾತನಾಡುತ್ತಿದ್ದಾರೆ. ಈ ಹಿಂದೆ ಅರ್ಕಾವತಿ ರೀಡೂ ಪ್ರಕರಣದಿಂದ ಪಾರಾಗಲು ಲೋಕಾಯುಕ್ತವನ್ನು ಮುಚ್ಚಿದ ಅಪಖ್ಯಾತಿ ಹೊಂದಿದ್ದಾರೆ. ಇವರನ್ನು ಮುಖ್ಯಮಂತ್ರಿಯಾಗಿ ಮಾಡಿ ಮತ್ತಷ್ಟು ಅಕ್ರಮಗಳನ್ನು ಮಾಡಲು ಕಾಂಗ್ರೆಸ್ ಪಕ್ಷ ಅವಕಾಶ ಮಾಡಿಕೊಟ್ಟಿದೆ ಎಂದು ಆರೋಪಿಸಿದರು.

ರಾಜ್ಯದ ಬಹುತೇಕ ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ಇದೇ ರೀತಿಯ ಅಕ್ರಮಗಳು, ಅವ್ಯವಹಾರಗಳು ನಡೆಯುತ್ತಿವೆ. ಲಕ್ಷಾಂತರ ಜನರು ನಿವೇಶನಕ್ಕಾಗಿ ಅರ್ಜಿ ಹಾಕಿಕೊಂಡು ಚಾತಕ ಪಕ್ಷಿಗಳಂತೆ ದಶಕಗಳ ಕಾಲ ಕಾಯುವ ಭಾಗ್ಯ ಹಾಗೂ ಗ್ಯಾರಂಟಿಗಳನ್ನು ನೀಡಿ ತಮಗೆ ಹಾಗೂ ತಮ್ಮ ಆಪ್ತರಿಗೆ ಮಾತ್ರ ಅಕ್ರಮವಾಗಿ ಸೈಟ್ ನೀಡಿ ಜನರನ್ನು ಮೂರ್ಖರನ್ನಾಗಿಸುತ್ತಿರುವ ಸಿದ್ದರಾಮಯ್ಯ ಅವರು ತಕ್ಷಣ ರಾಜೀನಾಮೆ ನೀಡಬೇಕೆಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ಪಕ್ಷದ ರಾಜ್ಯ ಉಪಾಧ್ಯಕ್ಷ ಎಸ್.ಎಚ್. ಲಿಂಗೇಗೌಡ, ಪ್ರಧಾನ ಕಾರ್ಯದರ್ಶಿ ಸಿ.ಎನ್. ದೀಪಕ್, ಕಾರ್ಯದರ್ಶಿ ರಘು ಜಾಣಗೆರೆ, ರಘುಪತಿ ಭಟ್, ವಿಜಯ ರಾಘವ ಮರಾತೆ, ಎಸ್.ಮಂಜುನಾಥ್, ಕೆ.ಎಸ್.ಸೋಮಸುಂದರ್, ಎಂ.ರವಿಕುಮಾರ್, ಎಚ್.ಎಂ.ಅರುಣ ಕುಮಾರ, ಮೈಸೂರು ಜಿಲ್ಲಾಧ್ಯಕ್ಷರಾದ ಸುಂದರ್ ಪ್ರೇಮ್ ಕುಮಾರ್ ಪಾಲ್ಗೊಂಡಿದ್ದರು.

ಡಾ.ಬಿ.ಸಿ.ರಾಯ್ ವ್ಯಕ್ತಿತ್ವ ಇಂದಿನ ವೈದ್ಯರಿಗೆ ಅನುಕರಣೀಯ

ವೈದ್ಯರ ದಿನಾಚರಣೆ ಕಾರ್ಯಕ್ರಮದಲ್ಲಿ ಡಾ.ಎಸ್.ಪಿ.ಯೋಗಣ್ಣ ಅಭಿಮತ



ಸುಯೋಗ್ ಆಸ್ಪತ್ರೆಯಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ವೈದ್ಯರ ದಿನಾಚರಣೆಯಲ್ಲಿ ಸುಯೋಗ್ ಆಸ್ಪತ್ರೆಯ ಸೂಪರಿಂಟೆಂಡೆಂಟ್ ಡಾ.ಪೊನ್ನಪ್ಪ, ಜೀರ್ಣಾಂಗ ಶಸ್ತ್ರಕ್ರಿಯಾ ತಜ್ಞರಾದ ಡಾ.ಶರತ್ ಕುಮಾರ್, ನರರೋಗ ತಜ್ಞರಾದ ಡಾ.ಶಶ್ವಾರ ಪನೆಯಾಲ ಅವರನ್ನು ಸನ್ಮಾನಿಸಲಾಯಿತು. ಚಿತ್ರದಲ್ಲಿ ಸುಯೋಗ್ ಆಸ್ಪತ್ರೆಯ ಅಧ್ಯಕ್ಷ ಡಾ. ಎಸ್.ಪಿ.ಯೋಗಣ್ಣ, ಟ್ರಸ್ಟಿ ಡಾ.ಸುಧಾ ಯೋಗಣ್ಣ, ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಡಾ.ಸುಯೋಗ್ ಯೋಗಣ್ಣ, ನಿರ್ದೇಶಕರುಗಳಾದ ಡಾ.ಯಶಿತಾ ರಾಜ್, ಜನರಲ್ ಮ್ಯಾನೇಜರ್ ಪಿ.ಜೆ.ಅರುಣ್ ಕುಮಾರ್ ಇದ್ದಾರೆ.

ಮೈಸೂರು, ಜು.10–ಇಂದಿನ ವೈದ್ಯರು ಡಾ.ಬಿ.ಸಿ.ರಾಯ್ ವ್ಯಕ್ತಿತ್ವವನ್ನು ಅನುಸರಿಸಬೇಕೆಂದು ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ ಕರೆ ನೀಡಿದರು.

ಸುಯೋಗ್ ಆಸ್ಪತ್ರೆಯು ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಆಯೋಜಿಸಲಾಗಿದ್ದ ರಾಷ್ಟ್ರೀಯ ವೈದ್ಯರ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಜುಲೈ 1 ಡಾ.ಬಿದನ್ ಚಂದ್ರ ರಾಯ್ ಅವರು ಹುಟ್ಟಿದ ದಿನವಾಗಿದ್ದು, ಅದನ್ನು ರಾಷ್ಟ್ರಾದ್ಯಂತ ರಾಷ್ಟ್ರೀಯ ವೈದ್ಯರ ದಿನವನ್ನಾಗಿ 1996ರಿಂದ ಆಚರಿಸಲಾಗುತ್ತಿದೆ. ಎಲ್ಲ ವೈದ್ಯರ ಸಲಹೆ ಮೇರೆಗೆ ಅಂದಿನ ಪ್ರಧಾನಮಂತ್ರಿಗಳಾಗಿದ್ದ ಪಿ.ವಿ.ನರಸಿಂಹ ರಾವ್ ಅವರು ಬಿ.ಸಿ.ರಾಯ್ ಹುಟ್ಟಿದ ದಿನವನ್ನು ರಾಷ್ಟ್ರೀಯ ವೈದ್ಯರ ದಿನವನ್ನಾಗಿ ಆಚರಿಸಲು ಕೇಂದ್ರ ಸರ್ಕಾರ ಆದೇಶ ನೀಡಿತು ಎಂದು ಅವರು ತಿಳಿಸಿದರು.

ಡಾ.ಬಿ.ಸಿ.ರಾಯ್ ಅವರು ಬಿಹಾರದಲ್ಲಿ ಜನಿಸಿ ಎಂಬಿಬಿಎಸ್ ಪದವಿ ಪಡೆದು ಇಂಗ್ಲೆಂಡ್‌ನಲ್ಲಿ ಉನ್ನತ ಶಿಕ್ಷಣವನ್ನು ಗಳಿಸಿ, ಭಾರತಕ್ಕೆ ಮರಳಿ ತಮ್ಮ ವೈದ್ಯಕೀಯ ಸೇವೆಯಲ್ಲದೆ ಸ್ವಾತಂತ್ರ್ಯ ಸಂಗ್ರಾಮದಲ್ಲೂ ಭಾಗವಹಿಸಿದ್ದ ಅಪ್ರತಿಮ ದೇಶಪ್ರೇಮಿ ವೈದ್ಯರಿವರು ಎಂದ ಅವರು, ವೈದ್ಯಕೀಯ ಕಾಲೇಜಿನ ಬೋಧಕರಾಗಿ, ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿ ಶಿಕ್ಷಣ ಕ್ಷೇತ್ರಕ್ಕೆ ಅಪ್ರತಿಮ ಸೇವೆ ಸಲ್ಲಿಸಿದ ಡಾ.ಬಿ.ಸಿ.ರಾಯ್ ತಮ್ಮ ಸಾಮಾಜಿಕ ಕಾಳಜಿಯಿಂದಾಗಿ ರಾಜಕೀಯಕ್ಕೆ ಬಂದು ಪಶ್ಚಿಮಬಂಗಾಳದ ಮುಖ್ಯಮಂತ್ರಿಗಳಾಗಿ ಹಲವಾರು ಸಾಮಾಜಿಕ ವ್ಯಾಧಿಗಳಿಗೆ ಚಿಕಿತ್ಸೆ ನೀಡಿದ ಸಾಮಾಜಿಕ ಕಳಕಳಿಯ ವೈದ್ಯರಿವರು ಎಂದು ಬಣ್ಣಿಸಿದರು.

ಮಾನವೀಯ ಅಂತಃಕರಣ, ಸಾಮಾಜಿಕ ಬದ್ಧತೆಯ ವೈದ್ಯರು ಇವರಾದುದರಿಂದ ಇವರು ಹುಟ್ಟಿದ ದಿನವನ್ನೇ ರಾಷ್ಟ್ರೀಯ ವೈದ್ಯರ ದಿನಾಚರಣೆಯನ್ನಾಗಿ ಘೋಷಿಸಲಾಯಿತು ಎಂದ ಡಾ.ಎಸ್.ಪಿ. ಯೋಗಣ್ಣ ಅವರು, ಆರೋಗ್ಯ ಕ್ಷೇತ್ರ ವಾಣಿಜ್ಯಮಯವಾಗುತ್ತಿರುವ ಈ ಸಂದರ್ಭದಲ್ಲಿ ಡಾ.ಬಿ.ಸಿ.ರಾಯ್ ಆರೋಗ್ಯ ಕ್ಷೇತ್ರಕ್ಕೆ ಅನುಕರಣೀಯ ವೈದ್ಯರೆಂದು ಕೊಂಡಾಡಿ ಇಂತಹ ವೈದ್ಯರುಗಳ ಸಂಖ್ಯೆ ಹೆಚ್ಚಾಗಲಿ ಎಂದು ಆಶಿಸಿದರು.

ಇದೇ ಸಂದರ್ಭ ಸುಯೋಗ್ ಆಸ್ಪತ್ರೆಯ ಸೂಪರಿಂಟೆಂಡೆಂಟ್ ಡಾ.ಪೊನ್ನಪ್ಪ, ಜೀರ್ಣಾಂಗ ಶಸ್ತ್ರಕ್ರಿಯಾ ತಜ್ಞರಾದ ಡಾ.ಶರತ್ ಕುಮಾರ್ ಮತ್ತು ನರರೋಗ ತಜ್ಞರಾದ ಡಾ.ಶಶ್ವಾರ ಪನೆಯಾಲ ಅವರನ್ನು ಸನ್ಮಾನಿಸಲಾಯಿತು.

ಸನ್ಮಾನಿತರ ಪರವಾಗಿ ಮಾತನಾಡಿದ ಡಾ.ಶಶ್ವಾರ ಪನೆಯಾಲ ಅವರು, ಸುಯೋಗ್ ಆಸ್ಪತ್ರೆಯು ಯುವ ವೈದ್ಯರಿಗೆ ಸೇವೆ ಮಾಡಲು ಅವಕಾಶ ಮಾಡಿಕೊಟ್ಟು ಅವರ ಬೆಳವಣಿಗೆಯಲ್ಲಿ ಮಹತ್ತರ ಪಾತ್ರ ವಹಿಸಿದೆ ಎಂದು ಶ್ಲಾಘಿಸಿದರು.


ಕಾರ್ಯಕ್ರಮದಲ್ಲಿ ಸುಯೋಗ್ ಆಸ್ಪತ್ರೆಯ ಜನರಲ್ ಮ್ಯಾನೇಜರ್ ಪಿ.ಜೆ.ಅರುಣ್ ಕುಮಾರ್ ಸ್ವಾಗತಿಸಿದರು. ಟ್ರಸ್ಟಿ ಡಾ.ಸುಧಾ ಯೋಗಣ್ಣ, ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕರಾದ ಡಾ. ಸುಯೋಗ್ ಯೋಗಣ್ಣ, ನಿರ್ದೇಶಕರುಗಳಾದ ಡಾ.ಯಶಿತಾರಾಜ್ ಹಾಗೂ ಜಿಲ್ಲಾದ್ಯಂತ ಹಲವಾರು ವೈದ್ಯರು ಉಪಸ್ಥಿತರಿದ್ದರು.

ಶೈಕ್ಷಣಿಕ ಸಮಸ್ಯೆ ಬಗೆಹರಿಸುವಂತೆ ಆಗ್ರಹಿಸಿ ಎಬಿವಿಪಿ ಪ್ರತಿಭಟನೆ

ಮೈಸೂರು, ಜು.10(ಜಿಎ)–ವಿದ್ಯಾರ್ಥಿಗಳ ಶೈಕ್ಷಣಿಕ ಸಮಸ್ಯೆ ಬಗೆಹರಿಸುವಂತೆ ಆಗ್ರಹಿಸಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಮೈಸೂರು ಘಟಕದ ವತಿಯಿಂದ ಜು.13 ಬೆಳಗ್ಗೆ 11 ಗಂಟೆಗೆ ನಗರದ ರಾಮಸ್ವಾಮಿ ವೃತ್ತದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ವಿಭಾಗೀಯ ಸಂಚಾಲಕ ಎಂ.ಶಿವು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಸ್ ಪಾಸ್ ಹಾಗೂ ಬಸ್ ಅವ್ಯವಸ್ಥೆಯಿಂದಾಗಿ ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಸಕಾಲಕ್ಕೆ ಶಾಲಾ ಕಾಲೇಜಿಗೆ ಹೋಗಲು ಸಾಧ್ಯವಾಗದೇ ಪರದಾಡುತ್ತಿದ್ದಾರೆ. ಸರ್ಕಾರದ ಸ್ತ್ರೀಶಕ್ತಿ ಯೋಜನೆ ಬಳಿಕ ಬಸ್ ಅವ್ಯವಸ್ಥೆ ಇನ್ನೂ ಹೆಚ್ಚಾಗಿದೆ ಎಂದರು. ಸಾಕಷ್ಟು ಸಂಖ್ಯೆಯಲ್ಲಿ ಬಸ್‌ಗಳಿಲ್ಲ. ರಾಜ್ಯದಲ್ಲಿ ಶಾಲಾ ಕಾಲೇಜು ಆರಂಭವಾದ ಮೂರು ತಿಂಗಳು ಕಳೆಯುವವರೆಗೂ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಪ್ರವೇಶ ಸಿಗದಂತಾಗಿದೆ. ಇದರಿಂದಾಗಿ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಹೆಚ್ಚು ಅನಾನುಕೂಲವಾಗಿದೆ ಎಂದು ಕಿಡಿಕಾರಿದರು. ರಾಜ್ಯ ಸರ್ಕಾರ ರಾಜ್ಯದ ಎಲ್ಲ ವಿವಿಗಳಲ್ಲಿ ಏಕರೂಪದ ವೇಳಾಪಟ್ಟಿ ಜಾರಿಗೊಳಿಸಬೇಕು. ಬಸ್ ಪಾಸ್, ಹಾಸ್ಟೆಲ್ ಸೌಲಭ್ಯ ಸಮರ್ಪಕವಾಗಿ ಸಕಾಲಕ್ಕೆ ಸಿಗಬೇಕು. ಹೀಗಾಗಿ ಈ ವಿಷಯಗಳಿಗೆ ಸಂಬಂಧಿಸಿದಂತೆ ಅಂದು ಪ್ರತಿಭಟನೆ ನಡೆಸಲಾಗುತ್ತಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಪ್ರಜ್ವಲ್, ವಿಶ್ವಾಸ್, ವಸಂತ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...




ಇಂದಿನ ಪಂಚಾಂಗ

11.07.2024 ಗುರುವಾರ, ಮಳೆ ನಕ್ಷತ್ರ : ಪುನರ್ವಸು 6.07.2024 ರಿಂದ 19.07.2024
ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಶುಕ್ಲ ಪಕ್ಷ,
ತಿಥಿ: ಪಂಚಮಿ, ನಕ್ಷತ್ರ: ಪುಬ್ಬ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಆಲ್ಕೋಹಾಲ್‌ನಿಂದ ಉಂಟಾಗುವ ಯಕೃತ್ತಿನ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.
- **ಜೆಎಸ್‌ಎಸ್ ಮಹಾ ವಿದ್ಯಾಪೀಠ, ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್:** ಗುಜರಾತ್ ಕರಕುಶಲ ಉತ್ಸವ–2024, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ವರ್ತುಲ ರಸ್ತೆ, ಬೆಳಗ್ಗೆ 10 ರಿಂದ.
- **ಸಹಾರ ಮಹಿಳಾ ಸ್ವ ಸಹಾಯ ಸಂಘ, ಸಹಾರ ಹ್ಯಾಂಡಿಕ್ರಾಫ್ಟ್, ಹ್ಯಾಂಡ್‌ಲೂಮ್ ಅಸೋಸಿಯೇಷನ್:** ಸಹಾರ ಆರ್ಟ್ ಅಂಡ್ ಕ್ರಾಫ್ಟ್ ಶಾಪಿಂಗ್ ಫೆಸ್ಟಿವೆಲ್–2024 ಪ್ರದರ್ಶನ ಮತ್ತು ಮಾರಾಟ, ಸ್ಥಳ: ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನ, ಹಳೇ ಜಿಲ್ಲಾಧಿಕಾರಿ ಕಚೇರಿ ಹಿಂಭಾಗ, ಬೆಳಗ್ಗೆ 10 ಗಂಟೆಯಿಂದ.
- **ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್ :** ಫೌಂಡೇಷನ್ ಮತ್ತು ಬಿವಿ.ಎ. ವಿದ್ಯಾರ್ಥಿಗಳಿಂದ ಮಂಡಲ ಚಿತ್ರಕಲಾ ಪ್ರದರ್ಶನ, ಸ್ಥಳ: ಶ್ರೀಕಲಾನಿಕೇತನ ಸ್ಕೂಲ್ ಆಫ್ ಆರ್ಟ್, ವಿಜಯನಗರ, ಬೆಳಗ್ಗೆ 10 ರಿಂದ.
- **ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್ :** ಅಕ್ಯೂಪ್ರೆಶರ್, ಸುಜೋಕ್, ಅಕ್ಯು ಡಿಜಿಟಲ್ ಫಿಶೀಯೋಥೆರಪಿ ಚಿಕಿತ್ಸಾ ಶಿಬಿರ, ಸ್ಥಳ: ಶ್ರೀ ಸಂಕಷ್ಟಹರ ಗಣಪತಿ ಸೇವಾ ಸಮಿತಿ ಆವರಣ, ಶ್ರೀರಾಂಪುರ 2ನೇ ಹಂತ, ಬೆಳಗ್ಗೆ 10.30 ರಿಂದ.
- **ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ :** ಶ್ರೀ ಗಿರಿಜಾ ಕಲ್ಯಾಣ ಮಹೋತ್ಸವ, ಪಂಚಮಿ ಗುರುವಾರ ಹಗಲು ರಾತ್ರಿ ಔಪಾಸನೆ, ಉಯ್ಯಾಲೋತ್ಸವ, ಸ್ಥಳ: ಕೋಟೆ ತ್ರಿನೇಶ್ವರ ದೇವಸ್ಥಾನ, ಅರಮನೆ ಆವರಣ.
- **ಭಾವಸಾರ ಕ್ಷತ್ರಿಯ ಶ್ರೀ ಚಾಮುಂಡೇಶ್ವರಿ ಸೇವಾ ಸಮಿತಿ :** 10ನೇ ವರ್ಷದ ಶ್ರೀ ಚಾಮುಂಡೇಶ್ವರಿ ಅಮ್ಮನವರ ಪೂಜಾ ಮಹೋತ್ಸವ, ಬೆಳಗ್ಗೆ 10.30ಕ್ಕೆ ಭದ್ರಾವತಿಯ ಆಕಾಶವಾಣಿ ಹಾಗೂ ದೂರದರ್ಶನ ಜನಪದ ಕಲಾವಿದ ಮತ್ತು ರಾಷ್ಟ್ರ ಪ್ರಶಸ್ತಿ ಪುರಸ್ಕೃತರಾದ ಮಹಾರಾಜ ಲಕ್ಷ್ಮಣರಾವ್ ಘೋರತ್ ಮತ್ತು ತಂಡದವರಿಂದ ಶ್ರೀ ಅಂಬಾ ಭವಾನಿ ದೇವಿಯ ಮಹಾಗೋಂದಳಿ ಪೂಜೆ, ಪ್ರಸಾದ ವಿನಿಯೋಗ, ಸಂಜೆ 5ಕ್ಕೆ ಅಮ್ಮನವರ ದೇವಿಯ ವಿಗ್ರಹವನ್ನು ಶ್ರೀರಂಗಪಟ್ಟಣದಲ್ಲಿರುವ ನಿಮಿಷಾಂಬ ದೇವಸ್ಥಾನದ ಬಳಿ ಇರುವ ಕಾವೇರಿ ನದಿಯಲ್ಲಿ ವಿಸರ್ಜನೆ, ಸ್ಥಳ: ಸೇವಾ ಸಮಿತಿ ಆವರಣ, ಕುವೆಂಪುನಗರ.
- **ಸ್ವರ್ವೇದ ಮಹಾಮಂದಿರ ಟ್ರಸ್ಟ್ ವಾರಣಾಸಿ (ಕಾಶಿ) :** ರಾಷ್ಟ್ರವ್ಯಾಪಿ ಸ್ವರ್ವೇದ ಸಂಕಲ್ಪ ಯಾತ್ರೆ, ಮುಖ್ಯ ಅತಿಥಿಗಳು : ಕೃಷಿ ವಿಜ್ಞಾನಿ ಡಾ. ವಸಂತಕುಮಾರ್ ತಿಮಕಾಪುರ, ಸಮಾಜ ಸೇವಕ ಡಾ. ರಘುರಾಂ ವಾಜಪೇಯಿ, ಯುವ ಮುಖಂಡ ಕವೀಶ್‌ಗೌಡ, ಡಾ. ಎಸ್.ಕೆ. ಮಿತ್ತಲ್, ಶ್ರೀಮತಿ ಹೆಚ್.ಎಲ್. ಯಮುನಾ, ಸ್ಥಳ: ಹೋಟೆಲ್ ದಿ ಪ್ರೆಸಿಡೆಂಟ್, ಬಿ.ಎನ್. ರೋಡ್, ಸಂಜೆ 5.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಸಂವಹನ–ಸಮಾಚಾರ, ಬಾನುಲಿ ಸರಣಿ, ಪ್ರಸ್ತುತಿ : ಅಲಕಾ ಕಟ್ಟೆಮನೆ, 6.40 ಅರಿವಿನ ಶಿಖರ : ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ : ಗೀತಾ. ವೈ.ಪುಟ್ಟಿ, ವ್ಯಾಖ್ಯಾನ : ಪ್ರೊಫೆಸರ್. ಮ. ವರದರಾಜು, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಬಿ. ಶ್ರೀರಾಮ್ ಭಟ್ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನೇರ ಫೋನ್ ಇನ್ ಕಾರ್ಯಕ್ರಮ–ಕಾಡಿನಲ್ಲಿನ ಕಥೆಗಳು. ಭಾಗವಹಿಸುವವರು : ಡಾ. ಕೆ. ಎನ್. ಬಸವರಾಜ್, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಮೈಸೂರು, ಪ್ರಸ್ತುತಿ : ಜಿ. ಶಾಂತಕುಮಾರ್

ಮಧ್ಯಾಹ್ನ: 12.30 ದೇವರನಾಮ–ರಕ್ಷಣಾ. ಆರ್, 12.45 ಚಟ್–ಪಟ್ ಚುರುಮುರಿ, ಪ್ರಸ್ತುತಿ: ಪ್ರಭುಸ್ವಾಮಿ ಮಳಿಮಠ್ ಹಾಗೂ ಕೆ.ಬಿ.ಮೀನಾ, 1.20 ಭಾವಗೀತೆಗಳು–ಶಿವಮೊಗ್ಗ ವೇಣುಗೋಪಾಲ್, 4.00 ಜನಪದ ಸಂಗೀತ, 4.30 ರಸಮಂಜರಿ, 6.10 ಸಂವಹನ ಸಮಾಚಾರ–ಬಾನುಲಿ ಸರಣಿ, ಪ್ರಸ್ತುತಿ: ಅಲಕಾ ಕಟ್ಟೆಮನೆ, 6.50 ಕೃಷಿರಂಗ–ಕಿಸಾನ್ ವಾಣಿ, ಪ್ರಾಯೋಜಕರು : ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ನಮ್ ಕಂಪನಿ–ರೈತ ಉತ್ಪಾದಕ ಸಂಸ್ಥೆಗಳ ಕುರಿತಾದ ಬಾನುಲಿ ಸರಣಿಯ ಉದ್ಘಾಟನಾ ಸಮಾರಂಭ ಕುರಿತು ಪೂರ್ವಭಾವಿ ಕಾರ್ಯಕ್ರಮ. ಭಾಗವಹಿಸುತ್ತಾರೆ : ಮೈಸೂರು ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥರಾದ ಡಾ. ಸ್ವಪ್ನಾ, ಸಿ.ಎಫ್.ಟಿ.ಆರ್.ಐ ಸಂಸ್ಥೆಯ ತಂತ್ರಜ್ಞಾನ ವರ್ಗಾವಣೆ ವಿಭಾಗದ ಹಿರಿಯ ತಾಂತ್ರಿಕ ಅಧಿಕಾರಿ ಡಾ. ಎಸ್. ವಿ. ರಾಘವೇಂದ್ರ ಹಾಗೂ ಮಂಡ್ಯದ ವಿಕಸನ ಸಂಸ್ಥೆಯ ನಿರ್ದೇಶಕರಾದ ಮಹೇಶ್ ಚಂದ್ರ ಗುರು. ಪ್ರಸ್ತುತಿ : ಎನ್. ಕೇಶವಮೂರ್ತಿ, 8.00 ಯುವವಾಣಿ : ಮೈಸೂರಿನ ವಿದ್ಯಾವರ್ಧಕ ಕಾನೂನು ವಿದ್ಯಾರ್ಥಿಗಳಿಂದ ಕಾರ್ಯಕ್ರಮ ವೈವಿಧ್ಯ. 8.30 ಹಿಂದಿ ಚಿತ್ರಗೀತೆಗಳು, 10.00 ನಾಟಕ : ತೆರೆಗಳು, ರಚನೆ: ಪಿ. ಲಂಕೇಶ್, ನಿರ್ದೇಶನ: ಕೆ. ಎನ್. ಚಂದ್ರಶೇಖರ್, 10.30 ಸವಿನೆನಪು

- **ನೂಪುರ ಕಲಾವಿದರು ಸಾಂಸ್ಕೃತಿಕ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ಮೈಸೂರು ನೃತ್ಯ ಗುರುಪರಂಪರಾ ಉತ್ಸವ, ಸಂಜೆ 6 ರಿಂದ ವಿದ್ವಾನ್ ಶ್ರೀ ರಾಮಕೃಷ್ಣ ಕೊಡಂಚ ಮತ್ತು ಶಿಷ್ಯ ವೃಂದದವರಿಂದ ನೃತ್ಯನಮನ, ನಟುವಾಂಗ : ವಿದ್ವಾನ್ ಶ್ರೀ ರಾಮಕೃಷ್ಣ ಕೊಡಂಚ, ಹಾಡುಗಾರಿಕೆ – ವಿದ್ವಾನ್ ಮಧೂರು ಬಾಲಸುಬ್ರಹ್ಮಣ್ಯ ಮತ್ತು ಶ್ರೀಮತಿ ಎಂ. ಜ್ಯೋತಿರಾವ್, ಮೃದಂಗ – ವಿದ್ವಾನ್ ಎಂ.ಆರ್. ಹನುಮಂತ ರಾಜು, ವಯೋಲಿನ್ : ವಿದ್ವಾನ್ ಹೆಚ್.ಎಸ್. ತಾಂಡವಮೂರ್ತಿ; ಸಂಜೆ 7.15ಕ್ಕೆ ವಿದುಷಿ ಶ್ರೀ ಲಕ್ಷ್ಮೀ ಕುಮಾರ್ ಮತ್ತು ಶಿಷ್ಯ ವೃಂದದವರಿಂದ ನೃತ್ಯ ನಮನ, ನಟುವಾಂಗ : ವಿದುಷಿ ಶ್ರೀ ಲಕ್ಷ್ಮೀ ಕುಮಾರ್, ಗಾಯನ : ವಿದುಷಿ ಶ್ರೀಮತಿ ಸಿ.ಎಸ್. ಲಕ್ಷ್ಮೀ, ಮೃದಂಗ : ವಿದ್ವಾನ್ ಎಂ.ಆರ್. ಹನುಮಂತರಾಜು, ವಯೋಲಿನ್ : ವಿದ್ವಾನ್ ಹೆಚ್.ಎಸ್. ತಾಂಡವಮೂರ್ತಿ, ಸ್ಥಳ: ಸಂಗೀತ ಕಲಾನಿಧಿ ಮೈಸೂರು ವಾಸುದೇವಾಚಾರ್ಯ ಭವನ, ಚಾಮುಂಡಿಪುರಂ.
- **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

ನಂಜನಗೂಡಿನಲ್ಲಿಂದು

- **ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಾಲಯ :** ಶ್ರೀ ಗಿರಿಜಾ ಕಲ್ಯಾಣ, ವರಪೂಜಾ ಮಹೋತ್ಸವ, ಬೆಳಗ್ಗೆ 9 ರಿಂದ ನಂಜನಗೂಡಿನ ಸುರಭಿ ಗಾನ ಸಂಘದಿಂದ ದೇವರನಾಮ, ಬೆಳಗ್ಗೆ 10ಕ್ಕೆ ಸುರೇಶ್, ದೇವರಸನಹಳ್ಳಿ ಅವರಿಂದ ಭಕ್ತಿಗೀತೆ, ಬೆಳಗ್ಗೆ 11.30 ರಿಂದ ಶ್ರೀ ಲಕ್ಷ್ಮೀದೇವಿ ಜನಪದ ಕಲಾವಿದರಿಂದ ಜಾನಪದ ಗೀತೆ, ಸಂಜೆ 4.30 ರಿಂದ ಯದುಕುಮಾರ್ ಅವರಿಂದ ಸ್ಯಾಕ್ಸೋಫೋನ್ ವಾದನ, ಸಂಜೆ 5.30 ರಿಂದ ಶ್ರೀಮತಿ ನೇತ್ರಾ ರಘುನಂದನ್ ಅವರಿಂದ ಭರತನಾಟ್ಯ, ರಾತ್ರಿ 7 ರಿಂದ ಶ್ರೀಮತಿ ವಿ. ಅನ್ನಪೂರ್ಣ, ವರಲಕ್ಷ್ಮಿ ಸುಗಮ ಸಂಗೀತ ಕಲಾವಿದರಿಂದ ಸುಗಮ ಸಂಗೀತ, ರಾತ್ರಿ 8.30 ರಿಂದ ಶ್ರೀಮತಿ ಸ್ಮಿತಾ ಶ್ರೀಪತಿ, ಅರ್ಥ ನೃತ್ಯ ಕಲಾ ಮಂದಿರದವರಿಂದ ಭರತನಾಟ್ಯ, ಸ್ಥಳ: ಶ್ರೀಕಂಠೇಶ್ವರ ದೇವಾಲಯ.

ಮೈಸೂರು ಮಿತ್ರ

ಕೆಆರ್ ಆಸ್ಪತ್ರೆ, ಚೆಲುವಾಂಬ ಆಸ್ಪತ್ರೆಗಳ ನವೀಕರಣ ಕಾಮಗಾರಿ ಪರಿಶೀಲನೆ

ಕಟ್ಟಡಗಳ ಪಾರಂಪರಿಕತೆ ಸಂರಕ್ಷಣೆಗಾಗಿ ಶೀಘ್ರದಲ್ಲಿ ತಜ್ಞರ ಅಭಿಪ್ರಾಯ ಸಂಗ್ರಹ

ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್





ಮೈಸೂರಿನ ಕೆಆರ್ ಆಸ್ಪತ್ರೆಯಲ್ಲಿ ಬುಧವಾರ ರೋಗಿಗಳ ಆರೋಗ್ಯ ವಿಚಾರಿಸಿದ ಸಂಸದ ಯದುವೀರ್, ಇದೇ ವೇಳೆ ಆಸ್ಪತ್ರೆಯ ನವೀಕರಣ ಕಾಮಗಾರಿ ಸಹ ಪರಿಶೀಲಿಸಿದರು.

ಮೈಸೂರು,ಜು.10(ಪಿಎಂ)– ಮೈಸೂರಿನ ಕೆಆರ್ ಆಸ್ಪತ್ರೆ ಹಾಗೂ ಚೆಲುವಾಂಬ ಆಸ್ಪತ್ರೆಯ ನವೀಕರಣ ಕಾಮಗಾರಿಯನ್ನು ಬುಧವಾರ ಪರಿಶೀಲಿಸಿದ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಆಸ್ಪತ್ರೆಗಳು ಪಾರಂಪರಿಕ ಕಟ್ಟಡಗಳಾಗಿದ್ದು, ನವೀಕರಣ ಕಾಮಗಾರಿ ಪಾರಂಪರಿಕತೆ ಸಂರಕ್ಷಣೆಗೆ ಪೂರಕವಾಗಿ ನಡೆಯುತ್ತಿದೆ. ಅದಾಗ್ಯೂ ಮತ್ತೊಮ್ಮೆ ಪಾರಂಪರಿಕ ತಜ್ಞರೊಂದಿಗೆ ಭೇಟಿ ನೀಡಿ ಪರಿಶೀಲಿಸಿ, ತಜ್ಞರ ಅಭಿಪ್ರಾಯ ಸಹ ಪಡೆಯುವುದಾಗಿ ತಿಳಿಸಿದರು.

ಪರಿಶೀಲನೆ ಬಳಿಕ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ಕೆಆರ್ ಆಸ್ಪತ್ರೆಯು ನಮ್ಮ ಮೈಸೂರಿನ ಐತಿಹಾಸಿಕ ಹಾಗೂ ಪ್ರಸಿದ್ಧ ತಾಣವಾಗಿದೆ. ಆಸ್ಪತ್ರೆ ಕಟ್ಟಡಗಳ ನವೀಕರಣ ಕಾಮಗಾರಿ ಪರಿಶೀಲಿಸುವ ಜೊತೆಗೆ ಡೆಂಗ್ಯೂ ಚಿಕಿತ್ಸೆ ಸಂಬಂಧ ಪರಿಶೀಲನೆ ನಡೆಸಲು ಕೆಆರ್ ಆಸ್ಪತ್ರೆಗೆ ಭೇಟಿ ನೀಡಿದ್ದೆ. ನಾನು ಪರಿಶೀಲಿಸಿದ ಮಟ್ಟಿಗೆ ಕಟ್ಟಡಗಳ ಪಾರಂಪರಿಕತೆ ಸಂರಕ್ಷಣೆಗೆ ಪೂರಕವಾಗಿ ಕಾಮಗಾರಿ ನಡೆಯುತ್ತಿದೆ. ನಮ್ಮ ಕಡೆಯಿಂದಲೂ ಪರಂಪರೆ, ವಾಸ್ತುಶಿಲ್ಪ ಸಂರಕ್ಷಣೆಗೆ ಪೂರಕವಾಗಿ ಅಗತ್ಯ ಸಹಕಾರ ನೀಡಲಾಗುವುದು ಎಂದರು.

ಡೆಂಗ್ಯೂ ವ್ಯಾಪಕವಾಗುತ್ತಿರುವ ಹಿನ್ನೆಲೆಯಲ್ಲಿ ಕ್ಷೇತ್ರ ವ್ಯಾಪ್ತಿಯಲ್ಲಿ ಆಸ್ಪತ್ರೆಗಳಿಗೆ ಭೇಟಿ ನೀಡಿ ಚಿಕಿತ್ಸೆ ಬಗ್ಗೆ ಪರಿಶೀಲನೆ ನಡೆಸುತ್ತಿದ್ದೇನೆ. ಕೆಆರ್ ಆಸ್ಪತ್ರೆಯಲ್ಲಿ ಡೆಂಗ್ಯೂ ಪ್ರಕರಣಗಳ ಸಂಬಂಧವೂ ಚಿಕಿತ್ಸೆ ಕೊಡುತ್ತಿದ್ದಾರೆ. ತ್ವರಿತಗತಿಯಲ್ಲಿ ಗುಣಮುಖವಾಗುವಂತೆ ಚಿಕಿತ್ಸೆ ನೀಡಲಾಗುತ್ತಿರುವುದನ್ನು ಇಲ್ಲಿ ಗಮನಿಸಿದ್ದೇನೆ ಎಂದು ತಿಳಿಸಿದರು. ಕಟ್ಟಡಗಳ ನವೀಕರಣ ಸಂಬಂಧ ತಾವು ಏನೇನು ಗಮನಿಸಿದ್ದೀರಿ. ತಮ್ಮ ಸಲಹೆ–ಸೂಚನೆ ಏನಾದರೂ ನೀಡಿದ್ದೀರಾ ಎಂಬುದಕ್ಕೆ ಪ್ರತಿಕ್ರಿಯಿಸಿದ ಅವರು, ಯಾವ್ಯಾವ ಸಾಮಗ್ರಿ ಉಪಯೋಗಿಸುತ್ತಿದ್ದಾರೆ ಎಂಬ ಬಗ್ಗೆ ಮಾಹಿತಿ ಪಡೆದಿದ್ದೇನೆ. ಅದೆಲ್ಲಾ ಸಮಾಧಾನವಿದ್ದು, ಪಾರಂಪರಿಕತೆ ರಕ್ಷಣೆಗೆ ಪೂರಕವಾಗಿ ಉತ್ತಮ ರೀತಿಯಲ್ಲಿ ಕೆಲಸ ನಡೆಯುತ್ತಿದೆ. ಆದರೆ ಇನ್ನು ಅನುಕೂಲಕರ ಸಾಮಗ್ರಿ ಉಪಯೋಗಿಸಬಹುದು ಎಂಬುದು ನನ್ನ ಅಭಿಪ್ರಾಯ. ಅದನ್ನು ತಜ್ಞರು ಖಾತ್ರಿಪಡಿಸಬೇಕು. ಹಾಗಾಗಿಯೇ ಪಾರಂಪರಿಕ ತಜ್ಞರೊಂದಿಗೆ ಮತ್ತೆ ಭೇಟಿ ನೀಡಲಿದ್ದೇನೆ ಎಂದು ಹೇಳಿದರು.

ಈ ಪಾರಂಪರಿಕ ಕಟ್ಟಡಗಳ ಪಾರಂಪರಿಕತೆ ದಾಖಲಿಸುವ ನಿಟ್ಟಿನಲ್ಲೂ ನಾವು ಕೆಲಸ ಮಾಡಬೇಕು. ಏಕೆಂದರೆ ಇದು ಮೈಸೂರಿನ ಪರಂಪರೆಯ ಆಸ್ತಿಯಾಗಿದೆ. ಜೊತೆಗೆ ಮೈಸೂರಿನ ಇತಿಹಾಸದ ಪ್ರತೀಕವಾಗಿದೆ. ಪಾರಂಪರಿಕ ಕಟ್ಟಡಗಳ ಸಂರಕ್ಷಣೆ ಮೂಲಕ ಅಂದಿನ ಆಡಳಿತ, ಜನಜೀವನದ ಚಿತ್ರಣ ಪ್ರತಿಬಿಂಬಿತವಾಗಲಿದೆ. ಉದಾಹರಣೆಗೆ ಕೆಆರ್ ಆಸ್ಪತ್ರೆಯು ಅಂದಿನ ಮೈಸೂರು ಸಂಸ್ಥಾನದಲ್ಲಿ ಸುವರ್ಣ ಯುಗದಲ್ಲಿ ನಿರ್ಮಾಣಗೊಂಡಿದೆ. ಇದರ ನಂತರ 2ನೇ ಜಾಗತಿಕ ಯುದ್ಧದ ಸಂದರ್ಭದಲ್ಲಿ ಚೆಲುವಾಂಬ ಆಸ್ಪತ್ರೆ ನಿರ್ಮಿಸಲಾಯಿತು. ಬಹಳ ಅದ್ಭುತ ಶೈಲಿಯಲ್ಲಿ ಇದು ನಿರ್ಮಾಣಗೊಂಡಿದೆ. ಯಾವ್ಯಾವ ಕಾಲಕ್ಕೆ ಯಾವ್ಯಾವ ಕಟ್ಟಡಗಳನ್ನು ನಿರ್ಮಿಸಲಾಯಿತು ಎಂದು ದಾಖಲಿಸಿ, ಅವುಗಳಿಂದ ಯಾವ ರೀತಿ ಜನತೆಗೆ ಅನುಕೂಲವಾಯಿತು ಎಂದು ದಾಖಲೆ ಮಾಡಬೇಕೆಂಬ ನಿಟ್ಟಿನಲ್ಲಿ ಸಲಹೆ ನೀಡಿದ್ದೇನೆ ಎಂದು ವಿವರಿಸಿದರು.

ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ (ಎಂಎಂಸಿ ಅಂಡ್ ಆರ್‌ಐ) ನಿರ್ದೇಶಕರು ಹಾಗೂ ಡೀನ್ ಡಾ.ಕೆ.ಆರ್. ದಾಕ್ಷಾಯಣಿ, ಮಾಜಿ ಡೀನ್ ಡಾ. ದಿನೇಶ್, ಕೆಆರ್ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕರಾದ ಡಾ.ಹೆಚ್.ಪಿ.ಶೋಭಾ, ಆರ್‌ಎಂಓ ಡಾ.ನಯಾಜ್ ಪಾಷಾ, ಚೆಲುವಾಂಬ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ.ರಾಜೇಂದ್ರ ಕುಮಾರ್, ಲೋಕೋಪಯೋಗಿ ಇಲಾಖೆ ಇಂಜಿನಿಯರ್ ದೊರೆಸ್ವಾಮಿ ಮತ್ತಿತರರು ಹಾಜರಿದ್ದರು.

ಕೆಆರ್ ಆಸ್ಪತ್ರೆಯಲ್ಲಿ ನಾಲ್ವರು, ಚೆಲುವಾಂಬ ಆಸ್ಪತ್ರೆಯಲ್ಲಿ 17 ಮಕ್ಕಳಿಗೆ ಡೆಂಗ್ಯೂ ಚಿಕಿತ್ಸೆ

ಎಲ್ಲರ ಆರೋಗ್ಯ ಸ್ಥಿರ; ಎಂಎಂಸಿ ಅಂಡ್ ಆರ್‌ಐ ನಿರ್ದೇಶಕಿ ಡಾ.ಕೆ.ಆರ್.ದಾಕ್ಷಾಯಣಿ ಮಾಹಿತಿ

ಮೈಸೂರು,ಜು.10(ಪಿಎಂ)–ಕೆಆರ್ ಆಸ್ಪತ್ರೆಯಲ್ಲಿ ನಾಲ್ವರು ಹಾಗೂ ಚೆಲುವಾಂಬ ಆಸ್ಪತ್ರೆಯಲ್ಲಿ 17 ಮಕ್ಕಳು ಡೆಂಗ್ಯೂ ಪಾಸಿಟಿವ್ ಹಿನ್ನೆಲೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಎಲ್ಲರ ಆರೋಗ್ಯ ಸ್ಥಿರವಾಗಿದ್ದು, ಯಾರಿಗೂ ಗಂಭೀರ ಅನಾರೋಗ್ಯ ಸಮಸ್ಯೆಗಳು ಉಂಟಾಗಿಲ್ಲ. ಡೆಂಗ್ಯೂ ಪ್ರಕರಣದಲ್ಲಿ ನಮ್ಮಲ್ಲಿ ಈವರೆಗೆ ಯಾವುದೇ ಸಾವು ಸಂಭವಿಸಿಲ್ಲ ಎಂದು ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ (ಎಂಎಂಸಿ ಅಂಡ್ ಆರ್‌ಐ) ನಿರ್ದೇಶಕರು ಹಾಗೂ ಡೀನ್ ಡಾ. ಕೆ.ಆರ್.ದಾಕ್ಷಾಯಣಿ ತಿಳಿಸಿದರು.

ಕೆಆರ್ ಆಸ್ಪತ್ರೆ ಹಾಗೂ ಚೆಲುವಾಂಬ ಆಸ್ಪತ್ರೆ ನವೀಕರಣ ಕಾಮಗಾರಿಯನ್ನು ಬುಧವಾರ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಪರಿಶೀಲಿಸಿ ನಿರ್ಗಮಿಸಿದ ಬಳಿಕ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ಡೆಂಗ್ಯೂ ಹಿನ್ನೆಲೆಯಲ್ಲಿ ಪ್ರತಿದಿನ 15ರಿಂದ 20 ಮಂದಿ ಆಸ್ಪತ್ರೆಗೆ ದಾಖಲಾಗುತ್ತಾರೆ.



ಅಂತೆಯೇ ಅಷ್ಟೇ ಸಂಖ್ಯೆಯಲ್ಲಿ ಬಿಡುಗಡೆ ಹೊಂದುತ್ತಿದ್ದಾರೆ. ಆದರೆ ಅಷ್ಟೂ ಮಂದಿಗೆ ಡೆಂಗ್ಯೂ ಪಾಸಿಟಿವ್ ಇರುವುದಿಲ್ಲ ಎಂದರು.

ಕೆಆರ್ ಆಸ್ಪತ್ರೆ ಡೆಂಗ್ಯೂ ವಾರ್ಡ್‌ನಲ್ಲಿ ಸದ್ಯಕ್ಕೆ 15 ಮಂದಿ ಚಿಕಿತ್ಸೆ ಪಡೆಯುತ್ತಿದ್ದು, ಈ ಪೈಕಿ 4 ಮಂದಿಗೆ ಮಾತ್ರ ಡೆಂಗ್ಯೂ ಪಾಸಿಟಿವ್ ಇದೆ. ಚೆಲುವಾಂಬ ಆಸ್ಪತ್ರೆಯಲ್ಲಿ ಸದ್ಯ 17 ಮಂದಿ ಡೆಂಗ್ಯೂ ಪಾಸಿಟಿವ್ ಇರುವವರು ಚಿಕಿತ್ಸೆ ಪಡೆಯುತ್ತಿದ್ದು, ಒಟ್ಟಾರೆ ಯಾರಿಗೂ ಗಂಭೀರ ಸಮಸ್ಯೆ ಇಲ್ಲ. ಎಲ್ಲರ ಆರೋಗ್ಯ ಸ್ಥಿರವಾಗಿದೆ. ಸಂಸದರು ಡೆಂಗ್ಯೂ ಸೋಂಕಿತರ ಚಿಕಿತ್ಸೆ ಬಗ್ಗೆಯೂ ಪರಿಶೀಲಿಸಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಜೆಕೆ ಮೈದಾನದ ಅಭಿವೃದ್ಧಿಗೆ ಡಿಪಿಆರ್: ಸಂಸದರು ನವೀಕರಣ ಕಾಮಗಾರಿ ವೀಕ್ಷಣೆಗೆ ಇಂದು ಭೇಟಿ ನೀಡಿದ್ದರು. ಕೆಆರ್ ಆಸ್ಪತ್ರೆಯಲ್ಲಿ ಐಪಿಡಿ, ಓಪಿಡಿ ಬ್ಲಾಕ್, ಐಸಿಯು ಬ್ಲಾಕ್, ಎಂಎಸ್‌ವಿ ಬ್ಲಾಕ್, ಅಡ್ಮಿನ್ ಬ್ಲಾಕ್ ಹಾಗೂ ರಕ್ತನಿಧಿ ಕೇಂದ್ರದ ನವೀಕರಣ ಕಾಮಗಾರಿ ನಡೆಯುತ್ತಿದೆ. ಅಂತೆಯೇ ಚೆಲುವಾಂಬ ಆಸ್ಪತ್ರೆಯಲ್ಲಿ ನಾಲ್ಕು ವಿಭಾಗಗಳ ನವೀಕರಣ ಕಾಮಗಾರಿ ನಡೆಯುತ್ತಿದೆ. ಈ ಎಲ್ಲವನ್ನೂ ಸಂಸದರು ಪರಿಶೀಲಿಸಿದರು. ಸಾರ್ವಜನಿಕರಿಗೂ ಪ್ರಯೋಜನಕ್ಕೆ ಬರುವ ಮಾದರಿಯಲ್ಲಿ ಜೆಕೆ ಮೈದಾನ ಅಭಿವೃದ್ಧಿಗೆ ಡಿಪಿಆರ್ ಸಿದ್ಧಪಡಿಸುವ ಬಗ್ಗೆ ಸಂಸದರು ತಿಳಿಸಿದ್ದಾರೆ. ಮುಂದಿನ ದಿನಗಳಲ್ಲಿ ಮೈಸೂರು ವೈದ್ಯಕೀಯ ಕಾಲೇಜು ಹಾಗೂ ಪಿಕೆಟಿಬಿ ಸ್ಯಾನಿಟೋರಿಯಂ ಆಸ್ಪತ್ರೆಗೆ ಭೇಟಿ ನೀಡುವುದಾಗಿ ಅವರು ಹೇಳಿದರು ಎಂದು ಡಾ.ಕೆ.ಆರ್.ದಾಕ್ಷಾಯಣಿ ತಿಳಿಸಿದರು.

ಸುಪ್ರೀಂಕೋರ್ಟ್ ವಿಶೇಷ ಲೋಕ ಅದಾಲತ್‌ನಲ್ಲಿ ಇತ್ಯರ್ಥಪಡಿಸುವ ಪ್ರಕರಣಗಳ ಪೂರ್ವಭಾವಿ ಸಭೆ



ಸುಪ್ರೀಂಕೋರ್ಟ್‌ನ ವಿಶೇಷ ಲೋಕ ಅದಾಲತ್‌ನಲ್ಲಿ ಮೈಸೂರು ಜಿಲ್ಲೆ ವ್ಯಾಪ್ತಿಯಲ್ಲಿ ಇತ್ಯರ್ಥಪಡಿಸಬಹುದಾದ ಪ್ರಕರಣಗಳ ಬಗ್ಗೆ ಹೈಕೋರ್ಟ್ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಪೂರ್ವಭಾವಿ ಸಭೆ ನಡೆಸಿದರು. ಸುಪ್ರೀಂಕೋರ್ಟ್‌ನ ಮೈಸೂರು ನ್ಯಾಯಾಂಗ ಘಟಕದ ಆಡಳಿತಾತ್ಮಕ ನ್ಯಾಯಮೂರ್ತಿ ಎಸ್.ಜಿ.ಪಂಡಿತ್ ಇನ್ನಿತರರಿದ್ದರು.

ಮೈಸೂರು, ಜು. 10– ಸುಪ್ರೀಂ ಕೋರ್ಟ್‌ನಲ್ಲಿ ಜು.29ರಿಂದ ಆ.3ರವರೆಗೆ ನಡೆಯಲಿರುವ ವಿಶೇಷ ಲೋಕ ಅದಾಲತ್‌ನಲ್ಲಿ ಮೈಸೂರು ಜಿಲ್ಲಾ ವ್ಯಾಪ್ತಿಗೆ ಒಳಪಟ್ಟಿರುವ ಪ್ರಕರಣಗಳ ಇತ್ಯರ್ಥಕ್ಕೆ ಪೂರ್ವಭಾವಿ ರಾಜೀ ಸಂಧಾನ ಕಾರ್ಯ ಬುಧವಾರ ನಡೆಯಿತು.

ಸುಪ್ರೀಂಕೋರ್ಟ್‌ನಲ್ಲಿ ವಿಚಾರಣೆಗೆ ಬಾಕಿ ಇರುವ 33 ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಇತ್ಯರ್ಥಪಡಿಸುವ ಸಂಬಂಧ ಮೈಸೂರಿನ ಮಳಲವಾಡಿಯಲ್ಲಿರುವ ಹೊಸ ನ್ಯಾಯಾಲಯಗಳ ಸಂಕೀರ್ಣದ ಕಟ್ಟಡದಲ್ಲಿ ನಡೆದ ಸಂಧಾನ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್.ವಿ. ಅಂಜಾರಿಯಾ ಮತ್ತು ಮೈಸೂರು ನ್ಯಾಯಾಂಗ ಘಟಕದ ಆಡಳಿತಾತ್ಮಕ ನ್ಯಾಯಮೂರ್ತಿ ಎಸ್.ಜಿ. ಪಂಡಿತ್ ಅವರುಗಳು ಪ್ರಕರಣಗಳನ್ನು ಇತ್ಯರ್ಥ ಪಡಿಸಿಕೊಂಡ ಕಕ್ಷಿದಾರರು ಹಾಗೂ ರಾಜೀ ಸಂಧಾನಕ್ಕೆ ಸಹಕರಿಸಿದ ವಕೀಲರಿಗೆ ಹೂಗುಚ್ಛ ನೀಡಿ ಅಭಿನಂದಿಸಿದರು.

ಇದೇ ವೇಳೆ ಮಾತನಾಡಿದ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳು ಜುಲೈ 13ರಂದು ನಡೆಯಲಿರುವ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ಹೆಚ್ಚಿನ ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಇತ್ಯರ್ಥಪಡಿಸಿಕೊಳ್ಳುವಂತೆ ಕರೆ ನೀಡಿದರು. ಈ ವೇಳೆ ಹೈಕೋರ್ಟ್ ಮಹಾ ಲೇಖನಾಧಿಕಾರಿಗಳಾದ ಕೆ.ಎಸ್. ಭರತ್‌ಕುಮಾರ್, ಮುಖ್ಯನ್ಯಾಯಮೂರ್ತಿಗಳ ಆಪ್ತ ಸಹಾಯಕ ರಾದ ಜೆ. ಸ್ವಾಮಿ, ಮೈಸೂರು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ರವೀಂದ್ರ ಹೆಗಡೆ ಸೇರಿದಂತೆ ಎಲ್ಲಾ ನ್ಯಾಯಾಧೀಶರು ಉಪಸ್ಥಿತರಿದ್ದರು.

3ನೇ ಟಿ–20 ಪಂದ್ಯ: ಜಿಂಬಾಬ್ವೆ ವಿರುದ್ಧ ಭಾರತಕ್ಕೆ 23 ರನ್‌ಗಳಿಂದ ಗೆಲುವು



ಹರಾರೆ: ಹರಾರೆಯ ಸ್ಪೋರ್ಟ್ಸ್ ಕ್ಲಬ್‌ನಲ್ಲಿ ಬುಧವಾರ ರಾತ್ರಿ ನಡೆದ 3ನೇ ಟಿ–20 ಅಂತಾರಾಷ್ಟ್ರೀಯ ಪಂದ್ಯದಲ್ಲಿ ಆತಿಥೇಯ ಜಿಂಬಾಬ್ವೆಯನ್ನು 23 ರನ್‌ಗಳಿಂದ ಸೋಲಿಸಿದ ಭಾರತ ಸರಣಿಯಲ್ಲಿ 2–1 ಮುನ್ನಡೆ ಪಡೆದಿದೆ.

ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಭಾರತ ನಿಗದಿತ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 182 ರನ್ ಗಳಿಸಿತು. ಆರಂಭಿಕ ಆಟಗಾರರಾದ ಯಶಸ್ವಿ ಜೈಸ್ವಾಲ್ 2 ಸಿಕ್ಸರ್, 4 ಬೌಂಡರಿಗಳೊಂದಿಗೆ 36 ರನ್ ಗಳಿಸಿದರೆ, ನಾಯಕ ಶುಭ್ ಮನ್ ಗಿಲ್ 3 ಸಿಕ್ಸರ್, 7 ಬೌಂಡರಿಗಳೊಂದಿಗೆ 66 ರನ್ ಕಲೆಹಾಕುವ ಮೂಲಕ ಉತ್ತಮ ಅಡಿಪಾಯ ಹಾಕಿದರು.

ಬಳಿಕ ಅಭಿಷೇಕ್ ಶರ್ಮಾ 10, ಋತುರಾಜ್ ಗಾಯಕ್ವಾಡ್ 3 ಸಿಕ್ಸರ್, 4 ಬೌಂಡರಿಗಳೊಂದಿಗೆ 28 ಎಸೆತಗಳಲ್ಲಿ 49 ರನ್ ಗಳಿಸಿ ಮುಜರಬಾನಿ ಬೌಲಿಂಗ್‌ನಲ್ಲಿ ವಿಕೆಟ್ ಒಪ್ಪಿಸಿದರು. ನಂತರ ಬಂದ ಸ್ಯಾಮ್ಸನ್ 12, ರಿಂಕು ಸಿಂಗ್ 1 ರನ್‌ಗಳೊಂದಿಗೆ ಭಾರತ 182 ರನ್ ಕಲೆಹಾಕಿತು.

ಭಾರತ ನೀಡಿದ 183 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ್ದ ಜಿಂಬಾಬ್ವೆ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 159 ರನ್ ಗಳಿಸಲಷ್ಟೇ ಶಕ್ತವಾಯಿತು. ಜಿಂಬಾಬ್ವೆ ಪರ ಡಿಯೋನ್ ಮೈಯರ್ಸ್ ಅಜೇಯ 65 ರನ್ ಗಳಿಸಿ ಕೊನೆವರೆಗೂ ಹೋರಾಟ ನಡೆಸಿದರು. ಆದರೆ, ಅವರಿಗೆ ಕ್ಲೈವ್ ಮದಂಡೆ (37) ಹೊರತುಪಡಿಸಿದರೆ ಉಳಿದ ಯಾವುದೇ ಆಟಗಾರರು ಉತ್ತಮ ಸಾಥ್ ನೀಡಲಿಲ್ಲ. ಹೀಗಾಗಿ ನಿಗದಿತ ಓವರ್ ಗಳಲ್ಲಿ 159 ರನ್ ಗಳಿಸುವ ಮೂಲಕ ಜಿಂಬಾಬ್ವೆ ಸೋಲಿಗೆ ಶರಣಾಯಿತು. ಭಾರತ ಪರ ವಾಷಿಂಗ್ಟನ್ ಸುಂದರ್ 3, ಅವೇಶ್ ಖಾನ್ 2, ಖಲೀಲ್ ಅಹ್ಮದ್ 1 ವಿಕೆಟ್ ಪಡೆದರು. ಈ ಮೂಲಕ ಭಾರತ ಐದು ಪಂದ್ಯಗಳ ಸರಣಿಯಲ್ಲಿ 2–1 ಅಂತರದೊಂದಿಗೆ ಮುನ್ನಡೆ ಕಾಯ್ದುಕೊಂಡಿದೆ.

ಯುವನಿಧಿ ಯೋಜನೆಗೆ ಸ್ವಯಂ ಘೋಷಣೆ ಕಡ್ಡಾಯ

ಮೈಸೂರು, ಜು.10– 2023ರ ಸಾಲಿನಲ್ಲಿ ತೇರ್ಗಡೆಯಾದಂತಹ ಅಭ್ಯರ್ಥಿಗಳಿಗೆ ಯುವನಿಧಿ ಕಾರ್ಯಕ್ರಮದ ಅಡಿಯಲ್ಲಿ ಪದವೀಧರರಿಗೆ ಮಾಸಿಕ ರೂ. 3000 ಹಾಗೂ ಡಿಪ್ಲೋಮಾದಾರರುಗಳಿಗೆ ಮಾಸಿಕ ರೂ.1500 ಗಳನ್ನು ಸರ್ಕಾರದ ವತಿಯಿಂದ ನೀಡುತ್ತಿದ್ದು, ಇದರ ಸದುಪಯೋಗವನ್ನು ಜಿಲ್ಲೆಯ ಅರ್ಹ ನಿರುದ್ಯೋಗ ಅಭ್ಯರ್ಥಿಗಳು ಪಡೆಯಬಹುದಾಗಿದೆ. ಯುವ ನಿಧಿ ಯೋಜನೆಗೆ ಅರ್ಜಿ ಸಲ್ಲಿಸಿ ಯೋಜನೆಯ ಹಣ ಪಡೆಯುತ್ತಿರುವ ಅಭ್ಯರ್ಥಿಗಳು ಯುವನಿಧಿ ಯೋಜನೆಯ ನಿರುದ್ಯೋಗ ಭತ್ಯೆ ಹಣ ಪಡೆಯಬೇಕಾದರೆ ಪ್ರತಿ ತಿಂಗಳು 25ನೇ ದಿನಾಂಕದೊಳಗೆ ಕರ್ನಾಟಕ ಸರ್ಕಾರದ ಸೇವಾ ಸಿಂಧು ವೆಬ್‌ಸೈಟ್ ಮೂಲಕ ಅಭ್ಯರ್ಥಿಗಳು ಸ್ವಯಂ ಘೋಷಣೆ ಮಾಡಿಕೊಳ್ಳುವುದು ಕಡ್ಡಾಯವಾಗಿರುತ್ತದೆ. ಅರ್ಜಿ ಸಲ್ಲಿಸುವವರು ಕಡ್ಡಾಯವಾಗಿ ಆಧಾರ್ ಜೋಡಣೆಯ ಬ್ಯಾಂಕ್ ಖಾತೆಯನ್ನು ಹೊಂದಿರಬೇಕು ಎಂದು ಜಿಲ್ಲಾ ನಿರ್ದೇಶಕಿ ಡಿ.ಎಂ.ರಾಣಿ ತಿಳಿಸಿದ್ದಾರೆ.

ಐಟಿಐ ಪ್ರವೇಶಾತಿಗೆ ಆಹ್ವಾನ

ಮೈಸೂರು, ಜು.10– ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಆಗಸ್ಟ್–2024ನೇ ಸಾಲಿನ ಆನ್‌ಲೈನ್ ಪ್ರವೇಶ ಪ್ರಕ್ರಿಯೆ ಪೂರ್ಣಗೊಂಡು ನಂತರ ವಿವಿಧ ವೃತ್ತಿಗಳಲ್ಲಿ ಉಳಿದಿರುವ 252 ಖಾಲಿ ಸ್ಥಾನಗಳಿಗೆ ಮೆರಿಟ್ ಆಧಾರದಲ್ಲಿ ಪ್ರವೇಶ ಪ್ರಾರಂಭಗೊಂಡಿರುತ್ತದೆ. ಐಟಿಐ ಸೇರಬಯಸುವ ಅಭ್ಯರ್ಥಿಗಳು ತಮ್ಮ ಮೂಲ ದಾಖಲಾತಿಗಳೊಂದಿಗೆ ನೇರವಾಗಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಎನ್.ಆರ್.ಮೊಹಲ್ಲಾ, ಮೈಸೂರು ಇಲ್ಲಿಗೆ ಹಾಜರಾಗಿ ಪ್ರವೇಶ ಪಡೆಯಬಹುದು.

ಮುಡಾ ಹಗರಣ ಸಿಬಿಐ ತನಿಖೆಗೆ ವಹಿಸಬೇಕು; ಸಿಎಂ ರಾಜೀನಾಮೆ ನೀಡಬೇಕು

● ರಾಜ್ಯ ಬಿಜೆಪಿ ಆಗ್ರಹ ● ನಾಳೆ ಮೈಸೂರಿನಲ್ಲಿ ಬೃಹತ್ ಪ್ರತಿಭಟನೆ ● ಮುಡಾ ಭೂಮಿ ಒತ್ತುವರಿ ಮಾಡಿ ಸುಳ್ಳು ದಾಖಲೆ ಸೃಷ್ಟಿಸಿ 3.16 ಎಕರೆ ಭೂಮಿ ಕಬಳಿಸಿರುವ ಆರೋಪ

ಬೆಂಗಳೂರು, ಜು. 10(ಕೆಎಂಶಿ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದ ನಿವೇಶನ ಹಂಚಿಕೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಅವರ ಪತ್ನಿ ಹೆಸರು ಕೇಳಿಬಂದಿರುವ ಹಿನ್ನೆಲೆಯಲ್ಲಿ ಹಗರಣವನ್ನು ಸಿಬಿಐ ತನಿಖೆಗೆ ವಹಿಸಬೇಕು ಹಾಗೂ ಮುಖ್ಯಮಂತ್ರಿ ರಾಜೀನಾಮೆ ನೀಡಬೇಕು ಎಂದು ರಾಜ್ಯ ಬಿಜೆಪಿ ಇಂದಿಲ್ಲಿ ಆಗ್ರಹಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹಾಗೂ ಡಾ.ಅಶ್ವತ್ಥ ನಾರಾಯಣ್ ಅವರು, ಮುಖ್ಯಮಂತ್ರಿ ರಾಜೀನಾಮೆಗೆ ಒತ್ತಾಯಿಸಿ ಇದೇ 12ರಂದು ಮೈಸೂರಿನಲ್ಲಿ ಬೃಹತ್ ಪ್ರತಿಭಟನೆ ನಡೆಸುವುದಾಗಿ ತಿಳಿಸಿದರು. ಅಭಿವೃದ್ಧಿ ಪ್ರಾಧಿಕಾರದ ವಶದಲ್ಲಿದ್ದ ಭೂಮಿ ಯನ್ನೇ ಒತ್ತುವರಿ ಮಾಡಿ ಸುಳ್ಳು ದಾಖಲೆ ಸೃಷ್ಟಿಸಿ, 3.16 ಎಕರೆ ಜಮೀನನ್ನು ತಮ್ಮದೆಂದು ಹೇಳಿಕೊಂಡಿದ್ದಾರೆ.

ಆರ್‌ಟಿಸಿ ಪ್ರಕಾರ ಕಳೆದ ಹಲವಾರು ವರ್ಷಗಳಿಂದ ಮುಡಾಗೆ ಸೇರಿದ ಭೂಮಿ ಎಂದೇ ನಮೂದಾಗಿದೆ, ಇಂತಹ ಭೂಮಿಯನ್ನು ಮೂರನೇ ವ್ಯಕ್ತಿಯಿಂದ ಮಲ್ಲಿಕಾರ್ಜುನಸ್ವಾಮಿ ಖರೀದಿ ಮಾಡಿ ತನ್ನ ಸಹೋದರಿಗೆ ನಂತರದ ದಿನಗಳಲ್ಲಿ ಅರಿಶಿನ–ಕುಂಕುಮ ವೇಳೆ ಉಡುಗೊರೆ ರೂಪದಲ್ಲಿ ನೀಡಿದ್ದಾರೆ.

ಸರ್ಕಾರಿ ಭೂಮಿ ಕಬಳಿಕೆ ಆರೋಪ: ಸರ್ಕಾರಿ ಭೂಮಿಯನ್ನೇ ಲಪಟಾಯಿಸಿ ನಂತರ ತಮ್ಮದೆಂದು ದಾಖಲೆ ಸೃಷ್ಟಿಸಿ, ಇದೀಗ ಅತ್ಯಂತ ಬೆಲೆ ಬಾಳುವ 14 ನಿವೇಶನಗಳನ್ನು ಸಿದ್ದರಾಮಯ್ಯ ಕುಟುಂಬ ಪಡೆದುಕೊಂಡಿದೆ ಎಂದು ಇದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಪತ್ರಿಕಾಗೋಷ್ಠಿಯಲ್ಲಿ ಬಹಿರಂಗಪಡಿಸಿದರು. 2022ರ ಜನವರಿ 12ರಂದು ಕ್ರಯಪತ್ರ ಆಗಿದ್ದು, ಮುಖ್ಯಮಂತ್ರಿ ಅವರ ಪತ್ನಿ ಪಾರ್ವತಮ್ಮ ಅವರಿಗೆ 1991ರ ಕಾನೂನು ಪ್ರಕಾರ 4,800 ಚದರಡಿ ಜಾಗ ಅಂದರೆ, 40X60ರ ಎರಡು ನಿವೇಶನಗಳನ್ನು ಮಾತ್ರ ಹಂಚಿಕೆ ಮಾಡಬೇಕಿತ್ತು. ಆದರೆ ಈಗ 14 ನಿವೇಶನಗಳನ್ನು ಹಂಚಿಕೆ ಮಾಡಿರುವುದು ಸಂಪೂರ್ಣ ಕಾನೂನುಬಾಹಿರ ಎಂದರು. 1992ರಲ್ಲೇ ಭೂಸ್ವಾಧೀನ ಆರಂಭವಾಗಿದೆ. 2004ರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಮ್ಮ ಅವರ ಅಣ್ಣ ಜಮೀನು ಖರೀದಿ ಮಾಡಿದ್ದಾರೆ. ಮುಡಾ ಸ್ವಾಧೀನದಲ್ಲಿದ್ದ ಜಾಗ ಮಲ್ಲಿಕಾರ್ಜುನ ಸ್ವಾಮಿ ಖರೀದಿ ಮಾಡಲು ಹೇಗೆ ಸಾಧ್ಯ? ಪಾರ್ವತಮ್ಮ ಅವರ ಸಹೋದರ ಮಲ್ಲಿಕಾರ್ಜುನಸ್ವಾಮಿ 2009–10ರಲ್ಲಿ ದಾನಪತ್ರ ಮಾಡಿದಾಗಲೂ ಈ ಜಾಗ ಮುಡಾ ಸ್ವಾಧೀನದಲ್ಲಿತ್ತು, ಭೂಪರಿವರ್ತನೆ ಸಹಾ ಆಗಿತ್ತು. ದಾನಪತ್ರ ಮಾಡುವಾಗಲೂ ಕೃಷಿ ಭೂಮಿ ಆಗಿರಲಿಲ್ಲ, ಇಲ್ಲೂ ತಪ್ಪು ಮಾಹಿತಿ ನೀಡಲಾಗಿದೆ. ಈ ಪ್ರಕರಣದಲ್ಲಿ ಸಿದ್ದರಾಮಯ್ಯ ಅವರು ಅನೇಕ ತಪ್ಪು ಮಾಹಿತಿ ನೀಡಿದ್ದಾರೆ. ಮುಖ್ಯಮಂತ್ರಿಗಳ ಮುಖವಾಡ ಕಳಚಿಬಿದ್ದಿದೆ. ಬೆಲೆಬಾಳುವ ನಿವೇಶನಗಳನ್ನು ಹೇಗಾದರೂ ಕಬಳಿಸಬೇಕೆಂಬ ಉದ್ದೇಶದಿಂದ ನಿಯಮ ಗಾಳಿಗೆ ತೂರಿ ಅಕ್ರಮ ನಡೆಸಲಾಗಿದೆ.

ಮೈಸೂರಿನ ಕೆಸರೆ ಗ್ರಾಮದ 3.16 ಎಕರೆ ಜಮೀನಿಗೆ ಬದಲಾಗಿ ತಮ್ಮ ಪತ್ನಿಗೆ 14 ನಿವೇಶನ ಮಂಜೂರು ಮಾಡಿಸಿಕೊಂಡಿದ್ದಾರೆ, ಮುಡಾದಿಂದ ಭೂಸ್ವಾಧೀನಕ್ಕೆ ಬದಲಾಗಿ ಕೇವಲ 18 ಕೋಟಿ ರೂ. ಮೌಲ್ಯದ ನಿವೇಶನಗಳು ಲಭಿಸಿವೆ, ನಿಯಮದ ಪ್ರಕಾರ 62 ಕೋಟಿ ರೂ. ಮೌಲ್ಯದ ನಿವೇಶನಗಳು ನೀಡಬೇಕಿತ್ತು ಎಂದು ಮುಖ್ಯಮಂತ್ರಿ ತಪ್ಪು ಮಾಹಿತಿ ಕೊಟ್ಟಿದ್ದಾರೆ.

ಸಿದ್ದರಾಮಯ್ಯ ಅವರು 2013ರ ತಮ್ಮ ಚುನಾವಣಾ ಪ್ರಮಾಣಪತ್ರದಲ್ಲಿ 3.16 ಎಕರೆ ಭೂಮಿ ಬಗ್ಗೆ ಉಲ್ಲೇಖಿಸಿಲ್ಲ, ಇದು ಚುನಾವಣೆ ನಿಯಮಗಳ ಉಲ್ಲಂಘನೆಯಾಗಿದ್ದು, ಚುನಾವಣಾ ಆಯೋಗಕ್ಕೆ ದೂರು ನೀಡಲಾಗುವುದು. ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ರಾಜ್ಯದ ಎಲ್ಲಾ ಬಡ ಹೆಣ್ಣು ಮಕ್ಕಳಿಗೆ ಪ್ರತಿ ತಿಂಗಳು 2 ಸಾವಿರ ರೂ. ಕೊಡುವುದಾಗಿ ಗ್ಯಾರಂಟಿಗಳ ವಾಗ್ದಾನ ಮಾಡಿದ್ದರು, ಆದರೆ, ತಮ್ಮ ಪತ್ನಿಗೆ 2 ಕೋಟಿ ರೂ. ಗಳಿಗೂ ಹೆಚ್ಚು ಮೌಲ್ಯದ 14 ನಿವೇಶನಗಳ ಭಾಗ್ಯ ಕೊಟ್ಟಿದ್ದಾರೆ, ಪತ್ನಿ ಹೆಸರಿನಲ್ಲಿ 64 ಕೋಟಿ ರೂ.ಗಳಿಗೂ ಹೆಚ್ಚು ಬೆಲೆಯ ನಿವೇಶನಗಳನ್ನು ಪಡೆದಿರುವ ಬಗ್ಗೆ ರಾಜ್ಯದ ಜನ ಪ್ರಶ್ನೆ ಮಾಡುತ್ತಿದ್ದು, ಮುಖ್ಯಮಂತ್ರಿ ಉತ್ತರ ನೀಡಬೇಕು, ಹಗರಣದ ಹೊಣೆ ಹೊರಬೇಕು. ಸಿದ್ದರಾಮಯ್ಯ ಅವರು ತಮ್ಮ ಆಡಳಿತಾವಧಿಯಲ್ಲೇ ಅವ್ಯವಹಾರ ನಡೆಸಿ, ತಾವೇ ಪರಿಹಾರ ಕೇಳಿರುವ ಮೊದಲ ಮುಖ್ಯಮಂತ್ರಿ ಎಂಬ ಕುಖ್ಯಾತಿಗೆ ಪಾತ್ರರಾಗಿದ್ದಾರೆ ಎಂದರು.

ಮುಡಾದಲ್ಲಿ 2 ಹಗರಣಗಳು ನಡೆದಿವೆ: ಮುಖ್ಯಮಂತ್ರಿ ಅವರ ಧರ್ಮಪತ್ನಿಗೆ ಹಂಚಿಕೆ ಮಾಡಿದ 14 ನಿವೇಶನ ಒಂದು ಪ್ರಕರಣವಾದರೆ, ಈ ಮಾಹಿತಿ ಬಹಿರಂಗವಾಗುತ್ತಿದ್ದಂತೆ ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್ ಅವರು ತರಾತುರಿಯಲ್ಲಿ ಮೈಸೂರಿಗೆ ಧಾವಿಸಿ ಮುಡಾ ಅಧಿಕಾರಿಗಳ ಸಭೆ ನಡೆಸಿ, ಮಾಹಿತಿ ಪಡೆದು ಎಲ್ಲ ಅಧಿಕಾರಿಗಳನ್ನೂ ಏಕಾಏಕಿ ವರ್ಗಾವಣೆ ಮಾಡಿರುವುದು ಇನ್ನೊಂದು ಹಗರಣವಾಗಿದೆ ಎಂದರು. ಮುಡಾ ಭ್ರಷ್ಟಾಚಾರ ಹಗರಣದ ತನಿಖೆ ನಡೆಸಿ ವರದಿ ನೀಡಿದ ಜಿಲ್ಲಾಧಿಕಾರಿಯನ್ನೂ ತರಾತುರಿಯಲ್ಲಿ ವರ್ಗಾವಣೆ ಮಾಡಲಾಗಿದೆ. ಸಚಿವ ಭೈರತಿ ಸುರೇಶ್, ಹಗರಣ ಮುಚ್ಚಿ ಹಾಕಲು ಎಲ್ಲಾ ಕಡತಗಳನ್ನು ಬೆಂಗಳೂರಿಗೆ ಒಯ್ದಿದ್ದಾರೆ ಎಂದು ಆರೋಪಿಸಿದರು.

ಒಟ್ಟಾರೆಯಾಗಿ ಮುಡಾದಲ್ಲಿ ಐದು ಸಾವಿರ ಕೋಟಿ ರೂ.ಗಳಿಗೂ ಹೆಚ್ಚು ಮೌಲ್ಯದ ನಿವೇಶನಗಳ ಅಕ್ರಮ ಹಂಚಿಕೆ ನಡೆದಿದೆ. ಹಗರಣದಲ್ಲಿ ಶಾಮೀಲಾದವರನ್ನು ಶಿಕ್ಷಿಸುವ ಬದಲು ರಕ್ಷಿಸಲು ಸಚಿವ ಭೈರತಿ ಸುರೇಶ್ ಮುಂದಾಗಿದ್ದಾರೆ.

ವಿವಾದಿತ ನಿವೇಶನ ಹಂಚಿಕೆ ರದ್ದು ಮಾಡಿ, ಅರ್ಹ ಬಡವರಿಗೆ ನಿವೇಶನ ಹಂಚಬೇಕು. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಅವರ ಪತ್ನಿ ಮೇಲೆ ಆರೋಪ ಇರುವ ಕಾರಣ ಮತ್ತೊಂದು ಎಸ್‌ಐಟಿ ಮಾಡಿ ತನಿಖೆ ನಡೆಸುವುದು ಸೂಕ್ತವಲ್ಲ, ಈ ಭಾರಿ ಮೊತ್ತದ ಹಗರಣದ ತನಿಖೆಯನ್ನು ತಕ್ಷಣವೇ ಸಿಬಿಐಗೆ ಕೊಡಬೇಕು.

ಮುಡಾ ಅವ್ಯವಹಾರಕ್ಕೆ ಸಂಬಂಧಿಸಿ ಜಿಲ್ಲಾಧಿಕಾರಿಗಳ ವರದಿ ಬಳಿಕವೂ 15–6–2024ರಲ್ಲಿ ಸುಮಾರು 42 ಸೈಟ್‌ಗಳನ್ನು ಒಬ್ಬರಿಗೆ ಬದಲಿಯಾಗಿ ಕೊಟ್ಟಿದ್ದಾರೆ. ಇಂಥ ಸಾವಿರಾರು ನಿವೇಶನಗಳನ್ನು ಸರ್ಕಾರ ಕಾನೂನುಬಾಹಿರವಾಗಿ ಕೊಟ್ಟಿದೆ, ಬಡವರು, ದಲಿತರು, ಪರಿಶಿಷ್ಟ ಸಮುದಾಯಕ್ಕೆ ಮೀಸಲಿಟ್ಟ ನಿವೇಶನಗಳನ್ನು ತಮಗೆ ಬೇಕಾದಂತೆ ಹಂಚಿಕೆ ಮಾಡಿದ್ದಾರೆ.

ಮುಡಾದಲ್ಲಿನ ಭೂಹಗರಣವನ್ನು ಪಕ್ಷ ಗಂಭೀರವಾಗಿ ಪರಿಗಣಿಸಿದ್ದು, ಬಿಜೆಪಿ ಜುಲೈ 12ರಂದು (ಶುಕ್ರವಾರ) ಮೈಸೂರಿನಲ್ಲಿ ಬಿಜೆಪಿ ಬೃಹತ್ ಪ್ರತಿಭಟನೆ ನಡೆಸಲಿದೆ, ವಿಧಾನಸಭೆಯಲ್ಲಿನ ವಿರೋಧಪಕ್ಷದ ನಾಯಕ ಆರ್.ಅಶೋಕ್, ಮಾಜಿ ಉಪಮುಖ್ಯಮಂತ್ರಿ ಡಾ.ಅಶ್ವತ್ಥನಾರಾಯಣ್, ಶಾಸಕರು, ಕಾರ್ಯಕರ್ತರು ಬೃಹತ್ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು.

ವಾಲ್ಮೀಕಿ ನಿಗಮದಲ್ಲಿ ದಲಿತರಿಗೆ ಮೀಸಲಿಟ್ಟ ಹಣವನ್ನು ಚುನಾವಣೆಗೆ ಬಳಸಿಕೊಂಡಿದ್ದಾರೆ, ಬಿಜೆಪಿ ಪ್ರತಿಭಟನೆಯಿಂದಾಗಿ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ದದ್ದಲ್ ಹಾಗೂ ನಾಗೇಂದ್ರ ಅವರನ್ನು ಎಸ್‌ಐಟಿ ವಿಚಾರಣೆಗೆ ಕರೆಯಿತು. ಎಸ್‌ಐಟಿ ನಿಧಾನವಾಗಿ ಕೆಲಸ ಮಾಡುತ್ತಿದೆ, ರಾಜ್ಯ ಸರ್ಕಾರ ಸಚಿವರು, ಶಾಸಕರ ರಕ್ಷಣೆಗೆ ಮುಂದಾಗಿತ್ತು, ಹಗರಣವನ್ನು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಸಿಬಿಐಗೆ ವಹಿಸಿದ ನಂತರ ಗಂಭೀರ ಸ್ವರೂಪ ಪಡೆದುಕೊಂಡಿದೆ ಎಂದರು.

ಉದೇಶಪೂರ್ವಕವಾಗಿ ಪತ್ನಿಯ ಆಸ್ತಿ ವಿವರ ಮರೆ ಮಾಚಿದ್ದಾರೆ

ಸಿದ್ದರಾಮಯ್ಯ ವಿರುದ್ಧ ಚುನಾವಣಾ ಆಯೋಗಕ್ಕೆ ದೂರು ನೀಡಿದ ಟಿಜೆ ಅಬ್ರಹಾಂ



ಅಬ್ರಹಾಂ

ನವದೆಹಲಿ: ಮುಖ್ಯಮಂತ್ರಿ ಸಿದ್ಧರಾಮಯ್ಯ ವಿರುದ್ಧ ಕೇಂದ್ರ ಚುನಾವಣಾ ಆಯೋಗಕ್ಕೆ ಸಾಮಾಜಿಕ ಕಾರ್ಯಕರ್ತ ಟಿಜೆ ಅಬ್ರಹಾಂ ದೂರು ನೀಡಿದ್ದಾರೆ. 2013ರ ವಿಧಾನಸಭಾ ಚುನಾವಣೆಯ ಅಫಿಡವಿಟ್‌ನಲ್ಲಿ ಪತ್ನಿ ಪಾರ್ವತಿ ಹೆಸರಿನಲ್ಲಿದ್ದ 3 ಎಕರೆ 16 ಗುಂಟೆ ಕೃಷಿ ಭೂಮಿಯ ವಿವರವನ್ನು ಬಹಿರಂಗ ಪಡಿಸಿಲ್ಲ ಎಂದು ಆರೋಪಿಸಿ ದೂರು ನೀಡಿದ್ದಾರೆ.

ಪಾರ್ವತಿ ಅವರ ಸಹೋದರ ಮಲ್ಲಿಕಾರ್ಜುನ ಸ್ವಾಮಿ 2010ರಲ್ಲಿ ಈ ಭೂಮಿಯನ್ನು ಗಿಫ್ಟ್ ಡೀಡ್ ಆಗಿ ನೋಂದಣಿ ಮಾಡಿದ್ದಾರೆ. ಈ ಭೂಮಿಯ ಮೂಲ ಮಾಲೀಕರು ದೇವರಾಜು ಮತ್ತು ಕುಟುಂಬಸ್ಥರು ಆಗಿದ್ದು ಆಗಸ್ಟ್ 25, 2004 ರಂದು ಮಲ್ಲಿಕಾರ್ಜುನ ಸ್ವಾಮಿ ಅವರಿಗೆ ಈ ಭೂಮಿಯನ್ನು ಮಾರಾಟ ಮಾಡಿದ್ದಾರೆ. ಈ ಅವಧಿಯಲ್ಲಿ ಸಿದ್ದರಾಮಯ್ಯನವರು ಜೆಡಿಎಸ್ ಪಕ್ಷದಲ್ಲಿದ್ದು ಕರ್ನಾಟಕ ಉಪ ಮುಖ್ಯಮಂತ್ರಿ ಹುದ್ದೆಯಲ್ಲಿದ್ದರು. ಸಹೋದರ ಪಾರ್ವತಿ ಅವರಿಗೆ ಗಿಫ್ಟ್ ಡೀಡ್ ಮಾಡುವ ಸಂದರ್ಭದಲ್ಲಿ ಸಿದ್ದರಾಮಯ್ಯನವರು ವರುಣಾ ಕ್ಷೇತ್ರದ ಶಾಸಕರು ಮತ್ತು ವಿಧಾನಸಭೆಯ ಪ್ರತಿಪಕ್ಷದ ನಾಯಕರಾಗಿದ್ದರು. ಅಚ್ಚರಿಯ ವಿಷಯ ಏನೆಂದರೆ ಮಾರ್ಚ್ 31, 2013ಕ್ಕೆ ಅಂತ್ಯಗೊಂಡ ಹಣಕಾಸು ವರ್ಷದ ವಾರ್ಷಿಕ ರಿಟರ್ನ್ ಲೋಕಾಯುಕ್ತಕ್ಕೆ ಸಲ್ಲಿಸುವ ಸಂದರ್ಭದಲ್ಲಿ ಸಿದ್ದರಾಮಯ್ಯನವರು ಪತ್ನಿ ಬಳಿ ಇದ್ದ ಭೂಮಿ ವಿವರವನ್ನು ಉಲ್ಲೇಖಿಸಿದ್ದಾರೆ. ಆದರೆ 2013ರ ಚುನಾವಣೆಯ ಅಫಿಡವಿಟ್ ಸಲ್ಲಿಸುವಾಗ ಈ ವಿಚಾರವನ್ನು ಉದ್ದೇಶಪೂರ್ವಕವಾಗಿ ಉಲ್ಲೇಖ ಮಾಡಿಲ್ಲ. ಕೃಷಿ ಭೂಮಿಯ ಬಗ್ಗೆಯ ಮಾಹಿತಿ ನೀಡದೇ ಸುಳ್ಳು ಅಫಿಡವಿಟ್ ಸಲ್ಲಿಸಿದ್ದು ಜನಪ್ರತಿ ನಿಧಿ ಕಾಯ್ದೆ ಸೆಕ್ಷನ್ 125 ಎ ಮತ್ತು ಸೆಕ್ಷನ್ 8 ಉಲ್ಲಂಘನೆ. ಸುಳ್ಳು ದಾಖಲೆ ಸಲ್ಲಿಸಿದ ಹಿನ್ನೆಲೆಯಲ್ಲಿ ಭಾರತೀಯ ನ್ಯಾಯ ಸಂಹಿತೆಯ 227, 229, 231, 236, 202 ಅಡಿಯಲ್ಲಿ ಕ್ರಮ ಕೈಗೊಳ್ಳಬೇಕೆಂದು ಟಿಜೆ ಅಬ್ರಹಾಂ ಮನವಿ ಮಾಡಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಟೀಚರ್ : (ಪಾಠ ಮಾಡುತ್ತ) ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೆ?

ವಿದ್ಯಾರ್ಥಿ : ಯಾಕಾಗಲ್ಲ ಟೀಚರ್? ಚಿಕ್ಕ ವಯಸ್ಸಿನಲ್ಲಿ ಬಗ್ಗದ ನಮ್ಮ ಅಜ್ಜ ಈಗ ತುಂಬಾ ಬಗ್ಗಿದ್ದಾರೆ!!

ಮೈಸೂರು ಮಿತ್ರ

ಗುರುವಾರ, 11 ಜುಲೈ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಇಡೀ ವಿಶ್ವವೇ ನಿನ್ನ ವಿರುದ್ಧ ನಿಂತರೂ ನೀನೊಬ್ಬನೇ ನಿಲ್ಲುವ ಧೈರ್ಯ ನಿನಗಿರಲಿ! ಜೈ ಶ್ರೀಕೃಷ್ಣ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬುದ್ಧಿ ಇದ್ದವನಲ್ಲಿ ಶ್ರದ್ಧೆ, ನಿದ್ದೆ ಬಾರದವನಲ್ಲಿ ವಿದ್ಯೆ

ನಿಮ್ಮ ಪತ್ರಗಳು

■ ಮೈಸೂರು ಪಾಲಿಕೆ ಅಧಿಕಾರಿಗಳ ಬೇಜವಾಬ್ದಾರಿ ಪರಮಾವಧಿ ಅಲ್ಲವೇ?

ಮಾನ್ಯರೆ,



ಮೈಸೂರಿನ ಯಾದವಗಿರಿ ಸಂಕಲ್ಪ ಅಪಾರ್ಟ್‌ಮೆಂಟ್ ಎದುರಿನ ಮುಖ್ಯ ರಸ್ತೆಯಲ್ಲಿ ಅಪಾರ್ಟ್‌ಮೆಂಟ್‌ವೊಂದರ ಯುಜಿಡಿಯೋ ಇಲ್ಲ ನೀರಿನ ಪೈಪ್ ಅಳವಡಿಕೆಗೆ ಇಲ್ಲಿ ವರ್ಷದ ಹಿಂದೆ ಹಳ್ಳ ತೋಡಲಾಯಿತು. ನಂತರ ಇದನ್ನು ಸರಿಯಾಗಿ ಮುಚ್ಚದೇ ಹಾಗೇ ತೇಪೆ ಹಚ್ಚಲಾಯಿತು. ಅದು ಮೂರೇ ದಿನದಲ್ಲಿ ಕಿತ್ತು ಬಂದಿತು. ಮತ್ತೆ ಜಲ್ಲಿ ತುಂಬಿ ಬಿಡಲಾಯಿತು. ಆ ಜಲ್ಲಿ ಕಲ್ಲು ರಸ್ತೆಯಲ್ಲೆಲ್ಲಾ ಹರಡಿ ವಾಹನ ಸವಾರರಿಗೆ ಬಡಿದು, ಚೆಲ್ಲಾಪಿಲ್ಲಿ ಆದವು. ಪ್ರತಿ ಎರಡು ತಿಂಗಳಿಗೊಮ್ಮೆ ಈ ಹಳ್ಳಕ್ಕೆ ಜಲ್ಲಿ ತುಂಬಿ, ಬೇಜವಾಬ್ದಾರಿ ಮೆರೆಯಲಾಯಿತು. ಕೊನೆಗೆ ಮಳೆ ಬಂದು ನೀರು ನಿಲ್ಲಲು ಶುರುವಾಯಿತು. ಮತ್ತೆ ಜಲ್ಲಿ ಸುರಿದು ಕೈತೊಳೆದುಕೊಳ್ಳಲಾಯಿತು. ಅಂತಿಮವಾಗಿ ಈಗ ಪುನಃ ಜಲ್ಲಿ ತುಂಬಲಾಗಿದ್ದು, ಆ ಕಲ್ಲುಗಳು ಸಿಡಿದು, ಈ ಮಾರ್ಗ ಹೋಗುವ ವಾಹನ ಸವಾರರಿಗೆ ಬಡಿಯುತ್ತಿವೆ. ಅರ್ಧಕ್ಕರ್ಧ ಜಲ್ಲಿಕಲ್ಲು ರಸ್ತೆಯ ಒಂದೆಡೆ ಶೇಖರಣೆ ಆಗಿದ್ದು, ಅಪಾಯಕಾರಿ ಸನ್ನಿವೇಶ ಸೃಷ್ಟಿಯಾಗಿದೆ. ನಗರಪಾಲಿಕೆಯ ಬೇಜವಾಬ್ದಾರಿಯಿಂದ ಇಂತಹ ಹೀನಾಯ ಪರಿಸ್ಥಿತಿ ನೆಲೆಸಿದೆ. ಕಾರ್ಪೊರೇಟರ್‌ಗಳಂತೂ ಇಲ್ಲ. ಶಾಸಕರು ಇತ್ತ ಗಮನ ಹರಿಸಿ ಸಂಬಂಧಿಸಿದ ಅಧಿಕಾರಿ ವರ್ಗಕ್ಕೆ ತಕ್ಕ ಶಾಸ್ತಿ ಮಾಡಿ, ಜನರಿಗೆ ಮಾರಕವಾಗಿರುವ ಈ ಹಳ್ಳವನ್ನು ಶಾಶ್ವತವಾಗಿ ಮುಚ್ಚಿಸುವರೇ?

– ರಾಮಚಂದ್ರ, ಬೃಂದಾವನ ಬಡಾವಣೆ, ಮೈಸೂರು

ಟಿಪ್ಪಣಿ: ಹಳ್ಳ ತೆಗೆಯುವುದಕ್ಕೆ ನಗರಪಾಲಿಕೆಗೆ ಹಣ ಕಟ್ಟಿ ಅನುಮತಿ ಪಡೆದಿರುತ್ತಾರೆ. ಹಾಗಾಗಿ ಪಾಲಿಕೆ ವತಿಯಿಂದಲೇ ಇಂತಹ ಹಳ್ಳಗಳನ್ನು ಮುಚ್ಚಬೇಕಾಗುತ್ತದೆ ಎಂದು ಇತ್ತೀಚೆಗೆ ಪಾಲಿಕೆ ಇಂಜಿನಿಯರ್ ಸಿಂಧು ಈ ವಿಚಾರವನ್ನು ಗಮನಕ್ಕೆ ತಂದ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದರು. ಆದರೆ, ಅದಕ್ಕೆ ಕಾಲಮಿತಿ ಇಲ್ಲ ಎಂಬುದು ಈಗ ನಮಗೆ ಮನವರಿಕೆ ಆಗುತ್ತಿದೆ. ಇದೇ ರೀತಿ ಹೆಬ್ಬಾಳಿನಲ್ಲಿ ಅಂಬರೀಶ್ ರಸ್ತೆಯಲ್ಲೂ ಎರಡು ಕಡೆ ಅಗೆದು ಹಳ್ಳ ಮಾಡಿ, ಮೂರು ದಿನಕ್ಕೊಮ್ಮೆ ಮಣ್ಣಾಕುತ್ತಿರುವುದರ ಬಗ್ಗೆಯೂ ಅವರ ಗಮನ ಸೆಳೆದಾಗ ಅದನ್ನೆಲ್ಲಾ ನಾವೇ ಮಾಡಬೇಕಾಗುತ್ತದೆ, ಮಾಡೋಣ ಎಂದು ಸಿಂಧು ಅವರು ಸಮಾಧಾನದ ಉತ್ತರ ನೀಡಿದ್ದರು. ಈಗ ಅರ್ಥವಾಗುತ್ತಿದೆ ನಗರ ಪಾಲಿಕೆಯವರು ನಾಗರಿಕರ ಸಮಸ್ಯೆ ನಿವಾರಣೆಗೆ ಕಾಲ ಮಿತಿ ಹಾಕಿಕೊಂಡಿಲ್ಲ ಎಂಬುದು!

■ ಚಾಮುಂಡಿಬೆಟ್ಟದ ಮೆಟ್ಟಿಲು ಮಾರ್ಗದಲ್ಲಿ ಬೆಳಕಿನ ಸೌಲಭ್ಯ ಕಲ್ಪಿಸಿ

ಮಾನ್ಯರೆ,

ಆಷಾಢಮಾಸವೆಂದರೆ ದೇವಸ್ಥಾನಗಳಲ್ಲಿ ಪೂಜೆ ಪುನಸ್ಕಾರಗಳನ್ನು ಆಸ್ತಿಕರು ಬಹು ಶ್ರದ್ಧೆಯಿಂದ ಆಚರಿಸುತ್ತಾರೆ. ಮೈಸೂರಿನಲ್ಲಿ ಪ್ರತಿ ಶುಕ್ರವಾರ ಚಾಮುಂಡೇಶ್ವರಿ ಭಕ್ತರು ಚಾಮುಂಡಿಬೆಟ್ಟದಲ್ಲಿ ಅಮ್ಮನವರ ಮುಂಜಾನೆಯ ಪೂಜೆಗೆ ಮಹತ್ವ ಕೊಡುತ್ತಾರೆ. ಅದರಲ್ಲೂ ಪ್ರತಿ ಶುಕ್ರವಾರ ಮುಂಜಾನೆ ನಾಲ್ಕು ಗಂಟೆಗೆ ಸಮರೋಪಾದಿಯಲ್ಲಿ ಬೆಟ್ಟ ಹತ್ತಿ ತಮ್ಮಗಳ ಹರಕೆ ತೀರಿಸುತ್ತಾರೆ. ಆದರೆ, ಕತ್ತಲಲ್ಲಿ ಬೆಟ್ಟ ಹತ್ತುವವರಿಗೆ ಬೆಳಕಿನ ಸೌಲಭ್ಯ ಇಲ್ಲ. ಅಲ್ಲದೆ, ಹಂತದ ಉದ್ದಕ್ಕೂ ಇರುವ ಲೈಟಿನ ಕಂಬಗಳಲ್ಲಿ ಬಲ್ಬ್‌ಗಳು ಉರಿಯುತ್ತಿಲ್ಲ. ಹೀಗಾಗಿ ಭಕ್ತಾದಿಗಳು ಕತ್ತಲಲ್ಲೇ ಬೆಟ್ಟ ಹತ್ತಬೇಕಾದ ಸಂದರ್ಭದಲ್ಲಿ ಅವಘಡಗಳು ಸಂಭವಿಸಬಹುದು. ಸರಗಳ್ಳರ ಭಯವೂ ಇದೆ. ಚಾಮುಂಡಿಬೆಟ್ಟದ ಪಂಚಾಯಿತಿಯವರು ಇದನ್ನೆಲ್ಲಾ ಮನಗಂಡು ತಕ್ಷಣವೇ ಇವೆಲ್ಲವನ್ನೂ ಕಲ್ಪಿಸಬೇಕಾದ ಅಗತ್ಯವಿದೆ. ಅಗತ್ಯವಾದ ಬೆಳಕಿನ ಸೌಲಭ್ಯ, ಅಲ್ಲಲ್ಲಿ ಪೊಲೀಸ್ ಆರಕ್ಷಕರನ್ನು ನಿಯೋಜಿಸುವುದರ ಮೂಲಕ ಭಕ್ತರಿಗೆ ನೆಮ್ಮದಿಯಿಂದ ದೇವಿಯ ದರ್ಶನಕ್ಕೆ ಅನುವು ಮಾಡಿಕೊಡಬೇಕೆಂದು ಮನವಿ.

–ಬ್ಯಾಂಕ್ ಶಿವಕುಮಾರ್, ಜೆ.ಪಿ.ನಗರ, ಮೈಸೂರು.

■ ಶಿಕ್ಷಕ ಪ್ರಶಸ್ತಿ: ಆಯ್ಕೆ ಮಾನದಂಡ ಬದಲಾಗಲಿ


ಮಾನ್ಯರೆ,

ಮಕ್ಕಳು ಮತ್ತು ಶಾಲೆಯ ಶ್ರೇಯೋಭಿವೃದ್ಧಿಗೆ ಶ್ರಮಿಸಿದ ಶಿಕ್ಷಕರಿಗೆ ಪ್ರತಿ ವರ್ಷ ಶಿಕ್ಷಕರ ದಿನಾಚರಣೆಯ ಸಂದರ್ಭದಲ್ಲಿ ತಾಲೂಕು, ಜಿಲ್ಲಾ, ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಉತ್ತಮ ಶಿಕ್ಷಕ ಪ್ರಶಸ್ತಿ ನೀಡಲಾಗುತ್ತದೆ. ಪ್ರಶಸ್ತಿಯು ಶಿಕ್ಷಕರ ಕಾರ್ಯದಕ್ಷತೆಯನ್ನು ಹೆಚ್ಚಿಸಬಹುದು. ಅಲ್ಲದೆ ಕಠಿಣ ಪರಿಶ್ರಮ, ಸಮರ್ಪಣೆ ಮತ್ತು ಶಿಕ್ಷಕ ವೃತ್ತಿಗೆ ನೀಡಿದ ಕೊಡುಗೆಗಳನ್ನು ಗುರುತಿಸಲು ಪ್ರಶಸ್ತಿಯು ಉತ್ತಮ ಮಾರ್ಗವಾಗಿದೆ. ಶಿಕ್ಷಕ ಪ್ರಯತ್ನಗಳು ಮತ್ತು ಸಾಧನೆಗಳನ್ನು ಇನ್ನಷ್ಟು ಬಿಗಿಗೊಳಿಸಿ ಅವರ ಆತ್ಮವಿಶ್ವಾಸವನ್ನು ಹೆಚ್ಚಿಸಿ, ವೃತ್ತಿಪರ ಬೆಳವಣಿಗೆ ಮತ್ತು ಗುರುತಿಸುವಿಕೆಗೆ ಅವಕಾಶಗಳನ್ನು ಒದಗಿಸಿ ಬೋಧನೆಯಲ್ಲಿ ಶ್ರೇಷ್ಠತೆಗಾಗಿ ಶ್ರಮಿಸಲು ಪ್ರಶಸ್ತಿಗಳು ಶಿಕ್ಷಕರನ್ನು ಪ್ರೇರೇಪಿಸುತ್ತವೆ.

ನಮ್ಮ ರಾಜ್ಯದ ಶಾಲಾ ಶಿಕ್ಷಣ ಇಲಾಖೆಯು 2024ನೇ ಸಾಲಿನ ರಾಷ್ಟ್ರ ಮಟ್ಟದ ಶಿಕ್ಷಕ ಪ್ರಶಸ್ತಿಗೆ ಅರ್ಜಿಗಳನ್ನು ಈಗಾಗಲೇ ಕರೆಯಲಾಗಿದೆ. ಅಗತ್ಯ ದಾಖಲೆಗಳ ಜೊತೆ ಅರ್ಜಿಗಳನ್ನು ಸಲ್ಲಿಕೆ ಮಾಡಲು ಅವಕಾಶ ಕಲ್ಪಿಸಲಾಗಿದೆ. ಅಂದರೆ ಶಿಕ್ಷಕರು ತಾವು ಪಡೆಯುವ ಪ್ರಶಸ್ತಿಗೆ ತಾವೇ ಅರ್ಜಿ ಸಲ್ಲಿಸಬೇಕಾಗಿದೆ. ಇದು ಬೇಸರದ ಸಂಗತಿ. ಈ ಪರಿಪಾಠ ತಪ್ಪಬೇಕು. ಸ್ವಾಭಿಮಾನಿಯಾಗಿರುವ ಶಿಕ್ಷಕ ತನಗೆ ಪ್ರಶಸ್ತಿ ಕೊಡಿ ಎಂದು ಕೇಳಲು ಮುಜುಗರಪಡಬಹುದು. ಶಿಕ್ಷಕ ತನ್ನ ವೃತ್ತಿ ಬದುಕಿನಲ್ಲಿ ರೂಢಿಸಿಕೊಂಡು ಬಂದಿರುವ ಪ್ರಾಮಾಣಿಕತೆ, ನಿಷ್ಠೆ ಹಾಗೂ ಕಾರ್ಯದಕ್ಷತೆಯನ್ನು ಶಿಕ್ಷಣ ಇಲಾಖೆಯೇ ಗುರುತಿಸಿ ಪ್ರಶಸ್ತಿ ನೀಡಿದರೆ ಉತ್ತಮ. ಅಲ್ಲದೆ ಎಷ್ಟೋ ಶಿಕ್ಷಕರು ಅರ್ಹತೆ ಇಲ್ಲದಿದ್ದರೂ ಪ್ರಶಸ್ತಿಗೆ ಅರ್ಜಿ ಸಲ್ಲಿಸಿ, ಪ್ರಭಾವಿ ರಾಜಕಾರಣಿಗಳ ಮೂಲಕ ಅಧಿಕಾರಿಗಳ ಮೇಲೆ ಒತ್ತಡ ಹೇರಿ ಪ್ರಶಸ್ತಿ ಪಡೆಯುವಂತಾಗುವುದು. ಹೀಗಾಗಿ ಶಿಕ್ಷಣ ಇಲಾಖೆಯು ಪ್ರಶಸ್ತಿಯ ಆಯ್ಕೆಯ ಮಾನದಂಡವನ್ನು ಬದಲಿಸಿ ಅರ್ಹ ಶಿಕ್ಷಕರಿಗೆ ಪ್ರಶಸ್ತಿಯು ದೊರಕುವಂತಾಗಲಿ.

–ಕೆ.ಎಸ್.ಸುರೇಶ್, ಮುಖ್ಯಶಿಕ್ಷಕರು, ಸರಗೂರು.

ಕಂಡ ಕಂಡವರು ಮುಡಾದಲ್ಲಿ ಮುಕ್ಕುವಾಗ ನೆನಪಾಗುತ್ತಾರೆ 'ಆಶಾಮಂದಿರ'ದ ಮಾದೇಗೌಡರು!



ಡಿ.ಮಾದೇಗೌಡರು

> " ಡಿ.ಮಾದೇಗೌಡರು ಈ ರಾಜ್ಯದ ಮಂತ್ರಿಯೋ, ಮುಖ್ಯಮಂತ್ರಿಯೋ ಆಗಿದ್ದರೆ ಕರ್ನಾಟಕ ರಾಜ್ಯದ ಬಡವರಿಗೆಲ್ಲ ಮನೆ ಕಟ್ಟಿಸಿಕೊಡುತ್ತಿದ್ದರು. ಬಹುಶಃ ಇಡೀ ರಾಜ್ಯದಲ್ಲೇ ಸೂರಿಲ್ಲದ ನಿರ್ಗತಿಕರೇ ಇರುತ್ತಿರಲಿಲ್ಲವೇನೋ. ಡಿ.ಮಾದೇಗೌಡರಿಗೆ ಬಡವರು, ನಿರಾಶ್ರಿತರ ಬಗ್ಗೆ ಎಷ್ಟು ಕಳಕಳಿ, ಅಂತಃಕರಣ ಇತ್ತೆಂದರೆ ಸ್ವಂತ ಮನೆ ಇಲ್ಲದೆ ಬಾಡಿಗೆ ಮನೆಯಲ್ಲಿ ವಾಸಿಸುವ ಬಡವರನ್ನು ಹುಡುಕಿಕೊಂಡು, ಅವರ ಮನೆ ಬಾಗಿಲಿಗೇ ಹೋದರು. ಹತ್ತಾರು ಯುವಕರ ತಂಡವನ್ನು ಕಟ್ಟಿಕೊಂಡು, ಪ್ರತಿಯೊಂದು ಮನೆಗೆ ಹೋಗಿ, ನಿಜವಾಗಿಯೂ ಅವರು ಬಾಡಿಗೆ ಮನೆಯಲ್ಲಿದ್ದಾರೋ, ಸ್ವಂತ ಮನೆ ಇದ್ದೂ, ಸುಳ್ಳು ಹೇಳಿ ನಿವೇಶನ ಪಡೆಯುವ ಹುನ್ನಾರ ನಡೆಸುತ್ತಿದ್ದಾರೋ ಎಂಬುದನ್ನು ತಿಳಿದು, ಹಂಚಿದ್ದರು.

ಇತ್ತೀಚಿನ ದಿನಗಳಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಹಗರಣಗಳನ್ನು ನೋಡುತ್ತಿದ್ದರೆ ಪರಮ ಅಸಹ್ಯವಾಗುತ್ತದೆ. ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ದೂರದೃಷ್ಟಿಯಿಂದ 25–11–1903ರಂದು ಸ್ಥಾಪಿತವಾದ ಮೈಸೂರು ನಗರ ನಗರಾಭಿವೃದ್ಧಿ ಸಮಿತಿ, ಮುಂದೆ ನಗರ ವಿಶ್ವಸ್ಥ ಮಂಡಳಿ (ಸಿಐಟಿಬಿ) ಯಾಗಿ, ಈಗ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವಾಗಿ ಪರಿವರ್ತಿತವಾಗಿದೆ. ಮೈಸೂರು ನಗರ ವ್ಯವಸ್ಥಿತವಾಗಿ ಬೆಳೆಯಬೇಕೆಂದು ರೂಪಿಸಿದ ಈ ಸಂಸ್ಥೆ ನಮ್ಮ ಹಿರಿಯರು ಆಶಿಸಿದಂತೆ ಬೆಳೆದಿದೆಯೇ ಎಂದು ಯೋಚಿಸಿದರೆ ಬಹಳ ನೋವಾಗುತ್ತದೆ. ವಿಶ್ವದ ಸುಂದರ ನಗರಗಳಲ್ಲಿ ಮೈಸೂರು ನಗರವೂ ಒಂದಾಗಿ ಬೆಳೆಯಲು ಕಾರಣವಾದ ಮೈಸೂರು ನಗರಾಭಿವೃದ್ಧಿ ಸಂಸ್ಥೆ ಇಂದು ಭ್ರಷ್ಟ ರಾಜಕಾರಣಿಗಳು ಮತ್ತು ಅಧಿಕಾರಿಗಳಿಂದ ಹಾಳಾಗಿ ಹೋಗಿರುವುದು ಶೋಚನೀಯ ಸಂಗತಿ.

ಇಂದು ಈ ದೇಶ ಹಾಳಾಗುತ್ತಿರುವುದು ನಾಯಕರಿಂದಲ್ಲ, ಜನರಿಂದ ಅನ್ನೋದು ಈಗ ಎಲ್ಲರಿಗೂ ಮನದಟ್ಟಾಗಿ ಹೋಗಿದೆ. ಇತ್ತೀಚೆಗೆ ನಡೆಯುತ್ತಿರುವ ಚುನಾವಣೆಗಳು, ಇದರಲ್ಲಿ ಹರಿಯುವ ಹಣ–ಹೆಂಡದ ಹೊಳೆ, ಇದರೊಳಗೆ ಮುಳುಗೇಳಲು ಮುಗಿಬೀಳುವ ಮೂರ್ಖ ಮತದಾರರನ್ನು ಕಂಡಾಗ ಒಳ್ಳೆ ಜನನಾಯಕರೇಕೆ ರಾಜಕೀಯವಾಗಿ ಮೂಲೆಗುಂಪಾದರು ಎಂಬುದು ಎಂಥವರಿಗೂ ಅರ್ಥವಾಗುತ್ತದೆ. ಜಾತಿ–ಧರ್ಮ–ಹಣ–ಹೆಂಡಕ್ಕೆ ಮತ ಮಾರಿಕೊಳ್ಳುವ ಜನರಿಗೆ ತಮ್ಮ ಒಂದು ಮತ ತಮ್ಮದೇ ಹಣೆಬರಹ ಬದಲಿಸಬಹುದು ಅನ್ನೋ ಪರಿಜ್ಞಾನವೇ ಇಲ್ಲ. ಮತದಾರರು ಜಾತಿ–ಹಣ–ಪಕ್ಷ ನೋಡದೆ ಯೋಗ್ಯರನ್ನು ಆರಿಸಿದ್ದರೆ, ದೇಶಾನೂ ಉದ್ಧಾರ ಆಗ್ತಿತ್ತು–ಜನರೂ ಏಳ್ಗೆ ಆಗುತ್ತಿದ್ದರು. ಆದರೆ, ಬುದ್ಧಿಗೇಡಿ ಜನ ಎಂಜಲು ಕಾಸಿಗೆ ಮತ ಮಾರಿಕೊಂಡು, ತಾವೂ ಹಾಳಾಗಿದ್ದಲ್ಲದೆ ದೇಶವನ್ನೂ ಹಾಳು ಮಾಡುತ್ತಿದ್ದಾರೆ.

'ರಾಜಾ ಪ್ರತ್ಯಕ್ಷ ದೇವತಾ' ಅನ್ನೋ ಮಾತಿದೆ. ನಮಗೆ ಕಾಣುವ ರಾಜನೇ ದೇವರು. ಆತನಿಂದ ಉದ್ಧಾರ ಆಗಬಹುದೇ ಹೊರತು, ಕಾಣದ ದೇವರಿಂದ ಉದ್ಧಾರ ಆಗುತ್ತೇವೆ ಅನ್ನೋದು ಪೆದ್ದುತನ. ಕಾಣದ ದೇವರಿಗಾಗಿ ಜನ ನಿತ್ಯ ಗುಡಿ–ಗೋಪುರಗಳಿಗೆ ಮಳೆ–ಬಿಸಿಲೆನ್ನದೆ, ನೂಕು ನುಗ್ಗಲಿನಲ್ಲಿ ಸರದಿ ಸಾಲಿನಲ್ಲಿ ನಿಲ್ಲುತ್ತಾರೆ. ಆದರೆ, ಜನರ ಹಣೆಬರಹ ಬರೆಯೋ ಮತಗಟ್ಟೆ ಮುಂದೆ ಜನ ಹೀಗೆ ಸರದಿ ಸಾಲಲ್ಲಿ ನಿಲ್ಲಲ್ಲ. ಜನರ ಉದ್ಧಾರ ಮಾಡೋದು ದೇವರಲ್ಲ, ನಾವು ಆರಿಸುವ ಯೋಗ್ಯ ಅಭ್ಯರ್ಥಿ. ನಮ್ಮ ಆಳುವ ನಾಯಕ ಒಳ್ಳೆಯವನಾದರೆ, ನಮಗೂ ಒಳ್ಳೆಯದಾಗುತ್ತೆ. ಕೆಟ್ಟ ನಾಯಕನನ್ನು ಆರಿಸಿದರೆ, ನಮಗೂ ಕೆಟ್ಟದ್ದೇ ಆಗುತ್ತೆ ಅನ್ನೋ ಕನಿಷ್ಠ ಪರಿಜ್ಞಾನವೂ ನಮ್ಮ ಜನರಲ್ಲಿಲ್ಲ.

ಭಾರತದ ಪ್ರಜಾಪ್ರಭುತ್ವದ ದುರಂತ ಎಂದರೆ; ಜನರ ಉದ್ಧಾರ ಮಾಡ್ತೀನಂತಾ ಹೋದ ಪ್ರಾಮಾಣಿಕ ನಾಯಕರೆಲ್ಲ ಅಧಿಕಾರದಿಂದ ದೂರವಾಗುತ್ತಿದ್ದಾರೆ. ತಾವು ಮಾತ್ರ ಉದ್ಧಾರವಾಗಬೇಕು ಅನ್ನೋ ಭ್ರಷ್ಟರು–ಸ್ವಾರ್ಥಿಗಳು ಮಾತ್ರ ಅಧಿಕಾರದಲ್ಲಿ ಮೆರೆಯುತ್ತಿದ್ದಾರೆ. ಇದಕ್ಕೆ ನಮ್ಮ ಕಣ್ಣ ಮುಂದಿನ ಘಟನೆಗಳನ್ನೇ ಉದಾಹರಿಸಿ ಹೇಳುವುದಾದರೆ, 37 ವರ್ಷಗಳ ಹಿಂದೆ ಕುಂಬಾರಕೊಪ್ಪಲಿನ ಡಿ.ಮಾದೇಗೌಡರು ಮನೆ ಇಲ್ಲದವರ ಬಳಿ ಹೋಗಿ 'ಆಶಾಮಂದಿರ' ಯೋಜನೆ ಅಡಿ 26 ಸಾವಿರ ನಿವೇಶನ ಮತ್ತು 12 ಸಾವಿರ ಕಟ್ಟಿದ ಮನೆ ಕೊಟ್ಟರು. ಅದೂ ಕೇವಲ ರೂ.1850 ಕಡಿಮೆ ಬೆಲೆಗೆ 20X30 ಅಳತೆಯ ನಿವೇಶನ ಕೊಟ್ಟರು. ಇಷ್ಟು ಕಡಿಮೆ ಬೆಲೆಯ ನಿವೇಶನ ಕೊಳ್ಳಲು ಬಡ ಜನ ಕಷ್ಟಪಡುತ್ತಿರುವುದನ್ನು ಕಂಡು, ಇವರು ನಿವೇಶನ ಕೊಂಡರೂ, ಸಾವಿರಾರು ರೂಪಾಯಿ ಖರ್ಚು ಮಾಡಿ ಮನೆ ಕಟ್ಟಿಕೊಳ್ಳಲು ಸಾಧ್ಯವೇ? ಅಂತ ಯೋಚಿಸಿ 'ಹುಡ್ಕೋ' ನೆರವಿನಿಂದ ತಾವೇ ಮನೆ ಕಟ್ಟಿಸಿಕೊಟ್ಟರು. ಎಂಥ ಕಡು ಬಡವನೂ ಸುಲಭವಾಗಿ ತಿಂಗಳ ಕಂತಿನ ಮೂಲಕ ಹಣ ಕಟ್ಟಿ, ಸ್ವಂತ ಮನೆ ಹೊಂದುವ ಸುವರ್ಣಾವಕಾಶ ಕಲ್ಪಿಸಿದರು. ಹುಟ್ಟಿನಿಂದ ಸ್ವಂತ ಮನೆ ಇಲ್ಲದೆ ಬಾಡಿಗೆ ಮನೆಗಳಲ್ಲೇ ವಾಸಿಸುತ್ತಿದ್ದ ಬಡವರು, ಒಂದು ಸಣ್ಣ ಮನೆ ಕೊಳ್ಳುತ್ತೇವೆಂಬ ಕನಸು ಸಹ ಕಾಣದವರು, ಡಿ.ಮಾದೇಗೌಡರ ಆಶಾಮಂದಿರ ಯೋಜನೆಯಿಂದ ಸ್ವಂತ ಮನೆಯ ಒಡೆಯರಾದರು. ಇಂಥ ಜನೋಪಕಾರಿ ಡಿ.ಮಾದೇಗೌಡರಿಗೆ ಜನ ಕೊಟ್ಟ ಕೊಡುಗೆ ಏನು? ಯಾವ ಚುನಾವಣೆಯಲ್ಲೂ ಗೆಲ್ಲದಂತೆ ರಾಜಕೀಯವಾಗಿ ಮೂಲೆಗುಂಪು ಮಾಡಿದರು.

ಈಗಿನ ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ವನ್ನು 1988ರ ಹಿಂದಿನವರೆಗೂ ನಗರ ವಿಶ್ವಸ್ಥ ಮಂಡಳಿ (ಸಿಐಟಿಬಿ) ಎಂದು ಕರೆಯಲಾಗುತ್ತಿತ್ತು. 1986ರ ಸೆಪ್ಟೆಂಬರ್‌ನಲ್ಲಿ ಸಿಐಟಿಬಿ ಅಧ್ಯಕ್ಷ ಸ್ಥಾನವನ್ನು ಡಿ.ಮಾದೇಗೌಡರು ಪಡೆದಾಗ ಆರ್ಥಿಕವಾಗಿ ಸುಸ್ಥಿತಿಯಲ್ಲಿರಲಿಲ್ಲ. ಸರ್ಕಾರಿ ಉನ್ನತ ಅಧಿಕಾರಿಯಾಗಿದ್ದ ಗೌಡರಿಗೆ, ಆಡಳಿತ ಜೊತೆಗೆ ಜನಪರ ಕಾರ್ಯದ ಅನುಭವ ಇದ್ದಿದ್ದರಿಂದ ಕೇಂದ್ರ ಸರ್ಕಾರದ ನಗರಾಭಿವೃದ್ಧಿ ಇಲಾಖೆಯು ನಗರ ಪಟ್ಟಣಗಳಲ್ಲಿನ ಅಭಿವೃದ್ಧಿಗಾಗಿ ಗೃಹ ನಿರ್ಮಾಣಕ್ಕೆ ಆರ್ಥಿಕ ನೆರವು ನೀಡುವ ವಿಚಾರ ತಿಳಿದಿದ್ದರು.

ಸಿಐಟಿಬಿಯ ಹಿರಿಯ ಅಧಿಕಾರಿಗಳೊಂದಿಗೆ ದೆಹಲಿಗೆ ಹೋಗಿ, ಕೇಂದ್ರ ನಗರಾಭಿವೃದ್ಧಿ ಸಚಿವಾಲಯದ ಅಡಿ ಬರುವ 'ಹುಡ್ಕೋ' (ಹೌಸಿಂಗ್ ಅಂಡ್ ಅರ್ಬನ್ ಡೆವಲಪ್‌ಮೆಂಟ್ ಕಾರ್ಪೋರೇಷನ್) ಅಧಿಕಾರಿಗಳನ್ನು ಭೇಟಿಯಾದರು. ಮಾದೇಗೌಡ್ರು ಮೈಸೂರು ನಗರದ ನಿರ್ವಸತಿಗರಿಗೆ ವಸತಿ ನೀಡುವ ನಿಮ್ಮ ಸ್ವಂತ ಮನೆ ಯೋಜನೆ (ಓನ್ ಯುವರ್ ಹೌಸ್ ಸ್ಕೀಮ್) ಕರಡನ್ನು ದೆಹಲಿ ಹುಡ್ಕೋ ಅಧಿಕಾರಿಗಳ ಮುಂದಿಟ್ಟರು.

ಎಂಥ ಬಡವರು ಸ್ವಂತ ಮನೆ ಹೊಂದಬಹುದಾದ ಈ ಯೋಜನೆಯನ್ನು ದೆಹಲಿಯ ಹುಡ್ಕೋ ಅಧಿಕಾರಿಗಳಿಗೆ ಮನದಟ್ಟಾಗುವಂತೆ ವಿವರಿಸಿ ಹೇಳಿದರು. ಇದನ್ನು ಮೆಚ್ಚಿದ ಹುಡ್ಕೋ ನಿರ್ದೇಶಕರು ಹೆಮ್ಮೆಯಿಂದಲೇ ನಿಮ್ಮ ಸ್ವಂತ ಮನೆ ಯೋಜನೆಗೆ ಅಸ್ತು ಎಂದರು. ಆಗಲೇ ಡಿ.ಮಾದೇಗೌಡರ ಆಶಾಮಂದಿರ ಯೋಜನೆಯ ಆಶಾಸೌಧಕ್ಕೆ ಸ್ಪಷ್ಟ ರೂಪ ಸಿಕ್ಕಿದ್ದು. ಒಬ್ಬ ವಿದ್ಯಾವಂತ–ದೂರದೃಷ್ಟಿಯ ನಾಯಕನಿಗೆ ಅಧಿಕಾರ ಸಿಕ್ಕರೆ ಏನೆಲ್ಲಾ ಜನರಿಗೆ ಒಳ್ಳೆಯದು ಮಾಡಬಹುದು ಎಂಬುದಕ್ಕೆ ಮಾದೇಗೌಡರೇ ನಿದರ್ಶನ. ಕಾನೂನು ಪದವೀಧರರಾಗಿ, ಕಾರ್ಮಿಕ ಇಲಾಖೆ ಉದ್ಯೋಗಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದ ಡಿ.ಮಾದೇಗೌಡರು ನಿಸ್ವಾರ್ಥವಾಗಿ ಬಡವರ ಪರ ಕೆಲಸ ಮಾಡಿದರು. ಕೇವಲ 18 ತಿಂಗಳ ಅಧಿಕಾರಾವಧಿಯಲ್ಲಿ ಹೆಬ್ಬಾಳು 1, 2 ಮತ್ತು 3ನೇ ಹಂತ, ವಿಜಯನಗರದ ಮೊದಲನೇ ಹಂತ, ರಾಮಕೃಷ್ಣನಗರ, ವಿವೇಕಾನಂದನಗರ, ಶ್ರೀರಾಮಪುರ, ಶಾರದಾದೇವಿ ನಗರ, ಬನ್ನಿಮಂಟಪ, ಸಿದ್ದಿಖಿ ನಗರ, ಹನುಮಂತ ನಗರ, ರಾಜೀವನಗರ, ದಟ್ಟಗಳ್ಳಿಯಂಥ ಹತ್ತಾರು ಬಡಾವಣೆಗಳನ್ನು, 26 ಸಾವಿರ ನಿವೇಶನಗಳನ್ನು, 12 ಸಾವಿರ ಮನೆಗಳನ್ನು ಕಟ್ಟಿಸಿ ಹಂಚಿದರು. ಡಿ.ಮಾದೇಗೌಡರು ಈ ರಾಜ್ಯದ ಮಂತ್ರಿಯೋ, ಮುಖ್ಯಮಂತ್ರಿಯೋ ಆಗಿದ್ದರೆ ಕರ್ನಾಟಕ ರಾಜ್ಯದ ಬಡವರಿಗೆಲ್ಲ ಮನೆ ಕಟ್ಟಿಸಿಕೊಡುತ್ತಿದ್ದರು. ಬಹುಶಃ ಇಡೀ ರಾಜ್ಯದಲ್ಲೇ ಸೂರಿಲ್ಲದ ನಿರ್ಗತಿಕರೇ ಇರುತ್ತಿರಲಿಲ್ಲವೇನೋ. ಡಿ.ಮಾದೇಗೌಡರಿಗೆ ಬಡವರು, ನಿರಾಶ್ರಿತರ ಬಗ್ಗೆ ಎಷ್ಟು ಕಳಕಳಿ, ಅಂತಃಕರಣ ಇತ್ತೆಂದರೆ ಸ್ವಂತ ಮನೆ ಇಲ್ಲದೆ ಬಾಡಿಗೆ ಮನೆಯಲ್ಲಿ ವಾಸಿಸುವ ಬಡವರನ್ನು ಹುಡುಕಿಕೊಂಡು, ಅವರ ಮನೆ ಬಾಗಿಲಿಗೇ ಹೋದರು. ಹತ್ತಾರು ಯುವಕರ ತಂಡವನ್ನು ಕಟ್ಟಿಕೊಂಡು, ಪ್ರತಿಯೊಂದು ಮನೆಗೆ ಹೋಗಿ, ನಿಜವಾಗಿಯೂ ಅವರು ಬಾಡಿಗೆ ಮನೆಯಲ್ಲಿದ್ದಾರೋ, ಸ್ವಂತ ಮನೆ ಇದ್ದೂ, ಸುಳ್ಳು ಹೇಳಿ ನಿವೇಶನ ಪಡೆಯುವ ಹುನ್ನಾರ ನಡೆಸುತ್ತಿದ್ದಾರೋ ಎಂಬುದನ್ನು ತಿಳಿದು, ಹಂಚಿದ್ದರು.

ಅಂದು ನಗರಾಭಿವೃದ್ಧಿ ಮಂತ್ರಿ ಆಗಿದ್ದ ಎಂ.ಚಂದ್ರಶೇಖರ್ ಬಡ ನಿರ್ವಸತಿಗರಿಗೆ ಮತ್ತು ಜಮೀನು ಕಳೆದುಕೊಳ್ಳುವ ಬಡ ರೈತರಿಗೆ ಅನುಕೂಲ ಮಾಡಿಕೊಡುವ ಮೈಸೂರಿನ ಆಶಾಮಂದಿರ ಯೋಜನೆಯಿಂದ ಸ್ಫೂರ್ತಿಗೊಂಡು, ಡಿ.ಮಾದೇಗೌಡರನ್ನು ಬೆಂಗಳೂರಿಗೆ ಕರೆಸಿಕೊಂಡು ಮಾಹಿತಿ ಪಡೆದಿದ್ದರು. ಅದರಂತೆ ರಾಜ್ಯದ ಎಲ್ಲಾ ನಗರ ಮತ್ತು ಪಟ್ಟಣಗಳಲ್ಲಿ ಆಶಾಮಂದಿರ ಯೋಜನೆ ಜಾರಿಗೆ ತರಲು ಯೋಜಿಸಿದ್ದರು. ದೆಹಲಿಯ ಹುಡ್ಕೋ ಅಧಿಕಾರಿಗಳು ಡಿ.ಮಾದೇಗೌಡರ ಸಾಧನೆ ಮೆಚ್ಚಿ ದೆಹಲಿಯಲ್ಲಿ ಸನ್ಮಾನಿಸಿ, ಹುಡ್ಕೋ ಸಂಸ್ಥೆ ಹೊರತಂದ ಇಂಗ್ಲಿಷ್ ಪುಸ್ತಕಕ್ಕೆ ಅಪ್ಪಟ ಕನ್ನಡ ಪದ 'ಮನೆ' ಎಂದೇ ಹೆಸರಿಟ್ಟಿದ್ದರು. ಮಾದೇಗೌಡರು ವಸತಿ ಪ್ರದೇಶವಲ್ಲದೆ, ಏಷ್ಯಾದಲ್ಲೇ ಅತಿ ದೊಡ್ಡದಾದ ಹೆಬ್ಬಾಳು ಕೈಗಾರಿಕಾ ಪ್ರದೇಶ ರೂಪಿಸಿದರು. ಇದರಿಂದ ಇನ್ಫೋಸಿಸ್‌ನಂಥ ಐಟಿ ದಿಗ್ಗಜ ಕಂಪೆನಿಗಳು, ನೂರಾರು ಕೈಗಾರಿಕೆಗಳು ಸ್ಥಾಪಿತವಾಗಿ ಸಾವಿರಾರು ಜನರಿಗೆ ಉದ್ಯೋಗ ಕಲ್ಪಿಸಿದವು.

ಕುವೆಂಪುನಗರ ಮತ್ತು ಸಿದ್ಧಾರ್ಥನಗರದ ರಸ್ತೆಗಳಿಗೆ ಅರ್ಥಪೂರ್ಣವಾದ ಹೆಸರುಗಳನ್ನಿಟ್ಟಿದ್ದು ಡಿ.ಮಾದೇಗೌಡರ ವಿವೇಕತನಕ್ಕೆ ಸಾಕ್ಷಿಯಾಗಿದೆ. ಕುವೆಂಪುನಗರದ ರಸ್ತೆಗಳಿಗೆ ಕುವೆಂಪು ಕೃತಿಗಳ ಹೆಸರನ್ನೇ ಇಟ್ಟರೆ, ಸಿದ್ಧಾರ್ಥ ನಗರದ ರಸ್ತೆಗಳಿಗೆ ಬುದ್ಧನ ಬೋಧನೆ ಸಾರುವ ಹೆಸರುಗಳನ್ನು ಇಟ್ಟರು. ಇದೇ ರೀತಿ ವಿಜಯನಗರದ ರಸ್ತೆಗಳಿಗೂ ಕೃಷ್ಣದೇವರಾಯರಿಗೆ ಸಂಬಂಧಿಸಿದ ಹೆಸರನ್ನೇ ಇಡಲು ಉದ್ದೇಶಿಸಿದ್ದರು. ಅಷ್ಟರಲ್ಲಿ ಬಡವರಿಗೆ ಮನೆ ಕಲ್ಪಿಸಿಕೊಟ್ಟ ಉದಾತ್ತ ನಾಯಕನಿಗೆ ಅವರ ಜನತಾಪಕ್ಷದವರೇ ಮುಳುವಾಗಿ ಅಧಿಕಾರ ಬಿಡುವಂತಾಯಿತು. ಇಂಥ ಜನಪರ ನಾಯಕರನ್ನು ಗುರುತಿಸಿದ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ 2002ರಲ್ಲಿ ವಿಧಾನಪರಿಷತ್ ಸದಸ್ಯರಾಗಿ ಮಾಡಿದರು. ಆಗಲೂ ಸುಮ್ಮನೆ ಕೂರದ ಮಾದೇಗೌಡರು ಈಗ ನಮ್ಮ ಪ್ರಧಾನಿ ನರೇಂದ್ರಮೋದಿ ತರುತ್ತಿರುವ ನಿರ್ಮಲ ಯೋಜನೆಯನ್ನು 20 ವರ್ಷಗಳ ಹಿಂದೆಯೇ ಮೈಸೂರಿನಲ್ಲಿ ಜಾರಿಗೆ ತಂದಿದ್ದರು. ತ್ಯಾಜ್ಯ ನಿರ್ವಹಣೆ ಘಟಕವನ್ನು ಕುಂಬಾರಕೊಪ್ಪಲಿನಲ್ಲಿ ಸ್ಥಾಪಿಸುವ ಮೂಲಕ ಸ್ವಚ್ಛ ಮೈಸೂರು ಅಭಿಯಾನಕ್ಕೆ ಅಡಿಪಾಯ ಹಾಕಿದರು. ವಿಧಾನಪರಿಷತ್ ಸದಸ್ಯರಿಗೆ ನೀಡುವ ಅನುದಾನದ ಹಣದಲ್ಲಿ ಜಯಲಕ್ಷ್ಮಿಪುರಂನಲ್ಲಿ ಯೂಥ್ ಹಾಸ್ಟೆಲ್ ಕಟ್ಟಡ ಕಟ್ಟಿಸಿದರು. ಇಂದು ದೇಶಕ್ಕೆ ಮಾದರಿಯಾಗಿರುವ ಯೂಥ್ ಹಾಸ್ಟೆಲ್ ಕಟ್ಟಡ ಮೈಸೂರಿಗೇ ಭೂಷಣಪ್ರಾಯವಾಗಿದೆ.

ಇಂಥ ಅಭಿವೃದ್ಧಿ ಪರ–ದೂರದೃಷ್ಟಿ ಚಿಂತಕರಿಗೆ ಜನ ಆದರಿಸಿ–ಮೆರೆಸಲಿಲ್ಲ. ಇಂಥ ಜನಪರ–ಪ್ರಗತಿಪರ ನಾಯಕರನ್ನು ರಾಜಕೀಯವಾಗಿ ಬೆಳೆಸಿದ್ದರೆ, ಅವರು ಮಂತ್ರಿಯಾಗಿ, ಮುಖ್ಯಮಂತ್ರಿಯಾಗಿ ಜನಸೇವೆಯ ಮಹಾಪೂರವನ್ನೇ ಹರಿಸುತ್ತಿದ್ದರು. ಇಡೀ ನಾಡಿಗೆ ನಾಡೇ ಕೊಂಡಾಡುವ ಮಟ್ಟಕ್ಕೆ ಡಿ.ಮಾದೇಗೌಡರು ಬೆಳೆಯುತ್ತಿದ್ದರು. ಈಗಾಗಲೇ ಸಹಸ್ರ ಚಂದ್ರದರ್ಶನ ಕಂಡಿರುವ ಮಾದೇಗೌಡರು ಕಳೆದ ಜೂನ್ 5ರಂದು 83ನೇ ವಯಸ್ಸಿಗೆ ಕಾಲಿಟ್ಟಿದ್ದಾರೆ. ಅವರು ಶತಾಯುಷಿಗಳಾಗಿ, ಭವಿಷ್ಯದ ಪೀಳಿಗೆಗೆ ಮಾರ್ಗದರ್ಶಿಯಾಗಿ, ಜನರ ಮನದಲ್ಲಿ ಬತ್ತಿ ಹೋಗುತ್ತಿರುವ ಪ್ರಾಮಾಣಿಕತೆ ಹಣತೆ ಮತ್ತೆ ಹೊತ್ತಿಸಿ ಬೆಳಗಿಸಲೆಂದು ಆಶಿಸೋಣ.



ಪ್ರಕಾಶ್‌ಬಾಬು
ಹಿರಿಯ ಪತ್ರಕರ್ತರು

ಮೈಸೂರು ನಗರಾಭಿವೃದ್ಧಿ ಸಮಿತಿ ರಚನೆಯಾಗಿದ್ದೇಗೆ!



ಮೈಸೂರು ನಗರಾಭಿವೃದ್ಧಿ ಸಮಿತಿ ಅಸ್ತಿತ್ವಕ್ಕೆ ಬರಲು ಒಂದು ಹಿನ್ನೆಲೆ ಇದೆ. ಕ್ರಿ.ಶ. 1898–99ರ ಅವಧಿಯಲ್ಲಿ ಮೈಸೂರು ನಗರದಲ್ಲಿ ಕಾಣಿಸಿಕೊಂಡ ಕಾಲರಾ ಬೇನೆಗೆ 6 ಸಾವಿರಕ್ಕೂ ಹೆಚ್ಚು ಜನ ಸಾವಿಗೀಡಾದರು. ಇದಕ್ಕೆ ಕಲುಷಿತ ನೀರು ಕಾರಣ ಎಂದು ಪೂರ್ಣಯ್ಯ ಕಾಲುವೆಯನ್ನು ಮುಚ್ಚಿ 'ಸಯ್ಯಾಜಿರಾವ್ ರಸ್ತೆ' ನಿರ್ಮಾಣ ಮಾಡಲಾಯಿತು. ಜೊತೆಗೆ ಮೈಸೂರು ನಗರವನ್ನು ನಿರ್ಮಲವಾಗಿಡಲು ಯಾವ ಕ್ರಮಕೈಗೊಳ್ಳಬೇಕು ಎಂಬುದಕ್ಕೆ ಸಲಹೆ ಪಡೆಯಲು 1902ರ ಸೆಪ್ಟೆಂಬರ್ 18ರಂದು ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಸರ್ಕಾರದ ಕಾರ್ಯದರ್ಶಿ ಹೆಚ್.ವಿ. ನಂಜುಂಡಯ್ಯ, ಸಂಸ್ಥಾನದ ಮುಖ್ಯ ಇಂಜಿನಿಯರ್ ಆಗಿದ್ದ ಡಬ್ಲ್ಯೂ.ಹ್ಯಾಟ್ಸಿನ್ ನೇತೃತ್ವದಲ್ಲಿ 12 ಜನರ ಸಮಿತಿ ರಚಿಸಿದರು. ಈ ತಜ್ಞರ ಸಮಿತಿಯೂ 1902ರ ಅಕ್ಟೋಬರ್ 14ರಂದು ಮೈಸೂರು ರಾಜರ ಸರ್ಕಾರದ ಕಾರ್ಯದರ್ಶಿಯಾಗಿದ್ದ ಹೆಚ್.ವಿ. ನಂಜುಂಡಯ್ಯ (1916ರ ಜುಲೈ.27ರಂದು ಮೈಸೂರು ವಿವಿ ಮೊದಲ ಉಪಕುಲಪತಿ ಆದವರು) ರಿಗೆ ನೀಡಿದ ವರದಿಯಲ್ಲಿ ಆರ್ಥಿಕ ಕೊರತೆ ಎದುರಿಸುತ್ತಿರುವ ಮೈಸೂರು ಪುರಸಭೆ ಅಧೀನದಲ್ಲಿರುವ ನಿರ್ಮಲಾಭಿವೃದ್ಧಿ ಸಮಿತಿಯನ್ನು ಪುರಸಭೆಯಿಂದ ಬೇರ್ಪಡಿಸುವಂತೆ ಸಲಹೆ ನೀಡಿತು.

ಅದರಂತೆ 1903ರ ನವೆಂಬರ್.25 ರಂದು ಸ್ವತಂತ್ರವಾದ 'ನಗರಾಭಿವೃದ್ಧಿ ಸಮಿತಿ' ಸ್ಥಾಪಿಸಲಾಯಿತು. 1903ರಿಂದ 1949ರವರೆಗೂ ಮೈಸೂರು ಪುರಸಭೆ ಅಧ್ಯಕ್ಷರೇ ಇದರ ಅಧ್ಯಕ್ಷರಾಗುತ್ತಿದ್ದರು. ಪುರಸಭೆಯ ಉಪಾಧ್ಯಕ್ಷ, ಆರೋಗ್ಯಾಧಿಕಾರಿ, ಮರಾಮತ್ ಇಲಾಖೆ ಅಧಿಕಾರಿ, ಪುರಸಭೆ ಸದಸ್ಯರಿಂದ ಆಯ್ಕೆಯಾದ ಮೂವರು ಸದಸ್ಯರು, ಸರ್ಕಾರದಿಂದ ನಾಮಕರಣಗೊಂಡ ಮೂವರು ಸೇರಿದಂತೆ 9 ಮಂದಿ ಸದಸ್ಯರಾಗಿರುತ್ತಿದ್ದರು. ಹೀಗೇ 1903ರಲ್ಲಿ ಸ್ಥಾಪಿತವಾದ 'ನಗರಾಭಿವೃದ್ಧಿ ಸಮಿತಿ'ಗೆ ಮೊದಲ ಅಧ್ಯಕ್ಷರಾಗಿದ್ದವರು ಅಂದಿನ ಮೈಸೂರು ಪುರಸಭೆ ಅಧ್ಯಕ್ಷ ಡಿ.ಸೀತಾರಾಮರಾವ್.

1949ರಿಂದ ನಗರಾಭಿವೃದ್ಧಿ ಸಮಿತಿ ನಗರ ವಿಶ್ವಸ್ಥ ಮಂಡಳಿ ಆದಾಗ ಪುರಸಭೆ ಅಧ್ಯಕ್ಷರೇ ಅದರ ಅಧ್ಯಕ್ಷರಾಗುವುದನ್ನು ಕೈಬಿಡಲಾಯಿತು. ಹೀಗೆ ಪುರಸಭೆ ಹಿಡಿತದಿಂದ ಸಂಪೂರ್ಣ ಬಿಡುಗಡೆಯಾದ ನಗರ ವಿಶ್ವಸ್ಥ ಮಂಡಳಿಗೆ 1949ರ ಮೇ 11ರಂದು ಮೊದಲ ಅಧ್ಯಕ್ಷರಾದವರು ಪುಟ್ಟು ಗೋಪಾಲಕೃಷ್ಣಶೆಟ್ಟಿ. ಮೈಸೂರು ನಗರದಲ್ಲಿದ್ದ ಕೊಳಚೆ ಪ್ರದೇಶಗಳನ್ನು ನಿರ್ಮೂಲನೆ ಮಾಡಿ, ಅಲ್ಲಿ ಸುಂದರವಾದ ಬಡಾವಣೆಗಳನ್ನು ರೂಪಿಸಿದ ಹೆಚ್ಚಿನ ಶ್ರೇಯಸ್ಸು ಅಧಿಕಾರಿಯಾಗಿದ್ದ ಶ್ರೀಕಂಠೇಶ್ವರ ಅಯ್ಯರ್ ಅವರಿಗೆ ಸಲ್ಲುತ್ತದೆ. ಇವರು ಮೈಸೂರು ನಗರಾಭಿವೃದ್ಧಿ ಸಮಿತಿ ಅಧ್ಯಕ್ಷರಾಗಿದ್ದ ಅಧಿಕಾರಾವಧಿಯಲ್ಲೇ ಬಹಳಷ್ಟು ಕೊಳಚೆ ಪ್ರದೇಶಗಳನ್ನು ನಿರ್ಮೂಲನೆ ಮಾಡಿ, ಸುಸಜ್ಜಿತ ಬಡಾವಣೆ ನಿರ್ಮಿಸಿದ್ದರು. ಇದರಲ್ಲಿ ಲಕ್ಷ್ಮೀಪುರಂ ಮತ್ತು ಅಶೋಕಪುರಂ, ಗಾಂಧಿನಗರ ಮತ್ತು ಎನ್.ಆರ್. ಮೊಹಲ್ಲಾಗಳು ಪ್ರಮುಖವಾದುದು. 1971ರಲ್ಲಿ ಮೈಸೂರು ನಗರಪಾಲಿಕೆ ಕಚೇರಿಯ ದಕ್ಷಿಣ ಭಾಗದಲ್ಲಿದ್ದ ನಗರ ವಿಶ್ವಸ್ಥ ಮಂಡಳಿ ಕಚೇರಿಯನ್ನು ಈಗಿನ ಜೆಎಲ್‌ಬಿ ರಸ್ತೆಗೆ ಸ್ವಂತ ಕಟ್ಟಡಕ್ಕೆ ವರ್ಗಾಯಿಸಲಾಯಿತು. ಇಲ್ಲಿ ವಿಸ್ತರಿತ ಹೊಸ ಕಟ್ಟಡವನ್ನು ನಿರ್ಮಿಸಿದ್ದು 1987ರಲ್ಲಿ. 1988ರಲ್ಲಿ 'ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ' ಮಾಡಲಾಯಿತು. 1992ರಲ್ಲಿ ಮೊದಲ ಮುಡಾ ಅಧ್ಯಕ್ಷರಾದವರು ಪಿ.ಗೋವಿಂದರಾಜು.

ಜೇಬಿನಳತೆಗೆ ತಕ್ಕಂತೆ ಬದುಕು ರೂಪಿಸಿಕೊಳ್ಳಿ

ವಿದ್ಯಾರ್ಥಿಗಳಿಗೆ ಮೈಸೂರು ವಿವಿ ಮಾಹಿತಿ ಸಂವಹನ ಘಟಕದ ನಿರ್ದೇಶಕ ಪ್ರೊ.ಉಮಾಕಾಂತ್ ಕಿವಿಮಾತು

ಮೈಸೂರು, ಜು.10(ಎಸ್‌ಪಿಎನ್)– ಪೋಷಕರು ಕಷ್ಟಪಟ್ಟು ದುಡಿದು ವಿದ್ಯಾಭ್ಯಾಸಕ್ಕಾಗಿ ನೀಡುವ ಹಣವನ್ನು ವಿದ್ಯಾರ್ಥಿಗಳು ದುರುಪಯೋಗ ಪಡಿಸಿಕೊಳ್ಳಬಾರದು ಎಂದು ಮೈಸೂರು ವಿವಿ ಮಾಹಿತಿ ಸಂವಹನ ಘಟಕದ ನಿರ್ದೇಶಕ ಪ್ರೊ.ಆರ್.ಎಸ್.ಉಮಾಕಾಂತ್ ಕಿವಿಮಾತು ಹೇಳಿದರು. ಮೈಸೂರು ವಿವಿ ಮಾನಸ ಗಂಗೋತ್ರಿ ಆವರಣದ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗದ ಡಾ.ಎಸ್.ಆರ್.ರಂಗನಾಥನ್ ಸಭಾಂಗಣದಲ್ಲಿ ಮೈಸೂರು ವಿವಿ ಗ್ರಂಥಾಲಯ ಮತ್ತು ಮಾಹಿತಿ ವಿದ್ಯಾರ್ಥಿಗಳ ಸಂಘ(ಮುಲಿಸಾ)ದ ವತಿಯಿಂದ ಆಯೋಜಿಸಿದ್ದ ವಿದ್ಯಾರ್ಥಿ ಸಂಘದ ಸಮಾರೋಪದಲ್ಲಿ ಭಾಗವಹಿಸಿ ಮಾತನಾಡಿದರು.



ಮೈಸೂರು ವಿವಿ ಗ್ರಂಥಾಲಯ ಮತ್ತು ಮಾಹಿತಿ ವಿದ್ಯಾರ್ಥಿಗಳ ಸಂಘ(ಮುಲಿಸಾ)ದ ವತಿಯಿಂದ ಆಯೋಜಿಸಿದ್ದ ವಿದ್ಯಾರ್ಥಿ ಸಂಘದ ಸಮಾರೋಪದಲ್ಲಿ ಭಾಗವಹಿಸಿ, ಮೈಸೂರು ವಿವಿ ಮಾಹಿತಿ ಸಂವಹನ ಘಟಕದ ನಿರ್ದೇಶಕ ಉಮಾಕಾಂತ್ ಮಾತನಾಡಿದರು.

ಮಕ್ಕಳಿಗೆ ಉನ್ನತ ವಿದ್ಯಾಭ್ಯಾಸ ಕೊಡಿಸಲು ಪೋಷಕರು ಸಾಕಷ್ಟು ಕನಸು ಕಂಡಿರುತ್ತಾರೆ. ಅದಕ್ಕಾಗಿ ತಮ್ಮ ದುಡಿಮೆಯ ಶೇ.50ರಷ್ಟು ಹಣ ಮೀಸಲಿಡುತ್ತಾರೆ. ಈ ಹಣವನ್ನು ವಿದ್ಯಾರ್ಥಿಗಳು ಸನ್ಮಾರ್ಗಕ್ಕೆ ಬಳಸಿಕೊಂಡು ಜೀವನದಲ್ಲಿ ಉನ್ನತ ಸ್ಥಾನ ಗಳಿಸುವಂತೆ ಸಲಹೆ ನೀಡಿದರಲ್ಲದೆ, ಶ್ರೀಮಂತ ವಿದ್ಯಾರ್ಥಿಗಳ ಜೀವನ ಕ್ರಮವನ್ನು ಅಳವಡಿಸಿಕೊಂಡು ಕಷ್ಟಪಡುವುದಕ್ಕಿಂತ ತಮ್ಮ ಜೇಬಿನಳತೆಗೆ ತಕ್ಕಂತೆ ಬದುಕು ರೂಪಿಸಿಕೊಳ್ಳುವುದು ಉತ್ತಮ ಎಂದು ಸಲಹೆ ನೀಡಿದರು.

ಇತ್ತೀಚಿನ ದಿನಗಳಲ್ಲಿ ಸ್ನಾತಕೋತ್ತರ ಪದವಿ ಮುಗಿಸಿದ ವಿದ್ಯಾರ್ಥಿಗಳು ಹೈಫೈ ಜೀವನ ಕ್ರಮಕ್ಕೆ ಮಾರುಹೋಗಿ ಮುಂದೆ ಕುಟುಂಬದ ಇತರೆ ಸದಸ್ಯರ ಬೆಂಬಲವನ್ನು ಕಳೆದುಕೊಳ್ಳುತ್ತಿದ್ದಾರೆ. ಹಾಗಾಗಿ ಸ್ನಾತಕೋತ್ತರ ಪದವಿ ಮುಗಿಸಿದ ನಂತರ ಇತರೆ ಕುಟುಂಬದ ಸದಸ್ಯರೊಂದಿಗೆ ಸ್ನೇಹಮಯ ಜೀವನ ನಡೆಸಬೇಕು ಎಂದರಲ್ಲದೆ, 2023–24ನೇ ಸಾಲಿನಲ್ಲಿ ಮುಲಿಸಾ ಸಂಘಟನೆ ವಿದ್ಯಾರ್ಥಿ ಸ್ನೇಹಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದು ಸ್ವಾಗತಾರ್ಹ ಎಂದರು.

ಈ ವೇಳೆ ಮೈಸೂರು ವಿವಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಪ್ರೊ.ಎಂ.ಚಂದ್ರಶೇಖರ, ಮುಲಿಸಾ ಶಿಕ್ಷಣ ಸಲಹೆಗಾರರಾದ ಡಾ.ಬಿ.ನಿವೇದಿತಾ, ವಿದ್ಯಾರ್ಥಿಗಳಾದ ಕೆ.ಎಂ.ಪ್ರಮೋದ್ ಚಕ್ರವರ್ತಿ, ರಂಜಿತಾ, ಜಿ.ಎನ್.ಪ್ರಿಯಾ, ಎನ್.ರಕ್ಷಿತ, ರಂಜಿತ ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಕಲರ್ಸ್ ವಾಹಿನಿಯಲ್ಲಿ ಹೊಸ ಧಾರಾವಾಹಿ ನನ್ನ ದೇವ್ರು



ಮೈಸೂರು, ಜು.10– ಕೌಟುಂಬಿಕ ಮೌಲ್ಯಗಳನ್ನು ಬಿಂಬಿಸುವ ಸದಭಿರುಚಿಯ ಧಾರಾವಾಹಿಗಳಿಗೆ ಹೆಸರಾದ ಕಲರ್ಸ್ ಕನ್ನಡ ಇದೀಗ 'ನನ್ನ ದೇವ್ರು' ಹೊಸಕತೆಯನ್ನು ಹೊತ್ತು ತಂದಿದೆ.

ಜು.8ರಿಂದ ಪ್ರಸಾರ ಆರಂಭಿಸಿರುವ ಈ ಹೊಸ ಧಾರಾವಾಹಿಯನ್ನು ನೀವು ಸೋಮವಾರದಿಂದ ಶುಕ್ರವಾರದ ತನಕ ಪ್ರತಿದಿನ ಸಂಜೆ 6.30ರಿಂದ ವೀಕ್ಷಿಸಬಹುದು. 'ಅಶ್ವಿನಿ ನಕ್ಷತ್ರ'ದಿಂದ ಹೆಸರಾದ ಮಯೂರಿ 'ನನ್ನ ದೇವ್ರು' ನಾಯಕಿಯಾಗಿದ್ದಾರೆ. ನಾಯಕನಾಗಿ ಹಾಸ್ಯಚಕ್ರವರ್ತಿ ನರಸಿಂಹರಾಜು ಅವರ ಮೊಮ್ಮಗ ಅವಿನಾಶ್ ದಿವಾಕರ್ ಇವರೊಂದಿಗೆ ಯುಕ್ತಾ ಮಲ್ನಾಡ್, ಸ್ವಾತಿ, ವಿ.ಮನೋಹರ್, ರೇಖಾದಾಸ್, ನಿಶ್ಚಿತಾ ಗೌಡ, ಮಾಲತಿ ಸುಧೀರ್, ಯಮುನಾ ಶ್ರೀನಿಧಿ, ರವಿ ಬ್ರಹ್ಮ, ಅಭಿಷೇಕ್ ಶ್ರೀಕಾಂತ್ ಮತ್ತಿತರರು 'ನನ್ನ ದೇವ್ರು' ತಾರಾಗಣದಲ್ಲಿದ್ದಾರೆ.

ಈ ಮೊದಲು 'ಒಲವಿನ ನಿಲ್ದಾಣ' ಧಾರಾವಾಹಿಯನ್ನು ನಿರ್ಮಿಸಿದ್ದ ಶ್ರುತಿ ನಾಯ್ಡು 'ನನ್ನ ದೇವ್ರು' ಧಾರಾವಾಹಿಯ ನಿರ್ಮಾಪಕಿ. ಇತ್ತೀಚೆಗೆ ಬೆಳ್ಳಿತೆರೆಯ ಮೇಲೆ ಖಳನಟನಾಗಿ ಗಮನ ಸೆಳೆಯುತ್ತಿರುವ ರಮೇಶ್ ಇಂದಿರಾ 'ನನ್ನ ದೇವ್ರು' ಧಾರಾವಾಹಿಯನ್ನು ನಿರ್ದೇಶಿಸುತ್ತಿದ್ದಾರೆ.

ವಿಕಾಸಶ್ರೀ ಪ್ರಶಸ್ತಿಗೆ ಬಾಲ ರಂಗನಟರು ಆಯ್ಕೆ

ಮೈಸೂರು, ಜು.10– ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆಯ ವತಿಯಿಂದ ಕೆ.ಹೆಚ್.ರಾಮಯ್ಯ ಸ್ಮರಣಾರ್ಥ ಕೊಡಮಾಡುವ ವಿಕಾಸಶ್ರೀ ಪ್ರಶಸ್ತಿಗೆ ಮೈಸೂರಿನ ಅದಮ್ಯ ರಂಗಶಾಲೆಯ ಪ್ರತಿಭಾವಂತ ರಂಗ ವಿದ್ಯಾರ್ಥಿಗಳಾದ ಚರಿತ್ ಅದಮ್ಯ ಹಾಗೂ ಜೆ.ಮಯೂರ್ ಗೌಡ ಆಯ್ಕೆಯಾಗಿದ್ದಾರೆ.




ಮಯೂರ್‌ಗೌಡ ಚರಿತ್ ಅದಮ್ಯ

ಪ್ರತಿಭಾನ್ವಿತ ಬಾಲ ರಂಗನಟರಾಗಿರುವ ಚರಿತ್ ಮತ್ತು ಮಯೂರ್ ಗೌಡ, ಅದಮ್ಯ ರಂಗಶಾಲೆಯ ಹದಿನೈದಕ್ಕೂ ಹೆಚ್ಚು ಮಕ್ಕಳ ನಾಟಕಗಳಲ್ಲಿ ಮನೋಜ್ಞವಾಗಿ ಅಭಿನಯಿಸಿದ್ದಾರೆ. ರಂಗಭೂಮಿ ಕ್ಷೇತ್ರದಲ್ಲಿ ಸಲ್ಲಿಸಿರುವ ಸೇವೆಯನ್ನು ಪರಿಗಣಿಸಿ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ.

ಜು.12ರಂದು ಸಂಜೆ 4.30ಕ್ಕೆ ನಗರದ ಪ್ರೆಸಿಡೆಂಟ್ ಹೋಟೆಲ್ ಸಭಾಂಗಣದಲ್ಲಿ ನಡೆಯಲಿರುವ ಕೆ.ಹೆಚ್. ರಾಮಯ್ಯ ಸಂಸ್ಮರಣಾ ಸಮಾರಂಭದಲ್ಲಿ ಶ್ರೀರಂಗಪಟ್ಟಣ ಶಾಸಕ ರಮೇಶ್‌ಬಾಬು ಬಂಡಿಸಿದ್ದೇಗೌಡ, ರಾಜ್ಯ ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷ ಹೆಚ್.ಕೆ.ರಾಮು, ಸಾಹಿತಿ ಟಿ. ಸತೀಶ್ ಜವರೇಗೌಡ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಅದಮ್ಯ ರಂಗಶಾಲೆಯ ಸಂಸ್ಥಾಪಕ ಕಾರ್ಯದರ್ಶಿ ಚಂದ್ರು ಮಂಡ್ಯ ಪುರಸ್ಕೃತರನ್ನು ಅಭಿನಂದಿಸಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 2496522/23

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಕೆಆರ್‌ಎಸ್‌ನಿಂದ ನಾಲೆಗೆ ನೀರು ಬಿಡುಗಡೆ



ಮಂಡ್ಯ,ಜು.10– ಜಿಲ್ಲೆಯ ರೈತರ ಒತ್ತಾಯದಂತೆ ಕೃಷ್ಣರಾಜ ಸಾಗರ ಅಣೆಕಟ್ಟೆಯಿಂದ ನಾಲೆಗಳಿಗೆ 500 ಕ್ಯೂಸೆಕ್ ನೀರು ಬಿಡುಗಡೆ ಮಾಡಲಾಗಿದೆ.

ವಿಸಿ ನಾಲಾ ಆಧುನೀಕರಣ ಕಾಮಗಾರಿ ನಡೆಯುತ್ತಿರುವುದರಿಂದ ಕೆಆರ್‌ಎಸ್ ಅಣೆಕಟ್ಟೆಯಿಂದ ನಾಲೆಗಳಿಗೆ ನೀರು ಬಿಡುವುದನ್ನು ಸ್ಥಗಿತಗೊಳಿಸಲಾಗಿತ್ತು ಆದರೆ ಕಾವೇರಿ ಜಲಾನಯನ ಪ್ರದೇಶದಲ್ಲಿ ಉತ್ತಮ ಮಳೆಯಾಗುತ್ತಿರುವುದರಿಂದ ನಾಲೆಗಳಿಗೆ ನೀರು ಬಿಡಬೇಕೆಂದು ಭಾರಿ ಒತ್ತಡ ಕೇಳಿ ಬಂದಿತ್ತು.

ಆದರೆ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಮಾತ್ರ ನಾಲಾ ಆಧುನೀಕರಣ ಕಾಮಗಾರಿ ನಡೆಯುತ್ತಿದೆ. ಸದ್ಯಕ್ಕೆ ನೀರು ಬಿಡಲು ಸಮಸ್ಯೆಯಾಗುತ್ತಿದೆ ಎಂದು ಹೇಳಿದ್ದರಾದರೂ ಒತ್ತಡ ಹೆಚ್ಚಾದ ಹಿನ್ನೆಲೆಯಲ್ಲಿ ಕಳೆದ ಜುಲೈ 8ರಿಂದ ನೀರು ಬಿಡುವುದಾಗಿ ಹೇಳಿದ್ದರಾದರೂ ಅಂತಿಮವಾಗಿ ಇಂದಿನಿಂದ ನಾಲೆಗೆ ನೀರು ಬಿಡಲಾಗುತ್ತಿದೆ.

ಆದರೆ ಎಷ್ಟು ಕ್ಯೂಸೆಕ್ ನೀರನ್ನು ಎಷ್ಟು ದಿನಗಳ ಕಾಲ ಬಿಡಲಾಗುವುದು ಎಂದು ಹೇಳಿಲ್ಲವಾದರೂ ನೀರು ಬಿಡುಗಡೆಯಾಗಿರುವ ಹಿನ್ನೆಲೆಯಲ್ಲಿ ರೈತರು ಸಂತಸಗೊಂಡಿದ್ದಾರೆ. ಆದರೆ ಕಾಮಗಾರಿ ನಡೆದಿರುವುದರಿಂದ ಕಡೆ ಭಾಗಕ್ಕೆ ನೀರು ತಲುಪುತ್ತದೆಯೇ ಎಂಬ ಪ್ರಶ್ನೆ ಉದ್ಭವವಾಗಿದೆ.

ಏಕೆಂದರೆ ಮಳವಳ್ಳಿ ತಾಲೂಕು ಜಿಲ್ಲೆಯ ಕಡೆಯ ಭಾಗವಾಗಿರುವುದರಿಂದ ಕಾವೇರಿ ನೀರು ಸಮರ್ಪಕವಾಗಿ ಆ ಭಾಗಕ್ಕೆ ತಲುಪುತ್ತಿರಲಿಲ್ಲ. ಜೊತೆಗೆ ನಾಲಾ ಕಾಮಗಾರಿ ನಡೆದಿರುವುದರಿಂದ ನೀರು ಇಂತಹ ಪರಿಸ್ಥಿತಿಯಲ್ಲಿ ಕಡೆಯ ಭಾಗಕ್ಕೆ ತಲುಪುತ್ತದೆಯೇ ಎಂಬ ಪ್ರಶ್ನೆ ಇದೆ. ಅಂತೂ ಜಿಲ್ಲಾಡಳಿತ ಮತ್ತು ಜಿಲ್ಲಾ ಉಸ್ತುವಾರಿ ಸಚಿವರು ರೈತರ ಒತ್ತಾಯಕ್ಕೆ ಮಣಿದು ಅಣೆಕಟ್ಟೆಯಿಂದ ನೀರು ಬಿಟ್ಟಿದ್ದಾರೆ.

ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕಿನಲ್ಲಿರುವ ಕೆಆರ್‌ಎಸ್ ಅಣೆಕಟ್ಟೆಯಲ್ಲಿ 103.90 ಅಡಿಯಷ್ಟು ನೀರಿದ್ದು, ಒಳಹರಿವು 5666 ಇದೆ ಅಣೆಕಟ್ಟೆ ಭರ್ತಿಗೆ ಇನ್ನು ಕೇವಲ 21 ಅಡಿ ಮಾತ್ರ ಬಾಕಿ ಇದ್ದು, 124.80 ಅಡಿ ಅಣೆಕಟ್ಟೆಯ ಗರಿಷ್ಠ ಪ್ರಮಾಣವಾಗಿದೆ.

ಸಮುದಾಯಗಳ ಪ್ರಗತಿಗೆ ಶೈಕ್ಷಣಿಕವೇ ರಹದಾರಿ

ಭೋವಿಗುರು ಪೀಠಾಧ್ಯಕ್ಷ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಅಭಿಪ್ರಾಯ

ಮಂಡ್ಯ,ಜು.10– ಸಮುದಾಯಗಳ ಪ್ರಗತಿಗೆ ಶೈಕ್ಷಣಿಕವೇ ರಹದಾರಿಯಾಗಿದೆ ಎಂದು ಚಿತ್ರದುರ್ಗ ಶ್ರೀ ಜಗದ್ಗುರು ಸಿದ್ಧರಾಮೇಶ್ವರ ಮಹಾಸಂಸ್ಥಾನ ಭೋವಿಗುರು ಪೀಠಾಧ್ಯಕ್ಷ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಹೇಳಿದರು.

ನಗರದಲ್ಲಿರುವ ಭೋವಿಕಾಲೋನಿಯ ಶ್ರೀರಾಮಮಂದಿರದ ಸಭಾಂಗಣದಲ್ಲಿ ಭೋವಿ ಸಮಾಜ ಮತ್ತು ಭಾರತೀಯ ಭೋವಿ(ಒಡ್) ಜನಾಂಗ ಪರಿಷತ್ ಆಯೋಜಿಸಿದ್ದ ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಅವರ ದೀಕ್ಷಾ ರಜತ ಮಹೋತ್ಸವದ ಜಿಲ್ಲಾ ಮಟ್ಟದ ಪೂರ್ವಭಾವಿ ಸಭೆಯಲ್ಲಿ ಆಶೀರ್ವಚನ ನೀಡಿದರು.

ಇಂದಿನ ದಿನಗಳಲ್ಲಿ ಭೋವಿ ಸಮಾಜವು ಸಾಕಷ್ಟು ಸುಧಾರಣೆ ಕಾಣಲು ಶಿಕ್ಷಣ ಮತ್ತು ಸಂಘಟನೆಯೇ ಕಾರಣವಾಗಿದೆ, ಇನ್ನೂ ಮುಂದಿನ ದಿನಗಳಲ್ಲಿ ರಾಜಕೀಯ, ಸಾಮಾಜಿಕವಾಗಿ ಸಬಲರಾಗಿ ಬೆಳೆಯಲು ಉನ್ನತ ಹುದ್ದೆಗಳು ಮತ್ತು ಆರ್ಥಿಕ ಕ್ಷೇತ್ರ ಪ್ರಗತಿಯಾಗಬೇಕಿದೆ ಎಂದು ಸಲಹೆ ನೀಡಿದರು.

ತಳಸಮುದಾಯದ ಜನತೆ ಉನ್ನತ ಹುದ್ದೆಗಳ ಪಡೆಯುವತ್ತ ಪ್ರಜ್ಞೆ ಹೆಚ್ಚಿಸಿಕೊಳ್ಳಬೇಕು, ರಾಜಕೀಯವಾಗಿ ಬೆಳೆಯಲು, ಗ್ರಾಪಂ, ಜಿ.ಪಂ. ಚುನಾವಣೆಗಳಲ್ಲಿ ಗೆಲ್ಲುವ ಸಾಮರ್ಥ್ಯ ನಿಮ್ಮದಾಗಿಸಿಕೊಳ್ಳಬೇಕು ಎಂದು ನುಡಿದರು.

ಚಿತ್ರದುರ್ಗದಲ್ಲಿ ಶ್ರೀಮಠದಿಂದ ದೀಕ್ಷಾ ರಜತ ಮಹೋತ್ಸವವು ಜು.20ರಂದು ಜರುಗಲಿದೆ, ಜಿಲ್ಲೆಯಿಂದ ಸಾಕಷ್ಟು ಜನರು ಬಂದು ಮಹೋತ್ಸವಕ್ಕೆ ಸಾಕ್ಷಿಯಾಗಬೇಕು, ಬಿಡುವು ಮಾಡಿಕೊಂಡು ಹಬ್ಬದ ರೀತಿ ಸಂಭ್ರಮಿಸಿ ಎಂದು ಹೇಳಿದರು.

ಬಳಿಕ ಮಾತನಾಡಿದ ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ ಅಧ್ಯಕ್ಷ ಎಸ್.ರವಿಕುಮಾರ್, ಆರ್ಥಿಕವಾಗಿ ಸಬಲೀಕರಣಗೊಳ್ಳಲು ರಾಜ್ಯ ಸರ್ಕಾರವು ಭೋವಿ ಅಭಿವೃದ್ಧಿ ನಿಗಮ ಸ್ಥಾಪಿಸಿದೆ, ಅಗತ್ಯವುಳ್ಳವರು ಸೌಲಭ್ಯಗಳನ್ನು ಸದುಪಯೋಗ ಪಡಿಸಿಕೊಳ್ಳಿ, ಕಟ್ಟಕಡೆಯ ವ್ಯಕ್ತಿ ಸಮಾಜದ ಮುಖ್ಯವಾಹಿನಿಗೆ ಬರಬೇಕು ಎನ್ನುವುದು ಉದ್ದೇಶವಾಗಿದೆ ಎಂದರು.

ಚಿತ್ರದುರ್ಗದಲ್ಲಿ ದೀಕ್ಷಾ ರಜತ ಮಹೋತ್ಸವವು ಜು.20ರಂದು ಅದ್ದೂರಿಯಾಗಿ ಆಚರಿಸಲು ನಿರ್ಧರಿಸಲಾಗಿದೆ, ರಾಜ್ಯಾದಂತ ಇರುವ ಭೋವಿ ಸಮಾಜದ ಮುಖಂಡರು, ನಾಯಕರು, ನಾಗರಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಆಹ್ವಾನ ನೀಡಲಾಗುತ್ತಿದೆ ಎಂದು ನುಡಿದರು.

ಮನೆಯ ಹಬ್ಬದಂತೆ ಮಹೋತ್ಸವವನ್ನು ಆಚರಿಸಿ, ಭೋವಿ ಸಮಾಜದ ಪ್ರಗತಿಗೆ ಸಾಕಷ್ಟು ಅನುಕೂಲಗಳು ಮತ್ತು ಸೌಲಭ್ಯಗಳನ್ನು ರಾಜ್ಯ ಸರ್ಕಾರದಿಂದ ಪಡೆದುಕೊಳ್ಳುವ ನಿಟ್ಟಿನಲ್ಲಿ ಪ್ರಯತ್ನಿಸೋಣ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಭೋವಿ ಸಮಾಜದ ಮಾಜಿ ಅಧ್ಯಕ್ಷ ಗುರುವಪ್ಪ, ಶಂಕರ್, ಶೆಟ್ಟಿಶಿವಪ್ಪ, ಅಂಕಯ್ಯ, ಶ್ರೀನಿವಾಸ್, ಶಿವು ಪಾಂಡವಪುರ ಮತ್ತಿತರರಿದ್ದರು.



ಪೂರ್ವಭಾವಿ ಸಭೆಯನ್ನು ಭೋವಿಗುರು ಪೀಠಾಧ್ಯಕ್ಷ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಉದ್ಘಾಟಿಸಿದರು.

ತೆರಿಗೆ ಪಾವತಿಗೆ ಶೇ. 5ರಷ್ಟು ರಿಯಾಯಿತಿ

ಮಂಡ್ಯ,ಜು.10– ಮಂಡ್ಯ ನಗರಸಭಾ ವ್ಯಾಪ್ತಿಯಲ್ಲಿರುವ ಸ್ಥಿರಾಸ್ತಿ ಮಾಲೀಕರುಗಳಿಗೆ ಕರ್ನಾಟಕ ಸರ್ಕಾರದ ನಡವಳಿ ಆದೇಶದಂತೆ ದಿನಾಂಕ 03–7–2024 ರಂತೆ ಚಾಲ್ತಿ ಸಾಲಿನ ಆಸ್ತಿ ತೆರಿಗೆಯ ಮೇಲೆ ಶೇ. 5ರಷ್ಟು ರಿಯಾಯಿತಿಯನ್ನು ಜುಲೈ 31 ರವರೆಗೆ ವಿಸ್ತರಿಸಿ ಆದೇಶಿಸಲಾಗಿದೆ. ಮಂಡ್ಯ ನಗರಸಭೆ ವ್ಯಾಪ್ತಿಯ ಸ್ಥಿರಾಸ್ತಿ ಮಾಲೀಕರುಗಳು ತಮ್ಮ ಆಸ್ತಿಗಳಿಗೆ ಆಸ್ತಿ ತೆರಿಗೆಯನ್ನು ಪಾವತಿಸಿ ಶೇ. 5ರಷ್ಟು ರಿಯಾಯಿತಿಯ ಅವಕಾಶವನ್ನು ಪಡೆದುಕೊಳ್ಳುವಂತೆ ಕೋರಲಾಗಿದೆ.

ಸ್ವಾತಂತ್ರೋತ್ಸವ: ಅಕ್ಷರ ಜಾತ್ರೆಗೆ ಕವನಗಳು, ಪ್ರಶಸ್ತಿಗೆ ಹೆಸರುಗಳ ಆಹ್ವಾನ

ಮಂಡ್ಯ, ಜು.10–ಡಾ.ಜೀಶಂಪ ಸಾಹಿತ್ಯ ವೇದಿಕೆ, ಶ್ರೀ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಫಿಲಂ, ಕನ್ನಂಬಾಡಿ ಹಾಗೂ ಕಾವೇರಿಪ್ರಭ ದಿನಪತ್ರಿಕೆ ವತಿಯಿಂದ ಸ್ವಾತಂತ್ರ್ಯೋತ್ಸವ ಅಂಗವಾಗಿ ಆ.18 ರಂದು ಮಂಡ್ಯ ನಗರದ ಗಾಂಧಿ ಭವನದಲ್ಲಿ 7ನೇ ಅಖಿಲ ಕರ್ನಾಟಕ ಕನ್ನಡ ಅಕ್ಷರಜಾತ್ರೆ ಆಯೋಜಿಸಿದ್ದು, ಆಸಕ್ತ ಕವಿಗಳಿಂದ ಕವನ ಗಳನ್ನು ಹಾಗೂ ವಿವಿಧ ಪ್ರಶಸ್ತಿಗೆ ಸಾಧ ಕರ ಹೆಸರನ್ನು ಆಹ್ವಾನಿಸಲಾಗಿದೆ.

ಆಸಕ್ತರು 25 ಸಾಲಿನ ಎರಡು ಕವನಗಳು, ಕಿರು ಪರಿಚಯ, ಫೋಟೋ, ಮೊಬೈಲ್ ಸಂಖ್ಯೆ, ವಿಳಾಸವನ್ನು ಮತ್ತು ಸಾಧಕರು ಸಾಧನೆಯ ವಿವರಗಳನ್ನು ಜು.15ರೊಳಗೆ ಕಳುಹಿಸಬೇಕು. ವ್ಯಾಟ್ಸಪ್‌ನಲ್ಲಿ ಮೊದಲು ನೋಂದಣಿ ಮಾಡಿಕೊಂಡು, ನಂತರ ಅಂಚೆ ಮೂಲಕ ಕಳುಹಿಸಬೇಕು. ಕವನಗಳು ಯಾವುದಾದರೂ ವಿಷಯವನ್ನು ಒಳಗೊಂಡಿರುಹುದು. ಆಯ್ಕೆಯಾದ ಕವಿತೆಗಳನ್ನು ಪುಸ್ತಕ ರೂಪದಲ್ಲಿ ಹೊರತರಲಾಗುವುದು.

ಐವತ್ತು ಮಂದಿ ಕವಿಗಳಿಗೆ ಕವಿಗೋಷ್ಠಿಯಲ್ಲಿ ಅವಕಾಶ ಕಲ್ಪಿಸಲಾಗುವುದು. ಉತ್ತಮ ಸಾಧಕರನ್ನು ಅಖಿಲ ಕರ್ನಾಟಕ ಕನ್ನಡ ಅಕ್ಷರ ಜಾತ್ರೆ ಸಮ್ಮೇಳನಾಧ್ಯಕ್ಷರನ್ನಾಗಿ ಆಯ್ಕೆ ಮಾಡಿ ಗೌರವಿಸಲಾಗುವುದು. ಕವಿಗೋಷ್ಠಿಯಲ್ಲಿ ಭಾಗವಹಿಸುವವರಿಗೆ ಕವನ ವಾಚನಕ್ಕೆ ಅವಕಾಶ, ಪ್ರಮಾಣ ಪತ್ರ ನೆನಪಿನ ಕಾಣಿಕೆ ನೀಡಿ ಗೌರವಿಸಲಾಗುವುದು.

ಹತ್ತು ಉತ್ತಮ ಕವನಗಳಿಗೆ ಕಾವ್ಯಶ್ರೀ ಹಾಗೂ ತಲಾ ಹತ್ತು ಮಂದಿ ಸಾಧಕರಿಗೆ ಕನ್ನಡರತ್ನ, ಸಮಾಜ ಸೇವಾರತ್ನ, ರಾಜ್ಯ ಮಟ್ಟದ ಪ್ರಶಸ್ತಿಗಳನ್ನು ನೀಡಲಾಗುವುದು. ಕವಿಗಳು, ಕವನಗಳು, ಸಾಧಕರು ಪರಿಚಯ, ಫೋಟೋವನ್ನು ವ್ಯಾಟ್ಸಾಪ್ ಮೂಲಕ ಕಳಿಸಿ, ನಂತರ ವಿಳಾಸ: ಎಸ್.ಕೃಷ್ಣಸ್ವರ್ಣ ಸಂದ್ರ, ಕವಿಮಿತ್ರ, ನಂ–767, ಸ್ವರ್ಣಸಂದ್ರ, ಮಂಡ್ಯ–2 ಕಳುಹಿಸಬೇಕು. ಸಂಪರ್ಕ ಮತ್ತು ವ್ಯಾಟ್ಸಾಪ್ ನಂ–9448424380ಗೆ ಕಳುಹಿಸಬೇಕಾಗಿ ಪ್ರಕಟಣೆಯಲ್ಲಿ ವೇದಿಕೆಯ ಪದಾ

ಜನರನ್ನು ಆಕರ್ಷಿಸಿದ ಶ್ವಾನಗಳ ಓಟದ ಸ್ಪರ್ಧೆ



ಶ್ವಾನಗಳ ಓಟದ ಸ್ಪರ್ಧೆಯನ್ನು ಉದ್ಘಾಟಿಸಿದ ಡಾಲು ರವಿ.

ಕೆ.ಆರ್.ಪೇಟೆ,ಜು.10–ತಾಲೂಕಿನ ಜಾಗಿನಕೆರೆ ಗ್ರಾಮದಲ್ಲಿ ಡ್ಯಾನ್ಸರ್ ದೊಡ್ಡಮ್ಮ ರೇಸಿಂಗ್ ಕ್ಲಬ್ ವತಿಯಿಂದ ಆಯೋಜಿಸಿದ್ದ ಶ್ವಾನಗಳ ಓಟದ ಸ್ಪರ್ಧೆಗೆ ಮಂಡ್ಯ ಹಾಲು ಒಕ್ಕೂಟದ ನಿರ್ದೇಶಕ ಡಾಲು ರವಿ ಚಾಲನೆ ನೀಡಿದರು.

ರಾಜ್ಯದ ವಿವಿಧ ಭಾಗಗಳಿಂದ ಸುಮಾರು 50ಕ್ಕೂ ಹೆಚ್ಚು ಶ್ವಾನಗಳು ಓಟದ ಸ್ಪರ್ಧೆಯಲ್ಲಿ ಭಾಗವಹಿಸಿದ್ದವು. ಸ್ಪರ್ಧೆಯು ನೋಡುಗರನ್ನು ಆಕರ್ಷಿಸಿತು. ಶಿಳ್ಳೆ, ಚಪ್ಪಾಳೆ, ಹೋ.. ಸಂತಸ ಮುಗಿಲು ಮುಟ್ಟಿತು.

ಪಶುವೈದ್ಯರಾದ ಡಾ.ರವಿಕುಮಾರ್, ಮುಖಂಡರಾದ ಜಾಗಿನಕೆರೆ ಅಂಬರೀಶ್, ಡೈರಿ ಅಶೋಕ್, ಕೈಗೋನಹಳ್ಳಿ ಜಯರಾಂ, ದೀಪಕ್, ಯಶವಂತ್, ರಾಜೇಶ್, ದರ್ಶನ್ ಕೋಡಿಹಳ್ಳಿ ಸಾಗರ್ ಕೂಚಹಳ್ಳಿ, ಕೌಶಿಕ್, ಕದಬಳ್ಳಿ, ಸಾಗರ್ ಗೊರವಿ, ಜಾಗಿನಕೆರೆ ಡೈರಿ ಅಶೋಕ್, ತಮ್ಮಣ್ಣ ಮತ್ತಿತರರು ಕಾರ್ಯಕ್ರಮದ ನೇತೃತ್ವ ವಹಿಸಿದ್ದರು.

ಸ್ಪರ್ಧೆಯಲ್ಲಿ ವಿಜೇತ ಶ್ವಾನಗಳ ವಿವರ: ರಾಜ್ಯದ ವಿವಿಧ ಭಾಗಗಳಿಂದ ಸುಮಾರು 50ಕ್ಕೂ ಹೆಚ್ಚು ಶ್ವಾನಗಳು ಸ್ಪರ್ಧೆಯಲ್ಲಿ ಭಾಗವಹಿಸಿದ್ದವು. ಈ ಪೈಕಿ ಕೋಡಹಳ್ಳಿ ದರ್ಶನ್ ಅವರ ಶ್ವಾನ ಪ್ರಥಮ ಸ್ಥಾನ, ಬೊಮ್ಮರ್‍ಲ್ಳಿ ಆಕಾಶ್ ಅವರ ಶ್ವಾನ ದ್ವಿತೀಯ ಸ್ಥಾನ, ಹೊನ್ನಾವರದ ರಾಘು ಶ್ವಾನ ತೃತೀಯ ಸ್ಥಾನ, ಚೇತನ್ ಅವರ ಶ್ವಾನ ನಾಲ್ಕನೇ ಬಹುಮಾನ ಪಡೆದುಕೊಂಡವು ಎಲ್ಲರಿಗೂ ಬಹುಮಾನದ ಜೊತೆಗೆ ಟ್ರೋಫಿಯನ್ನು ವಿತರಣೆ ಮಾಡಲಾಯಿತು. ಶ್ವಾನಗಳ ಓಟದ ಸ್ಪರ್ಧೆಯನ್ನು ನೋಡಲು ತಾಲೂಕಿನ ವಿವಿಧ ಭಾಗಗಳಿಂದ ಸಾವಿರಾರು ಮಂದಿ ಭಾಗವಹಿಸಿದ್ದರು.

ಜು.15 ರಂದು ಉದ್ಯೋಗ ಮೇಳ

ಮಂಡ್ಯ,ಜು.10– ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಹಾಗೂ ಪಿಇಎಸ್ ಇಂಜಿನಿಯರಿಂಗ್ ಕಾಲೇಜು (ಮಂಡ್ಯ) ಸಂಯುಕ್ತಾಶ್ರಯದಲ್ಲಿ "ವಿಶ್ವ ಕೌಶಲ"ದಿನ ಹಾಗೂ ಶ್ರೀಯುತ ದಿ॥ಕೆ.ವಿ ಶಂಕರೇಗೌಡ, ಪಿಇಟಿ ಸಂಸ್ಥಾಪಕರು ಇವರ ಜನ್ಮದಿನದ ಅಂಗವಾಗಿ ಜುಲೈ 15 ರಂದು ಬೆಳಿಗ್ಗೆ 10:30 ಗಂಟೆಗೆ ಪಿ.ಇ.ಎಸ್ ಇಂಜಿನಿಯರಿಂಗ್ ಕಾಲೇಜಿನ ಆವರಣದಲ್ಲಿ ಉಚಿತ ಉದ್ಯೋಗ ಮೇಳ ನಡೆಯಲಿದೆ.

ಉದ್ಯೋಗ ಮೇಳದಲ್ಲಿ ಮಂಡ್ಯ ಜಿಲ್ಲೆಯ ಸ್ಥಳೀಯ ಹಾಗೂ ಮೈಸೂರು ಮತ್ತು ಬೆಂಗಳೂರಿನ 30ಕ್ಕೂ ಹೆಚ್ಚು ಹೆಸರಾಂತ ಕಂಪನಿಗಳು ಭಾಗವಹಿಸಲಿದ್ದು, ಎಸ್‌ಎಸ್‌ಎಲ್‌ಸಿ, ಪಿಯುಸಿ, ಐ.ಟಿ.ಐ (ಯಾವುದೇ ಟ್ರೇಡ್), ಡಿಪ್ಲೋಮಾ (ಯಾವುದೇ ಟ್ರೇಡ್), ಹಾಗೂ ಯಾವುದೇ ಪದವಿ ಉತ್ತೀರ್ಣರಾದ 18 ರಿಂದ 35 ವರ್ಷದೊಳಗಿನ ಆಸಕ್ತ ಅಭ್ಯರ್ಥಿಗಳು ಸಂದರ್ಶನದಲ್ಲಿ ಹಾಜರಾಗಿ ಉದ್ಯೋಗ ಪಡೆಯಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ದೂ.ಸಂ: 08232–295124 ಮತ್ತು 8660061488, 91646–42684, & 8970646629ನ್ನು ಸಂಪರ್ಕಿಸಬಹುದು ಎಂದು ಮಂಡ್ಯ ಉದ್ಯೋಗಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ಹಾಲು ಉತ್ಪಾದಕರ ಸಂಘದ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಪಾಂಡವಪುರ ತಾಲೂಕಿನ ಸೀತಾಪುರ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಜಯವರ್ಧನ್, ಉಪಾಧ್ಯಕ್ಷ ಕುಮಾರ್ ಅವರನ್ನು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅಭಿನಂದಿಸಿದರು. ನಿರ್ದೇಶಕರಾದ ಲಿಂಗರಾಜು, ರಜನೀಶ್, ರವಿ, ಶ್ರೀಧರ, ಸೋಮಶೇಖರ್, ಲೀಲಾವತಿ, ಉಮೇಶ್, ಜೆಡಿಎಸ್ ತಾಲೂಕು ಅಧ್ಯಕ್ಷ ಎಸ್.ಎ.ಮಲ್ಲೇಶ್, ಜಿಪಂ ಮಾಜಿ ಸದಸ್ಯ ಎಚ್.ಮಂಜುನಾಥ್, ಮುಖಂಡರಾದ ವಿಶ್ವನಾಥ್, ನಂದೀಶ್, ರವಿ, ವೈರಮುಡಿ, ರಾಜೇಶ್, ಅರುಣ ಸೇರಿದಂತೆ ಹಲವರು ಇದ್ದರು.

ಅಪ್ರಾಪ್ತ ಬಾಲಕಿಗೆ ಮದುವೆಯಾಗುವಂತೆ ಬೆದರಿಕೆ ಹಾಕುತ್ತಿದ್ದ ಆರೋಪಿ ಬಂಧನ



ಕಿಕ್ಕೇರಿ: ಹೋಬಳಿಯ ಸಾಸಲುಕೊಪ್ಪಲು ಗ್ರಾಮದ ಅಪ್ರಾಪ್ತ ಬಾಲಕಿಗೆ ತನ್ನನ್ನು ಮದುವೆಯಾಗುವಂತೆ ಸಾಮಾಜಿಕ ಜಾಲತಾಣದ ಮೂಲಕ ಬೆದರಿಕೆ ಹಾಕುತಿದ್ದ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

ಹಾಸನ ಜಿಲ್ಲೆ, ಚನ್ನರಾಯಪಟ್ಟಣ ತಾಲೂಕು, ಕೆ.ಹೊಸ ಹಳ್ಳಿಯ ಸಚಿನ್ ಎಂಬಾತನೇ ಬಂಧಿತ ಆರೋಪಿ. ಈತ ಸಾಮಾಜಿಕ ಜಾಲತಾಣದಲ್ಲಿ ತನ್ನನ್ನು ಮದುವೆಯಾಗಲು ಅಪ್ರಾಪ್ತ ಹುಡುಗಿಗೆ ಬಲವಂತ ಮಾಡಿದ್ದಾನೆ. ತನ್ನನ್ನು ಮದುವೆಯಾಗಲು ನಿರಾಕರಿಸಿದರೆ ನಿನ್ನ ತಾಯಿ ಮತ್ತು ನಿನ್ನನ್ನು ಕೊಲೆ ಮಾಡಿ, ತಾನು ಕೂಡ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಬೆದರಿಕೆ ಹಾಕಿದ್ದಾನೆ. ಅಪ್ರಾಪ್ತೆಯು ಕಿಕ್ಕೇರಿ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ದೂರಿನ ಮೇರೆ ಕಿಕ್ಕೇರಿ ಇನ್‌ಸ್ಪೆಕ್ಟರ್ ರೇವತಿ ಆರೋಪಿಯನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಒಂದನೇ ಪುಟದಿಂದ

ಸ್ಥಳಾಂತರದ ಸಾಧ್ಯಾಸಾಧ್ಯತೆ ಅಧ್ಯಯನ

ಅದೇ ಉದ್ದೇಶಕ್ಕಾಗಿ ರೈಲ್ವೆ ಇಲಾಖೆಯು ಕೈಗೊಂಡಿದ್ದ ಆ ಮಾರ್ಗದ 100 ಮೀಟರ್ ಸೆಗ್ಮೆಂಟ್‌ನಲ್ಲಿ ಓವರ್‌ಹೆಡ್ ಪವರ್ ಕೇಬಲ್ ಅಳವಡಿಸುವ ಕಾಮಗಾರಿಗೆ ಸಿವಿಲ್ ಏವಿಯೇಷನ್ ಮಹಾನಿರ್ದೇಶನಾಲಯ ಹಾಗೂ ಭಾರತ ವಿಮಾನ ನಿಲ್ದಾಣಗಳ ಪ್ರಾಧಿಕಾರವು ಅನುಮತಿ ನೀಡದೇ ಹಲವು ವರ್ಷಗಳಿಂದ ತಡೆ ಹಿಡಿದಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಗತಿ ಶಕ್ತಿ ಯೋಜನೆಯಡಿ ಸಿಗ್ನಲ್ ಅಂಡ್ ಟೆಲಿಕಮ್ಯೂನಿಕೇಷನ್ ಉಪ ಮುಖ್ಯ ಯೋಜನಾ ವ್ಯವಸ್ಥಾಪಕರು ಕಾಮಗಾರಿ ಕೈಗೊಳ್ಳಲು ಸಾಧ್ಯಾ ಸಾಧ್ಯತೆಗಳ ಅಧ್ಯಯನ ಮಾಡಿ, ಸಮೀಕ್ಷೆ ನಡೆಸಿ ಸ್ಪಷ್ಟ ಅಭಿಪ್ರಾಯ ಮತ್ತು ಶಿಫಾರಸ್ಸಿನೊಂದಿಗೆ ವರದಿ ಸಿದ್ಧಪಡಿಸಲು ರೈಲ್ವೆ ಇಲಾಖೆಯು ಅರ್ಹ ತಾಂತ್ರಿಕ ಸಂಸ್ಥೆಗಳಿಂದ ಟೆಂಡರ್ ಕರೆದಿದ್ದಾರೆ. 21.99 ಲಕ್ಷ ರೂ.ಗಳನ್ನು ಸಮೀಕ್ಷೆಗೆ ನಿಗದಿಗೊಳಿಸಲಾಗಿದ್ದು, 45 ದಿನದೊಳಗಾಗಿ ಅಧ್ಯಯನ ನಡೆಸಿ ವರದಿ ಸಲ್ಲಿಸಬೇಕೆಂಬ ನಿಬಂಧನೆಯೊಂದಿಗೆ ಟೆಂಡರ್ ಕರೆಯಲಾಗಿದೆ. ರನ್‌ವೇ ಮಧ್ಯೆ ರೈಲ್ವೆ ವಿದ್ಯುದ್ದೀಕರಣ ಮಾರ್ಗವಿದ್ದರೆ ವಿಮಾನಗಳ ಹಾರಾಟಕ್ಕೆ ತೊಂದರೆಯಾ ಗುತ್ತದೆ ಎಂದು ಏರ್‌ಪೋರ್ಟ್ ಅಥಾರಿಟಿ ಆಫ್ ಇಂಡಿಯಾ ಅಭಿಪ್ರಾಯಪಟ್ಟಿತ್ತು.

ರನ್‌ವೇ ವಿಸ್ತರಣೆ ಕುರಿತು ಸಂಪರ್ಕಿಸಿದ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ವಿಮಾನ ನಿಲ್ದಾಣದ ನಿರ್ದೇಶಕ ಜೆ.ಆರ್. ಅನೂಪ್, ಭೂಮಿ ಸ್ವಾಧೀನಪಡಿಸಿಕೊಂಡು ಪ್ರಾಧಿಕಾರಕ್ಕೆ ಹಸ್ತಾಂತರಿಸುವ ಪ್ರಕ್ರಿಯೆ ಪ್ರಗತಿಯಲ್ಲಿರುವುದರಿಂದ ಭೌತಿಕವಾಗಿ ವಿಮಾನ ನಿಲ್ದಾಣದ ರನ್‌ವೇ ವಿಸ್ತರಣೆ ಕಾಮಗಾರಿ ಇನ್ನೂ ಆರಂಭವಾಗಿಲ್ಲ ಎಂದರು. ಮೊದಲ ಹಂತದಲ್ಲಿ 160 ಎಕರೆ ಭೂಮಿಯನ್ನು ಪ್ರಾಧಿಕಾರಕ್ಕೆ ಹಸ್ತಾಂತರಿಸಿರುವ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಪ್ರಾಧಿಕಾರ (ಕೆಐಎಡಿಬಿ)ವು ಅಗತ್ಯವಿರುವ ಉಳಿಕೆ ಭೂಮಿ ಸ್ವಾಧೀನಪಡಿಸಿ ಹಸ್ತಾಂತರಿಸಿದ ಬಳಿಕ ರನ್‌ವೇ ವಿಸ್ತರಣೆ ಕಾಮಗಾರಿ ಪ್ರಕ್ರಿಯೆ ಆರಂಭಿಸಲಾಗುವುದು ಎಂದು ಅವರು ತಿಳಿಸಿದರು.

ವಿಮಾನ ನಿಲ್ದಾಣ ಸ್ಥಾಪನೆ ಸಾಧ್ಯತೆ

ಮತ್ತು ಮೆಟ್ರೊ ರೈಲಿನ ಸಂಪರ್ಕ ಇರುವ ಪ್ರದೇಶವನ್ನು ಗುರುತಿಸಿ, ಅಲ್ಲಿ ವಿಮಾನ ನಿಲ್ದಾಣ ಸ್ಥಾಪಿಸುವ ಉದ್ದೇಶ ಸರ್ಕಾರದ್ದು ಎಂದರು.

6450 ಕೋಟಿ ಹೂಡಿಕೆ ಭರವಸೆ: ಜಪಾನ್ ಮತ್ತು ದಕ್ಷಿಣ ಕೊರಿಯಾಕ್ಕೆ ಎರಡು ವಾರಗಳ ತಮ್ಮ ಭೇಟಿಯಿಂದ 6,450 ಕೋಟಿ ರೂ. ಮೊತ್ತದ ಬಂಡವಾಳ ಹೂಡಿಕೆ ಬದ್ಧತೆ ಪಡೆದುಕೊಳ್ಳಲಾಗಿದೆ, ಈ ಬದ್ಧತೆ ಹಾಗೂ ಒಪ್ಪಂದಗಳ ಫಲವಾಗಿ ರಾಜ್ಯದಲ್ಲಿ 1,000 ಉದ್ಯೋಗಾವಕಾಶ ಸೃಷ್ಟಿಯಾಗುವ ನಿರೀಕ್ಷೆಯಿದೆ ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು. ಕರ್ನಾಟಕದ ನಿಯೋಗ ಅಲ್ಲಿನ ಪ್ರಮುಖ ಬಹುರಾಷ್ಟ್ರೀಯ ಕಂಪನಿಗಳ ಮುಖ್ಯಸ್ಥರನ್ನು ಭೇಟಿ ಮಾಡಿ ಮಾತುಕತೆ ನಡೆಸಿತು. ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗಾಗಿ (ಎಸ್‌ಎಂಇ) ಬಂಡವಾಳ ಹೂಡಿಕೆ ಪ್ರಾತ್ಯಕ್ಷಿಕೆಗಳನ್ನು ನಡೆಸಿತು, ತಯಾರಿಕಾ ವಲಯಕ್ಕೆ ರಾಜ್ಯದಲ್ಲಿ ಇರುವ ಉತ್ತೇಜಕರ ಪೂರಕ ಸೌಲಭ್ಯಗಳ ಮಾಹಿತಿ ವಿನಿಮಯ ಮಾಡಿಕೊಂಡಿತು.

35 ಉದ್ಯಮಗಳ ಪ್ರಮುಖರನ್ನು ಭೇಟಿ ಮಾಡಿದ ನಿಯೋಗ, ಮುಂದಿನ ವರ್ಷ ಬೆಂಗಳೂರಿನಲ್ಲಿ ನಡೆಯಲಿರುವ ಜಾಗತಿಕ ಹೂಡಿಕೆದಾರರ ಸಮಾವೇಶ, ಇನ್ವೆಸ್ಟ್ ಕರ್ನಾಟಕ 2025ರಲ್ಲಿ ಭಾಗವಹಿಸಲು ಟೋಕಿಯೊ ಮತ್ತು ಸೋಲ್‌ನಲ್ಲಿ ನಡೆದ ಪ್ರಾತ್ಯಕ್ಷಿಕೆಗಳಲ್ಲಿ 200ಕ್ಕೂ ಹೆಚ್ಚು ಕಂಪನಿಗಳಿಗೆ ಆಹ್ವಾನ ನೀಡಲಾಯಿತು ಎಂದರು.

ಜಪಾನ್‌ನಲ್ಲಿ ನಡೆದ ಸಭೆಗಳಲ್ಲಿ ರೆನೆಸಾಸ್ ಎಲೆಕ್ಟ್ರಾನಿಕ್ಸ್ ಕಾರ್ಪೊರೇಷನ್, ಟೊಯೊಟಾ ಮೋಟರ್ ಕಾರ್ಪೊರೇಷನ್, ಯಮಹಾ ಮೋಟರ್ ಕಂಪನಿ, ಸುಮಿಟೊಮೊ ಹೆವಿ ಇಂಡಸ್ಟ್ರೀಸ್, ಪ್ಯಾನಾಸೋನಿಕ್ ಎನರ್ಜಿ, ನಿಡೆಕ್ ಕಾರ್ಪೊರೇಷನ್, ನಿಸಾನ್ ಮೋಟರ್ ಕಾರ್ಪೊರೇಷನ್, ಬ್ರದರ್ ಇಂಡಸ್ಟ್ರೀಸ್, ಶಿಮಾಡ್ಜು ಕಾರ್ಪೊರೇಷನ್, ಹಿಟಾಚಿ ಮತ್ತಿತರ ಕಂಪನಿಗಳು ಪ್ರಮುಖವಾಗಿವೆ.

ದಕ್ಷಿಣ ಕೊರಿಯಾದಲ್ಲಿ ವ್ಯಾಪಾರ, ಕೈಗಾರಿಕೆ ಮತ್ತು ಇಂಧನ ಸಚಿವಾಲಯದ ಉಪಮಂತ್ರಿ, ಕೊರಿಯಾದ ಜಿಯೊಂಗಿ ಪ್ರಾಂತ್ಯದ ವೈಸ್ ಗವರ್ನರ್ ಮತ್ತು ಸೋಲ್ ಮೆಟ್ರೊಪಾಲಿಟನ್ ಸರ್ಕಾರದಲ್ಲಿ ಆರ್ಥಿಕ ನೀತಿಯ ಉಪಮೇಯರ್ ಸೇರಿದಂತೆ ಸರ್ಕಾರಿ ಅಧಿಕಾರಿಗಳ ಜೊತೆಗೆ ಸಭೆಗಳನ್ನು ನಡೆಸಲಾಯಿತು.

ದಕ್ಷಿಣ ಕೊರಿಯಾದಲ್ಲಿ ನಡೆದ ಸಭೆಗಳಲ್ಲಿ ಸ್ಯಾಮ್ಸಂಗ್ ಎಲೆಕ್ಟ್ರಾನಿಕ್ಸ್, ಎಲ್‌ಜಿ ಎನರ್ಜಿ ಸಲ್ಯೂಷನ್ಸ್, ಎಲ್‌ಎಕ್ಸ್ ಎಲೆಕ್ಟ್ರಾನಿಕ್ಸ್, ನಿಫ್ಕೊ ಕೊರಿಯಾ, ಒಸಿಐ ಹೋಲ್ಡಿಂಗ್ಸ್, ಕ್ರಾಫ್ಟನ್, ಎಚ್‌ವೈಎಸಿ, ಹುಂಡೈ ಮೋಟರ್ಸ್, ವೈಜಿ–1, ಹೊಯ್ಸಂಗ್ ಅಡ್ವಾನ್ಸಡ್ ಮಟೀರಿಯಲ್ಸ್ ಮುಂತಾದವು ಸೇರಿವೆ. ತಕ್ಷಣದ ಈ ಹೂಡಿಕೆಗಳನ್ನು ಹೊರತುಪಡಿಸಿ, ವಾಹನ ತಯಾರಿಕೆ, ಎಲೆಕ್ಟ್ರಾನಿಕ್ಸ್ ಮತ್ತು ಇಂಧನ ಪರಿಹಾರ ವಲಯಗಳಲ್ಲಿ 25,000 ಕೋಟಿ ರೂ. ಮೊತ್ತದ ಬಂಡವಾಳ ಹೂಡಿಕೆ ಸಾಧ್ಯತೆಗಳನ್ನೂ ರಾಜ್ಯ ನಿಯೋಗ ಗುರುತಿಸಿದೆ. ಈ ಹೂಡಿಕೆ ನಿರೀಕ್ಷೆ, ಕರ್ನಾಟಕ ಜಾಗತಿಕ ಹೂಡಿಕೆದಾರರ ಪಾಲಿಗೆ ಆಕರ್ಷಕ ತಾಣವಾಗಿರುವುದರ ಮಹತ್ವ ಸೂಚಿಸುತ್ತದೆ ಎಂದರು.

ಆಷಾಢ ಮಾಸದ ಎಲ್ಲಾ ಶುಕ್ರವಾರದಿಂದ ಭಾನುವಾರದವರೆಗೆ

ಚಾಮುಂಡಿಬೆಟ್ಟಕ್ಕೆ ಖಾಸಗಿ ವಾಹನ ಸಂಚಾರ ನಿರ್ಬಂಧ

- ಮೈಸೂರು ನಗರ ಪೊಲೀಸ್ ಆಯುಕ್ತರಿಂದ ಅಧಿಸೂಚನೆ ಪ್ರಕಟ
- ಲಲಿತಮಹಲ್ ಹೆಲಿಪ್ಯಾಡ್ ಮೈದಾನದಲ್ಲಿ ಖಾಸಗಿ ವಾಹನ ನಿಲುಗಡೆಗೆ ವ್ಯವಸ್ಥೆ
- ಹೆಲಿಪ್ಯಾಡ್ ಮೈದಾನದಿಂದ ಬೆಟ್ಟಕ್ಕೆ ಕೆಎಸ್‌ಆರ್‌ಟಿಸಿ ಬಸ್ ಸೌಲಭ್ಯ
- ಬೆಟ್ಟದ ಬಸ್ ನಿಲ್ದಾಣದ ಎದುರಿನ ಮೈದಾನದಲ್ಲಿ ಪ್ರಸಾದ ವಿನಿಯೋಗಕ್ಕೆ ಸ್ಥಳಾವಕಾಶ



ಆಷಾಢ ಶುಕ್ರವಾರದ ವೇಳೆ ಚಾಮುಂಡಿಬೆಟ್ಟದಲ್ಲಿ ಭಕ್ತಸಾಗರ. (ಸಂಗ್ರಹ ಚಿತ್ರ)

ಮೈಸೂರು, ಜು.10(ಪಿಎಂ)– ಆಷಾಢ ಮಾಸದ ಎಲ್ಲಾ ಶುಕ್ರವಾರದಿಂದ ಭಾನುವಾರ ರಾತ್ರಿ ದೇವರ ದರ್ಶನ ಮುಗಿಯುವವರೆಗೆ ಚಾಮುಂಡಿಬೆಟ್ಟಕ್ಕೆ ಖಾಸಗಿ ವಾಹನಗಳ ಸಂಚಾರ ನಿರ್ಬಂಧಿಸಿ ನಗರ ಪೊಲೀಸ್ ಆಯುಕ್ತರು ಅಧಿಸೂಚನೆ ಹೊರಡಿಸಿದ್ದಾರೆ.

ಚಾಮುಂಡಿಬೆಟ್ಟದ ರಸ್ತೆಯಲ್ಲಿ ಸಂಚಾರ ದಟ್ಟಣೆ ನಿಯಂತ್ರಿಸಲು ಹಾಗೂ ಸಾರ್ವಜನಿಕರ ಸುರಕ್ಷತೆಯ ದೃಷ್ಟಿಯಿಂದ ಆಷಾಢ ಮಾಸದ ಶುಕ್ರವಾರ ದಿನವಾದ ಜು.12ರಿಂದ ಭಾನುವಾರವಾದ ಜು.14ರವರೆಗೆ, ಜು.19ರಿಂದ ಜು.21ವರೆಗೆ, ಜು.26ರಿಂದ ಜು.28ರವರೆಗೆ, ಆ.2ರಿಂದ ಆ.4ರವರೆಗೆ ದೇವರ ದರ್ಶನ ಮುಕ್ತಾಯವಾಗುವವರೆಗೆ ವಾಹನಗಳ ಪಾರ್ಕಿಂಗ್ ಮತ್ತು ಸಂಚಾರದ ಮೇಲೆ ನಿರ್ಬಂಧ ವಿಧಿಸಿ ಮೈಸೂರು ನಗರ ಪ್ರಭಾರ ಪೊಲೀಸ್ ಆಯುಕ್ತ ಡಾ.ಎಂ.ಬಿ.ಬೋರಲಿಂಗಯ್ಯ ಅಧಿಸೂಚನೆ ಹೊರಡಿಸಿದ್ದಾರೆ.

ಈ ದಿನಗಳಲ್ಲಿ ಚಾಮುಂಡಿಬೆಟ್ಟಕ್ಕೆ ಆಗಮಿಸುವ ಭಕ್ತಾದಿಗಳು ತಮ್ಮ ವಾಹನಗಳನ್ನು ಲಲಿತಮಹಲ್ ಮೈದಾನದಲ್ಲಿ ನಿಲುಗಡೆ ಮಾಡಿ, ಜಿಲ್ಲಾಡಳಿತ ವತಿಯಿಂದ ವ್ಯವಸ್ಥೆಗೊಳಿಸಿರುವ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ದೇವಸ್ಥಾನಕ್ಕೆ ತೆರಳಬೇಕು. ಆಷಾಢ ಶುಕ್ರವಾರಗಳಲ್ಲಿ ಮಾತ್ರ ಉಚಿತ ಬಸ್ ಸೌಲಭ್ಯವನ್ನು ಬೆಳಗಿನ ಜಾವ 5 ಗಂಟೆಯಿಂದ ರಾತ್ರಿ 8 ಗಂಟೆಯವರೆಗೆ ವ್ಯವಸ್ಥೆ ಕಲ್ಪಿಸಲಾಗಿದೆ (ಆಷಾಢ ಶನಿವಾರ ಮತ್ತು ಭಾನುವಾರಗಳಂದು ಉಚಿತ ಬಸ್ ಸೌಲಭ್ಯ ಇರುವುದಿಲ್ಲ).

ಈ ನಿರ್ಬಂಧವು ಅತಿ ಶಿಷ್ಟಾಚಾರವಿರುವ ಗಣ್ಯರು ಮತ್ತು ಅತಿ ಗಣ್ಯರ ವಾಹನಗಳಿಗೆ ಅನ್ವಯಿಸುವುದಿಲ್ಲ. ಈ ದಿನಗಳಂದು ಚಾಮುಂಡಿಬೆಟ್ಟದ ತಾವರೆಕಟ್ಟೆಯಿಂದ, ಉತ್ತನಹಳ್ಳಿ ರಸ್ತೆ ಕಡೆಯಿಂದ ಮತ್ತು ಇಂಡಸ್‌ವ್ಯಾಲಿ ರಸ್ತೆ ಮೂಲಕ ಚಾಮುಂಡಿಬೆಟ್ಟಕ್ಕೆ ಹೋಗುವ ಎಲ್ಲಾ ಮಾದರಿಯ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದೆ.

ಗ್ರಾಪಂ ಕಚೇರಿ, ಚಾಮುಂಡಿ ಬೆಟ್ಟದಲ್ಲಿನ ನಿವಾಸಿಗಳು ತಮ್ಮ ವಾಹನಗಳಿಗೆ ಅನುಮತಿ ಪಡೆಯಲು ಅಗತ್ಯ ದಾಖಲಾತಿಗಳಾದ ಡಿಎಲ್, ವಾಹನದ ದಾಖಲಾತಿ, ವಾಸಸ್ಥಳ ದೃಢೀಕರಣ ಪತ್ರ, ಆಧಾರ್ ಕಾರ್ಡ್, ಮತದಾರರ ಗುರುತಿನ ಚೀಟಿಗಳ ಜೆರಾಕ್ಸ್ ಪ್ರತಿಗಳನ್ನು ಸಲ್ಲಿಸಿ, ಗುರುತಿನ ಚೀಟಿಯನ್ನು ಪಡೆದು ಬೆಟ್ಟಕ್ಕೆ ಪ್ರವೇಶಿಸಲು ಸೂಚಿಸಲಾಗಿದೆ.

ಭಕ್ತಾದಿಗಳು ತಮ್ಮ ವಾಹನಗಳನ್ನು ಲಲಿತಮಹಲ್ ರಸ್ತೆಯಲ್ಲಿರುವ ಲಲಿತ ಮಹಲ್ ಮೈದಾನದ ಖಾಲಿ ಸ್ಥಳದಲ್ಲಿ ಸಂಚಾರ ಪೊಲೀಸರು ನೀಡುವ ಸೂಚನೆಯ ಅನುಸಾರ ಕ್ರಮಬದ್ಧವಾಗಿ ನಿಗದಿಪಡಿಸಿರುವ ಸ್ಥಳಗಳಲ್ಲಿಯೇ ನಿಲುಗಡೆ ಮಾಡ ಬೇಕು. ಲಲಿತಾದ್ರಿಪುರದ ರಸ್ತೆ ಕಡೆಯಿಂದ ಚಾಮುಂಡಿ ಬೆಟ್ಟಕ್ಕೆ ಬರುವ ಭಕ್ತಾದಿಗಳು ವಾಹನಗಳನ್ನು ಲಲಿತಾದ್ರಿ ಪುರದ ರಸ್ತೆ ಮೂಲಕ ಲಲಿತಮಹಲ್ ಮೈದಾನ ತಲುಪಿ, ಲಲಿತ ಮಹಲ್ ಮೈದಾನದ ಬಳಿ ನಿಗದಿಪಡಿಸಿದ ಸ್ಥಳದಲ್ಲಿ ನಿಲುಗಡೆ ಮಾಡಬೇಕು.

ಉತ್ತನಹಳ್ಳಿ ರಸ್ತೆ ಕಡೆಯಿಂದ ಚಾಮುಂಡಿ ಬೆಟ್ಟಕ್ಕೆ ಬರುವ ಭಕ್ತಾದಿಗಳು ನಂಜನಗೂಡು ರಸ್ತೆ ಮೂಲಕ ಎಂ.ಎಲ್.ಸೋಮಸುಂದರಂ ವೃತ್ತ–ಮಹಾರಾಣಾ ಪ್ರತಾಪ ಸಿಂಹ ವೃತ್ತ–ಸಂಗೊಳ್ಳಿ ರಾಯಣ್ಣ ವೃತ್ತ–ಲಲಿತ ಮಹಲ್ ರಸ್ತೆ ಮೂಲಕ ಲಲಿತಮಹಲ್ ಮೈದಾನದ ಖಾಲಿ ಸ್ಥಳದಲ್ಲಿ ವಾಹನಗಳನ್ನು ನಿಲುಗಡೆ ಮಾಡಬೇಕು.

ಭಕ್ತಾದಿಗಳನ್ನು ಕರೆದುಕೊಂಡು ಹೋಗುವ ಕೆಎಸ್‌ಆರ್‌ಟಿಸಿ ನಗರ ಸಾರಿಗೆ ಬಸ್ಸುಗಳು ಅವುಗಳು ನಿಲುಗಡೆಯಾಗುವ ಸ್ಥಳದಿಂದ ಲಲಿತಾದ್ರಿಪುರದ ರಸ್ತೆ–ಐವಾಕ್ ರಸ್ತೆ ಮೂಲಕ ಚಾಮುಂಡಿ

ಭಕ್ತಾದಿಗಳು ತಮ್ಮ ವಾಹನಗಳನ್ನು ಲಲಿತಮಹಲ್ ಮೈದಾನದಲ್ಲಿ ನಿಲುಗಡೆ ಮಾಡಿ, ಜಿಲ್ಲಾಡಳಿತ ವತಿಯಿಂದ ವ್ಯವಸ್ಥೆಗೊಳಿಸಿರುವ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ದೇವಸ್ಥಾನಕ್ಕೆ ತೆರಳಬೇಕು. ಆಷಾಢ ಶುಕ್ರವಾರಗಳಲ್ಲಿ ಮಾತ್ರ ಉಚಿತ ಬಸ್ ಸೌಲಭ್ಯವನ್ನು ಬೆಳಗಿನ ಜಾವ 5 ಗಂಟೆಯಿಂದ ರಾತ್ರಿ 8 ಗಂಟೆಯವರೆಗೆ ವ್ಯವಸ್ಥೆ ಕಲ್ಪಿಸಲಾಗಿದೆ (ಆಷಾಢ ಶನಿವಾರ ಮತ್ತು ಭಾನುವಾರಗಳಂದು ಉಚಿತ ಬಸ್ ಸೌಲಭ್ಯ ಇರುವುದಿಲ್ಲ)

ದೇವಸ್ಥಾನದಲ್ಲಿ ಪ್ರತ್ಯೇಕ ಹೆಲ್ಪ್ ಲೈನ್, ವಿದ್ಯುತ್ ದೀಪಗಳ ವ್ಯವಸ್ಥೆ, ಭದ್ರತೆಯ ದೃಷ್ಟಿಯಿಂದ ಸಿಸಿ ಟಿವಿ ಕ್ಯಾಮರಾಗಳನ್ನು ಅಳವಡಿಸಲಾಗಿದೆ. ಜೊತೆಗೆ ಲಲಿತ ಮಹಲ್ ಮೈದಾನದಲ್ಲಿ ವಾಹನಗಳ ನಿಲುಗಡೆಗೆ ಭದ್ರತಾ ವ್ಯವಸ್ಥೆ, ತಾತ್ಕಾಲಿಕ ಬಸ್ ನಿಲ್ದಾಣ, ಶೌಚಾಲಯ, ವೈದ್ಯಕೀಯ ಸೌಲಭ್ಯ ಹಾಗೂ ವಿದ್ಯುತ್ ದೀಪಗಳ ವ್ಯವಸ್ಥೆ, ಕುಡಿಯುವ ನೀರಿನ ಸೌಲಭ್ಯಗಳನ್ನು ಕಲ್ಪಿಸಲಾಗಿದೆ.

ಬೆಟ್ಟದ ರಸ್ತೆಯನ್ನು ತಲುಪಿ, ಚಾಮುಂಡಿ ಬೆಟ್ಟದ ಮೇಲೆ ಸಾರಿಗೆ ಸಂಸ್ಥೆ ಬಸ್ ನಿಲ್ದಾಣದಲ್ಲಿ ನಿಲುಗಡೆ ಮಾಡಿ ಪ್ರಯಾಣಿಕರನ್ನು ಇಳಿಸಬೇಕು. ಬೆಟ್ಟದ ಮೇಲಿನಿಂದ ಭಕ್ತಾದಿಗಳನ್ನು ವಾಪಸ್ ಕರೆದುಕೊಂಡು ಬರುವಾಗ ನಗರ ಸಾರಿಗೆ ಕೆಎಸ್‌ಆರ್‌ಟಿಸಿ ಬಸ್ಸುಗಳು ಚಾಮುಂಡಿ ಬೆಟ್ಟದ ಮೇಲಿನ ನಗರ ಸಾರಿಗೆ ಬಸ್ ನಿಲ್ದಾಣದಿಂದ ಚಾಮುಂಡಿ ಬೆಟ್ಟದ ರಸ್ತೆಯಲ್ಲಿ ತಾವರೆ ಕಟ್ಟೆ ಸಂಗೊಳ್ಳಿ ರಾಯಣ್ಣ ವೃತ್ತದ ಬಳಿ ಬಲತಿರುವು ಪಡೆದು ಲಲಿತಮಹಲ್ ಮುಖ್ಯ ರಸ್ತೆ ಮೂಲಕ ಲಲಿತಮಹಲ್ ಮೈದಾನ ಬಳಿ ಸಾರಿಗೆ ಬಸ್ಸುಗಳನ್ನು ನಿಲುಗಡೆ ಮಾಡುವ ಸ್ಥಳದಲ್ಲಿ ನಿಲುಗಡೆ ಮಾಡಬೇಕು. ದೇವಸ್ಥಾನಕ್ಕೆ ಬರುವ ಗಣ್ಯರ, ಅತಿಗಣ್ಯರ ವಾಹನಗಳು, ಕರ್ತವ್ಯದ ಮೇಲೆ ತೆರಳುವವರ ವಾಹನಗಳು ಮತ್ತು ಮಾಧ್ಯಮ ವಾಹನಗಳಿಗೆ ಚಾಮುಂಡಿಬೆಟ್ಟದ ಮೇಲೆ ತೆರಳಲು ಅವಕಾಶವಿದ್ದು, ಸದರಿ ವಾಹನಗಳಿಗೆ ಚಾಮುಂಡಿ ಬೆಟ್ಟದಲ್ಲಿ ಈಗಾಗಲೇ ಬಹುಮಹಡಿ ಪಾರ್ಕಿಂಗ್ ಸ್ಥಳದಲ್ಲಿ ನಿಲುಗಡೆಗೆ ವ್ಯವಸ್ಥೆ ಮಾಡಲಾಗಿದೆ. ಬಹುಮಹಡಿ ಪಾರ್ಕಿಂಗ್ ಸ್ಥಳದಿಂದ ದೇವಸ್ಥಾನದ ವರೆಗೆ ಎಲ್ಲಾ ಮಾದರಿಯ ವಾಹನಗಳ ಪ್ರವೇಶವನ್ನು ನಿರ್ಬಂಧಿಸಲಾಗಿದೆ.

ಮೈಸೂರು ನಗರ ಬಸ್ ನಿಲ್ದಾಣದಿಂದ ಜನರನ್ನು ಕರೆತರುವ ಕೆಎಸ್‌ಆರ್‌ಟಿಸಿ ರೂಟ್ ಬಸ್ಸುಗಳು ಸಂಗೊಳ್ಳಿ ರಾಯಣ್ಣ ವೃತ್ತ–ಲಲಿತ ಮಹಲ್ ಹೆಲಿಪ್ಯಾಡ್ ವೈ ಜಂಕ್ಷನ್ ಬಳಿ ಬಲತಿರುವು ಪಡೆದು ನಂತರ ಲಲಿತಾದ್ರಿಪುರ ರಸ್ತೆಯಲ್ಲಿ ಐವಾಕ್ ರಸ್ತೆ ಮುಖಾಂತರ ಚಾಮುಂಡಿಬೆಟ್ಟಕ್ಕೆ ಹೋಗಬೇಕು. ಚಾಮುಂಡಿಬೆಟ್ಟದ ಪಾದದಿಂದ ಮೆಟ್ಟಿಲು ಮುಖಾಂತರ ದೇವಸ್ಥಾನಕ್ಕೆ ಕಾಲು ನಡಿಗೆಯಲ್ಲಿ ಹೋಗುವ ಭಕ್ತಾಧಿಗಳು ತಮ್ಮ ವಾಹನಗಳನ್ನು ಪಿಂಜರಾಪೋಲ್ ಮುಂಭಾಗದಲ್ಲಿರುವ ಮೈದಾನದ ಪಾರ್ಕಿಂಗ್ ಸ್ಥಳದಲ್ಲಿ ಪೊಲೀಸರು ಸೂಚಿಸುವ ಸ್ಥಳದಲ್ಲಿ ನಿಲ್ಲಿಸಿ ದೇವಸ್ಥಾನಕ್ಕೆ ತೆರಳಬೇಕು.

ಪ್ರತಿ ಆಷಾಢ ಶುಕ್ರವಾರದ ಹಿಂದಿನ ದಿನ ಅಂದರೆ ಗುರುವಾರ ದಿನದ ರಾತ್ರಿ 10 ಗಂಟೆಯಿಂದಲೇ ಚಾಮುಂಡಿಬೆಟ್ಟಕ್ಕೆ ಎಲ್ಲಾ ಮಾದರಿಯ ವಾಹನಗಳಿಗೆ ಪ್ರವೇಶ ನಿರ್ಬಂಧಿಸಲಾಗಿದೆ ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ಉಚಿತ ಪ್ರಸಾದ ವಿನಿಯೋಗದ ವಾಹನಗಳಿಗೆ ಈ ಬಾರಿ ಚಾಮುಂಡಿಬೆಟ್ಟದಲ್ಲಿ ಬಸ್ ನಿಲ್ದಾಣದ ಎದುರು ಇರುವ ಪಾರ್ಕಿಂಗ್ ಜಾಗದಲ್ಲಿ ವ್ಯವಸ್ಥೆ ಮಾಡಿದ್ದು ಪ್ರಸಾದ ವಿನಿಯೋಗದ ವಾಹನಗಳಿಗೆ ಜಿಲ್ಲಾಡಳಿತದಿಂದ ನೀಡುವ ಪಾಸ್ ಕಡ್ಡಾಯ. ಸದರಿ ವಾಹನಗಳು ನಿಗದಿಪಡಿಸಿದ ಸಮಯದಲ್ಲಿಯೇ ಪ್ರಸಾದ ವಿನಿಯೋಗ ಮಾಡಬೇಕು. ಮುಂಚಿತವಾಗಿ ಅಥವಾ ತಡವಾಗಿ ಬಂದ ಪ್ರಸಾದ ವಿನಿಯೋಗದ ವಾಹನಗಳಿಗೆ ಪ್ರವೇಶ ಇಲ್ಲ.

75 ಸಾವಿರ ಗಡಿ ದಾಟಿದ ಅಪರಂಜಿ ಚಿನ್ನದ ಬೆಲೆ



ನವದೆಹಲಿ: ಅಪರಂಜಿ ಚಿನ್ನದ ಬೆಲೆ ಪ್ರತಿ ಗ್ರಾಂಗೆ ಬುಧವಾರ ರೂ. 400ರಷ್ಟು ಹೆಚ್ಚಳವಾಗಿದ್ದು, ರಾಷ್ಟ್ರ ರಾಜಧಾನಿಯಲ್ಲಿ ಪ್ರತಿ 10 ಗ್ರಾಂ ಚಿನ್ನದ ಬೆಲೆ 75,050ಕ್ಕೆ ನಿಗದಿಯಾಗಿದೆ ಎಂದು ಅಖಿಲ ಭಾರತ ಸರಾಫ್ ಒಕ್ಕೂಟ ತಿಳಿಸಿದೆ.

ಮಂಗಳವಾರ ಪ್ರತಿ ಹತ್ತು ಗ್ರಾಂ ಚಿನ್ನದ ದರ 74,650ರಷ್ಟಿತ್ತು. ಬೆಳ್ಳಿಯ ದರದಲ್ಲಿ ಯಾವುದೇ ಬದಲಾವಣೆಯಾಗಿಲ್ಲ. ಪ್ರತಿ ಕೆ.ಜಿ. ಬೆಳ್ಳಿಗೆ 94,400 ಇದೆ. ದೇಶೀಯ ಮಾರುಕಟ್ಟೆಯಲ್ಲಿ ಹಳದಿ ಲೋಹಕ್ಕೆ ಹೆಚ್ಚಿನ ಬೇಡಿಕೆ ಉಂಟಾಗಿದ್ದರಿಂದ, ಚಿನ್ನದ ಬೆಲೆ ಏರುಮುಖಿಯಾಗಿದೆ ಎಂದೆನ್ನಲಾಗಿದೆ. ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಪ್ರತಿ ಔನ್ಸ್‌ಗೆ (28.34 ಗ್ರಾಂ) 2,380 ಅಮೆರಿಕನ್ ಡಾಲರ್‌ನಷ್ಟು ದರ ನಿಗದಿಯಾಗಿದೆ. ಪ್ರತಿ ಔನ್ಸ್ ಮೇಲೆ 12.60 ಅಮೆರಿಕನ್ ಡಾಲರ್‌ನಷ್ಟು ಬೆಲೆ ಹೆಚ್ಚಳವಾಗಿದೆ. ಅಮೆರಿಕ ಸದ್ಯ ಎದುರಿಸುತ್ತಿರುವ ಸಮಸ್ಯೆಗಳಲ್ಲಿ ಹಣದುಬ್ಬರ ಒಂದೇ ಕಾರಣವಲ್ಲ. ಬ್ಯಾಂಕ್‌ನ ಬಡ್ಡಿದರ ಕಡಿತವಾಗುತ್ತಿದ್ದಂತೆ ಚಿನ್ನ ಹಾಗೂ ಬೆಳ್ಳಿಯ ಬೆಲೆ ಹೆಚ್ಚಳವಾಗಿದೆ.

ದೇಶ - ವಿದೇಶ

ಬೆರಿಲ್ ಚಂಡಮಾರುತಕ್ಕೆ ಅಮೆರಿಕದಲ್ಲಿ 18 ಬಲಿ: ಲಕ್ಷಾಂತರ ಮನೆಗಳಿಗೆ ವಿದ್ಯುತ್ ಸಂಪರ್ಕ ಕಡಿತ

ವಾಷಿಂಗ್ಟನ್ (ಅಮೆರಿಕ), ಜು.10– ಬೆರಿಲ್ ಚಂಡಮಾರುತದ ಆರ್ಭಟಕ್ಕೆ ಅಮೆರಿಕ ತತ್ತರಿಸಿದೆ. ಅಮೆರಿಕದ ಉತ್ತರ ಭಾಗದ ರಾಜ್ಯಗಳಲ್ಲಿ ಚಂಡ ಮಾರುತದ ಅಬ್ಬರ ತೀವ್ರವಾಗಿದ್ದು, ಕನಿಷ್ಠ 8 ಮಂದಿ ಸಾವನ್ನಪ್ಪಿದ್ದಾರೆ. ಲೆಕ್ಕವಿಲ್ಲ ದಷ್ಟು ಮರಗಳು ಧರೆಗುರುಳಿದ್ದು, ಹಲವೆಡೆ ಭಾರಿ ಪ್ರವಾಹ ಪರಿಸ್ಥಿತಿ ಸೃಷ್ಟಿಯಾಗಿದೆ. ನಂತರ ಮಂಗಳ ವಾರ ಸಂಜೆ ವೇಳೆ ಚಂಡಮಾರುತದ ಪ್ರಕೋಪ ಕಡಿಮೆಯಾಗಿದೆ.



ಕೆರಿಬಿಯನ್ ದ್ವೀಪ ಸಮೂಹದ ಬಳಿ ಬೆರಿಲ್ ಚಂಡಮಾರುತ ಆರಂಭಗೊಂಡ ದಿನದಿಂದ ಹಿಡಿದು ಈವರೆಗೂ ಚಂಡಮಾರುತಕ್ಕೆ ಬಲಿಯಾದವರ ಒಟ್ಟು ಸಂಖ್ಯೆ 18ಕ್ಕೆ ಏರಿಕೆಯಾಗಿದೆ.

ಬೆರಿಲ್ ಚಂಡಮಾರುತದ ಆರ್ಭಟದಿಂದಾಗಿ ಟೆಕ್ಸಾಸ್ ರಾಜ್ಯದಲ್ಲಿ ಒಟ್ಟು 2.2 ದಶಲಕ್ಷ ಮನೆಗಳಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಂಡಿದೆ. ಮಂಗಳವಾರ ಸಂಜೆ ವೇಳೆಗೆ ವಿದ್ಯುತ್ ಸಂಪರ್ಕ ಪುನರ್ ಸ್ಥಾಪಿಸಲು ಪ್ರಯತ್ನಗಳು ನಡೆದವು. ಆದರೆ, ವಿದ್ಯುತ್ ಗ್ರಿಡ್‌ಗಳು ಹಾನಿಗೊಳಗಾಗಿರುವ ಹಿನ್ನೆಲೆಯಲ್ಲಿ ವಿದ್ಯುತ್ ಸಂಪರ್ಕ ಪುನರ್ ಸ್ಥಾಪನೆ ಸಾಧ್ಯ ಆಗಲಿಲ್ಲ. ಇದರ ಜೊತೆಯಲ್ಲೇ ಟೆಕ್ಸಾಸ್ ರಾಜ್ಯದಲ್ಲಿ ಉಷ್ಣಾಂಶ ಕೂಡಾ 41 ಡಿಗ್ರಿ ಸೆಲ್ಸಿಯಸ್ ತಲುಪಿದ್ದು, ಜನರಿಗೆ ಬದುಕು ಅಸಹನೀಯ ಎನ್ನುವಂತಾಗಿದೆ. ಹೀಗಾಗಿ, ತಾತ್ಕಾಲಿಕ ಆಶ್ರಯ ತಾಣಗಳಲ್ಲೂ ಜನರೇಟರ್ ಮೂಲಕ ಎಸಿ ಸಂಪರ್ಕ ಕಲ್ಪಿಸಲಾಗಿದ್ದು, ಜನರು ಇಲ್ಲಿ ಆಶ್ರಯ ಪಡೆದಿದ್ದಾರೆ. ಇನ್ನೊಂದೆಡೆ ರಿಪೇರಿ ಕಾರ್ಯ ಮುಂದುವರೆದಿದೆ.

8,000 ಕಿಮೀ ದೂರದಿಂದ ರೋಗಿಗೆ ರೋಬೋಟಿಕ್ ಸರ್ಜರಿ ಮಾಡಿದ ವೈದ್ಯರು

ಬೀಜಿಂಗ್ (ಚೀನಾ), ಜು.10– ಚೀನಾದ ಶಸ್ತ್ರಚಿಕಿತ್ಸಕರೊಬ್ಬರು 8,000 ಕಿಮೀ ದೂರದಿಂದ ರೋಗಿಗೆ ರೋಬೋಟಿಕ್ ಸರ್ಜರಿ ಮಾಡಿದ್ದಾರೆ. ಈ ರೀತಿಯ ಶಸ್ತ್ರಚಿಕಿತ್ಸೆ ವಿಶ್ವದಲ್ಲೇ ಮೊದಲ ಬಾರಿಗೆ ನಡೆದಿದೆ. ರೋಗಿ ಚೀನಾದ ಬೀಜಿಂಗ್ ನಲ್ಲಿರುವ ಆಸ್ಪತ್ರೆಯಲ್ಲಿ ದಾಖಲಾಗಿದ್ದು, ವೈದ್ಯ ರೋಮ್‌ನಲ್ಲಿ ಕುಳಿತು ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ.



ಈ ರೀತಿಯ ದೂರದ ಕಾರ್ಯಾಚರಣೆಯನ್ನು ಟೆಲಿಸರ್ಜರಿ ಎಂದೂ ಕರೆಯಲಾಗುತ್ತದೆ. 5ಜಿ ನೆಟ್‌ವರ್ಕ್ ಮತ್ತು ಫೈಬರ್–ಆಪ್ಟಿಕ್ ಸಂಪರ್ಕಗಳ ಸಹಾಯದಿಂದ ಈ ಶಸ್ತ್ರಚಿಕಿತ್ಸೆ ನಡೆಸಲಾಗಿದೆ. ಟೆಲಿಸರ್ಜರಿಯನ್ನು ರಿಮೋಟ್–ನಿಯಂತ್ರಿತ ರೋಬೋಟಿಕ್ ಸಹಾಯದಿಂದ ನಡೆಸಲಾಗುವುದರಿಂದ ಶಸ್ತ್ರಚಿಕಿತ್ಸಕ ಮತ್ತು ರೋಗಿಯು ಒಂದೇ ಸ್ಥಳದಲ್ಲಿರುವ ಅಗತ್ಯವಿಲ್ಲ. ಭವಿಷ್ಯದಲ್ಲಿ ವೈದ್ಯರ ಸೇವೆಯನ್ನು ಎಲ್ಲಿಂದ ಬೇಕಾದರೂ ಪಡೆಯಲು ಈ ಪ್ರಯೋಗ ನೆರವಾಗಿದೆ. ವರದಿಯ ಪ್ರಕಾರ ಈ ಟೆಲಿಸರ್ಜರಿಯು ಪೀಪಲ್ಸ್ ಲಿಬರೇಶನ್ ಆರ್ಮಿ (ಪಿಎಲ್‌ಎ) ಜನರಲ್ ಆಸ್ಪತ್ರೆಯ ನಿರ್ದೇಶಕ ಜಾಂಗ್ ಕ್ಸು ಅವರ ನಾಯಕತ್ವದಲ್ಲಿ ನಡೆದಿದೆ. ಚೀನಾದಲ್ಲಿ ವೈದ್ಯಕೀಯ ತಂಡ ರೋಗಿಯೊಂದಿಗೆ ಇದ್ದರೆ, ಡಾ. ಜಾಂಗ್ ಇಟಲಿಯಿಂದಲೇ ಶಸ್ತ್ರಚಿಕಿತ್ಸೆ ಮಾಡಿದ್ದಾರೆ.

ಲಿಂಗ ಪರಿವರ್ತನೆ ಮಾಡಿಕೊಂಡ ಸೀನಿಯರ್ ಐಆರ್‌ಎಸ್ ಅಧಿಕಾರಿ

ಹೈದರಾಬಾದ್, ಜು.10– ಹಿರಿಯ ಐಆರ್‌ಎಸ್ ಅಧಿಕಾರಿ ಎಂ.ಅನುಸೂಯಾ ಅವರು ಲಿಂಗ ಬದಲಾಯಿಸಿಕೊಂಡಿದ್ದಾರೆ. ಮಹಿಳೆಯಾಗಿದ್ದ ಇವರು ಈಗ ಎಂ.ಅನುಕ್ತಿರ್ ಆಗಿದ್ದಾರೆ. ಸರ್ಕಾರವು ಐತಿಹಾಸಿಕ ನಿರ್ಧಾರದಲ್ಲಿ ಈ ಅಧಿಕಾರಿಯ ಹೆಸರು ಮತ್ತು ಲಿಂಗವನ್ನು ಅಧಿಕೃತವಾಗಿ ಬದಲಾಯಿಸುವ ಮನವಿಯನ್ನು ಅಂಗೀಕರಿಸಿದೆ. ಭಾರತೀಯ ನಾಗರಿಕ ಸೇವಾ ಇತಿಹಾಸದಲ್ಲಿ ಅಧಿಕಾರಿಯೊಬ್ಬರು ಇಂತಹ ಅನುಮತಿ ಪಡೆದಿರುವುದು ಇದೇ ಮೊದಲು.



35 ವರ್ಷದ ಎಂ ಅನುಸೂಯಾ ಅವರು ಹೈದರಾಬಾದ್‌ನಲ್ಲಿರುವ ಕಸ್ಟಮ್ಸ್ ಅಬಕಾರಿ ಮತ್ತು ಸೇವಾ ತೆರಿಗೆ ಮೇಲ್ಮನವಿ ನ್ಯಾಯಮಂಡಳಿಯ ಮುಖ್ಯ ಆಯುಕ್ತರ ಕಚೇರಿಯಲ್ಲಿ ಜಂಟಿ ಆಯುಕ್ತರಾಗಿ ನೇಮಕಗೊಂಡಿದ್ದಾರೆ. ಹಣಕಾಸು ಸಚಿವಾಲಯ ಹೊರಡಿಸಿದ ಆದೇಶದ ಪ್ರಕಾರ 2013 ರ ಬ್ಯಾಚ್ ಐಆರ್‌ಎಸ್ ಅಧಿಕಾರಿ ಎಂ. ಅನುಸೂಯಾ ಅವರು ಸಚಿವಾಲಯಕ್ಕೆ ಸಲ್ಲಿಸಿದ ಮನವಿಯಲ್ಲಿ ತಮ್ಮ ಮಿಸ್ ಎಂ. ಅನುಸೂಯಾ ಎಂಬ ಹೆಸರನ್ನು ಶ್ರೀ ಎಂ. ಅನುಕ್ತಿರ್ ಸೂರ್ಯ ಎಂದು ಮತ್ತು ಅವರ ಲಿಂಗವನ್ನು ಹೆಣ್ಣಿನಿಂದ ಪುರುಷ ಎಂದು ಬದಲಾಯಿಸಲು ಸರ್ಕಾರದ ಅನುಮೋದನೆ ಕೋರಿದ್ದಾರೆ. ಹಿರಿಯ ಐಆರ್‌ಎಸ್ ಅಧಿಕಾರಿಗಳು ಈ ಆದೇಶವನ್ನು ಶ್ಲಾಘಿಸಿದ್ದಾರೆ, ಇದನ್ನು 'ಪ್ರಗತಿಪರ' ಎಂದು ಕರೆದಿದ್ದಾರೆ.

ಇಸ್ಲಾಮಿಕ್ ಸ್ಟೇಟ್ ಮುಖಂಡನ ಪತ್ನಿಗೆ ಮರಣದಂಡನೆ ಶಿಕ್ಷೆ



ದುಬೈ, ಜು.10– ಇಸ್ಲಾಮಿಕ್ ಸ್ಟೇಟ್ (ಐಎಸ್)ನ ಪ್ರಮುಖ ನಾಯಕನಾಗಿದ್ದ ಅಬು ಬಾಕರ್ ಅಲ್ ಬಾಗ್ದಾದಿ ಪತ್ನಿಗೆ ಇರಾಕ್‌ನ ನ್ಯಾಯಾಲಯ ಬುಧವಾರ ಮರಣದಂಡನೆ ಶಿಕ್ಷೆ ವಿಧಿಸಿದೆ. ತಮ್ಮ ಮನೆಯಲ್ಲಿ ಯಾಜಿದಿ ಮಹಿಳೆಯರನ್ನು ಅಕ್ರಮವಾಗಿ ಬಂಧಿಸಿಟ್ಟಿದ್ದ ಆರೋಪವನ್ನು ಈ ಮಹಿಳೆ ಎದುರಿಸುತ್ತಿದ್ದರು. ಬಾಗ್ದಾದಿ ಮೃತಪಟ್ಟಿದ್ದಾನೆ. ಇದೀಗ ನ್ಯಾಯಾಲಯ ಆತನ ಮಡದಿಗೆ ಶಿಕ್ಷೆ ಪ್ರಕಟಿಸಿದ್ದು, ಹೆಸರು ಬಹಿರಂಗಪಡಿಸಿಲ್ಲ. ಇಸ್ಲಾಮಿಕ್ ಸ್ಟೇಟ್ ಗುಂಪು ಇರಾಕ್‌ನ ಸಿಂಜಾರ್ ಜಿಲ್ಲೆಯಿಂದ ಮಹಿಳೆಯರನ್ನು ಅಪಹರಿಸಿದ್ದರು. ನಂತರ ಮೊಸೂಲ್‌ನಲ್ಲಿರುವ ಬಾಗ್ದಾದಿ ಪತ್ನಿಗೆ ಸೇರಿದ ಮನೆಯಲ್ಲಿ ಅಕ್ರಮ ಬಂಧನದಲ್ಲಿ ಇರಿಸಲಾಗಿತ್ತು. ಈಕೆಯನ್ನು ಇರಾಕ್‌ನ ಭದ್ರತಾ ಸಿಬ್ಬಂದಿ ವಶಕ್ಕೆ ಪಡೆದಿದ್ದರು.

ಮನುಷ್ಯತ್ವದ ವಿರುದ್ಧ ಕಾರ್ಯಾಚರಣೆ ನಡೆಸಿದ ಹಾಗೂ ನರಮೇಧಕ್ಕೆ ಬೆಂಬಲ ನೀಡಿದ ಆರೋಪ ಸಾಬೀತಾಗಿದೆ. ಯಾಜಿದಿ ಜನರ ವಿರುದ್ಧ ಭಯೋತ್ಪಾದನೆಗೆ ನೆರವು ನೀಡಿದ್ದಕ್ಕಾಗಿ ಶಿಕ್ಷೆ ಪ್ರಕಟಿಸುತ್ತಿರುವುದಾಗಿ ನ್ಯಾಯಾಲಯ ಹೇಳಿದೆ.

ಇಸ್ಲಾಮಿಕ್ ಸ್ಟೇಟ್‌ನ ಅಬು ಬಾಕರ್ ಅಲ್ ಬಾಗ್ದಾದಿಯನ್ನು ಅಮೆರಿಕದ ಸೇನಾಪಡೆಯು ಸಿರಿಯಾದಲ್ಲಿ 2019ರ ನವೆಂಬರ್‌ನಲ್ಲಿ ಹತ್ಯೆಗೈದಿತ್ತು. ಈತ ತನ್ನನ್ನು ಮುಸ್ಲಿಮರ ಕಲೀಫಾ ಎಂದು ಘೋಷಿಸಿಕೊಂಡಿದ್ದ. ಇರಾಕ್ ಹಾಗೂ ಸಿರಿಯಾದ ಬಹುತೇಕ ಭಾಗದಲ್ಲಿ 2014ರಿಂದ 2017ರವರೆಗೆ ಹಿಡಿತ ಸಾಧಿಸಿದ್ದ ಈತನ ವಿರುದ್ಧ ಅಮೆರಿಕ ನೇತೃತ್ವದಲ್ಲಿ ಕಾರ್ಯಾಚರಣೆ ನಡೆದಿತ್ತು.

ಹಾಲಿನ ಟ್ಯಾಂಕರ್‌ಗೆ ಡಿಕ್ಕಿ ಹೊಡೆದ ಡಬಲ್ ಡೆಕ್ಕರ್ ಬಸ್; 18 ಮಂದಿ ಸಾವು

ಲಕ್ನೋ, ಜು.10– ಹಾಲಿನ ಟ್ಯಾಂಕರ್‌ಗೆ ಡಬಲ್ ಡೆಕ್ಕರ್ ಬಸ್ ಡಿಕ್ಕಿ ಹೊಡೆದ ಪರಿಣಾಮ 18 ಮಂದಿ ಸಾವನ್ನಪ್ಪಿ, 20ಕ್ಕೂ ಹೆಚ್ಚು ಜನ ಗಾಯಗೊಂಡಿರುವ ಘಟನೆ ಉತ್ತರಪ್ರದೇಶದ ಉನ್ನಾವೊದ ಲಕ್ನೋ–ಆಗ್ರಾ ಎಕ್ಸ್‌ಪ್ರೆಸ್‌ವೇನಲ್ಲಿ ಬುಧವಾರ ಮುಂಜಾನೆ ನಡೆದಿದೆ.



ಲಕ್ನೋ–ಆಗ್ರಾ ಎಕ್ಸ್‌ಪ್ರೆಸ್‌ವೇನಲ್ಲಿ ಬಿಹಾರದ ಶಿವಗಢದಿಂದ ದೆಹಲಿಗೆ ಹೋಗುತ್ತಿದ್ದ ಬಸ್ ಬೆಹ್ತಾ ಮುಜಾವರ್ ಪೊಲೀಸ್ ಠಾಣೆ ವ್ಯಾಪ್ತಿಯ ಏರ್‌ಸ್ಟ್ರಿಪ್‌ನಲ್ಲಿ ಹಾಲಿನ ಟ್ಯಾಂಕರ್‌ಗೆ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಬಸ್ ಮತ್ತು ಟ್ಯಾಂಕರ್ ಹಾರಿ ಹೋಗಿವೆ. ಅಪಘಾತದಲ್ಲಿ ಇಬ್ಬರು ಮಹಿಳೆಯರು ಮತ್ತು ಒಂದು ಮಗು ಸೇರಿದಂತೆ 18 ಜನರು ಸಾವನ್ನಪ್ಪಿದ್ದಾರೆ. ಅದೇ ವೇಳೆ ಸುಮಾರು 20 ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ಆಸ್ಪತ್ರೆಗೆ ಸಾಗಿಸಲಾಗುತ್ತಿದೆ. ಸಿಒ ಬಂಗಾರ್ಮೌ ಅರವಿಂದ್ ಚೌರಾಸಿಯಾ ನೇತೃತ್ವದಲ್ಲಿ ರಕ್ಷಣಾ ಕಾರ್ಯಾಚರಣೆ ನಡೆಸಲಾಗುತ್ತಿದೆ. ಬಸ್ ಬಿಹಾರದ ಸೀತಾಮರ್ಹಿಯಿಂದ ದೆಹಲಿಗೆ ಹೋಗುತ್ತಿತ್ತು ಎಂದು ಹೇಳಲಾಗುತ್ತಿದೆ. ಅಪಘಾತದ ಮಾಹಿತಿ ಪಡೆದ ಡಿಎಂ ಮತ್ತು ಎಸ್ಪಿ ಕೂಡ ಸ್ಥಳಕ್ಕೆ ಆಗಮಿಸಿದರು.

ಬೆಹ್ತಾ ಮುಜಾವರ್ ಪ್ರದೇಶದ ಅಡಿಯಲ್ಲಿ ಆಗ್ರಾ–ಲಕ್ನೋ ಎಕ್ಸ್‌ಪ್ರೆಸ್‌ವೇನಲ್ಲಿ ಬೆಳಿಗ್ಗೆ 05.15 ರ ಸುಮಾರಿಗೆ ಈ ಅಪಘಾತ ಸಂಭವಿಸಿದೆ. ಬಿಹಾರದಿಂದ ದೆಹಲಿಗೆ ಹೋಗುತ್ತಿದ್ದ ಡಬಲ್ ಡೆಕ್ಕರ್ ಬಸ್ ಸಂಖ್ಯೆ UP95 T 4720, ಹಾಲಿನ ಟ್ಯಾಂಕರ್ ಸಂಖ್ಯೆ UP70 CT 3999ಗೆ ಹಿಂದಿನಿಂದ ಡಿಕ್ಕಿ ಹೊಡೆದ ಪರಿಣಾಮ 18 ಜನರು ಸಾವನ್ನಪ್ಪಿದ್ದಾರೆ.

ಒಕ್ಕಲಿಗರು ನೌಕರಿಗಾಗಿ ಬದುಕುವುದಕ್ಕಿಂತ ಇತರರಿಗೆ ನೌಕರಿ ಕೊಡುವ ಮಟ್ಟಕ್ಕೆ ಬೆಳೆಯಬೇಕು

- ಒಕ್ಕಲಿಗ ಉದ್ಯಮಿಗಳಿಗೆ ಮಾಜಿ ಸಂಸದ ಪ್ರತಾಪ ಸಿಂಹ ಕಿವಿಮಾತು
- ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ, ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಸಮುದಾಯದ ಮೇರು ವ್ಯಕ್ತಿತ್ವ
- ಫಸ್ಟ್ ಸರ್ಕಲ್ ನಾಡಪ್ರಭು ಮೈಸೂರು ಸರ್ಕಲ್ ಉದ್ಘಾಟನೆ



'ಉದ್ಯಮಿ ಒಕ್ಕಲಿಗ' ಶೀರ್ಷಿಕೆಯಡಿ ಫಸ್ಟ್ ಸರ್ಕಲ್ ನಾಡಪ್ರಭು ಮೈಸೂರು ಸರ್ಕಲ್ ಉದ್ಘಾಟನೆ ಹಾಗೂ ಪದಾಧಿಕಾರಿಗಳ ಪದಗ್ರಹಣ ಸಮಾರಂಭದಲ್ಲಿ ಮಾಜಿ ಸಂಸದ ಪ್ರತಾಪ ಸಿಂಹ ಸೇರಿದಂತೆ ಇತರರನ್ನು ಕಾಣಬಹುದು.

> ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನನ್ನ ಬಿಟ್ಟು ಮೈಸೂರಿನ ಎಲ್ಲಾ ರಾಜಕಾರಣಿಗಳು ಫಲಾನುಭವಿಗಳಾಗಿದ್ದಾರೆ. ಎಲ್ಲಾ ರಾಜಕಾರಣಿಗಳು ಇಂದು ಮುಡಾದಲ್ಲಿ ತಮ್ಮ ವ್ಯವಹಾರ ಇಟ್ಟುಕೊಂಡಿದ್ದಾರೆ. ಆದರೆ, ನಾನು ಆ ಕೆಲಸ ಮಾಡಲು ರಾಜಕಾರಣಕ್ಕೆ ಬರಲಿಲ್ಲ. ನಾನು ಭ್ರಷ್ಟ ರಾಜಕಾರಣಿಯಾಗಲು ಇಷ್ಟಪಡುವುದಿಲ್ಲ. ಬದಲಾಗಿ ಸಮಾಜ ಇಷ್ಟಪಡುವ ರಾಜಕಾರಣಿಯಾಗಲು ಇಚ್ಛಿಸುತ್ತೇನೆ. ಕಾರಣಾಂತರಗಳಿಂದ 2024ರ ಲೋಕಸಭಾ ಟಿಕೆಟ್ ತಪ್ಪಿದೆ. ಮುಂದೆ ಗ್ರ್ಯಾಂಡ್ ಎಂಟ್ರಿ ಪಡೆದು ರಾಜ್ಯ ರಾಜಕಾರಣಕ್ಕೆ ಬರುತ್ತೇನೆ.
> - ಪ್ರತಾಪಸಿಂಹ, ಮಾಜಿ ಸಂಸದರು.

ಮೈಸೂರು, ಜು.10(ಎಸ್‌ಪಿಎನ್)– ಒಕ್ಕಲಿಗರು ಸ್ವಲ್ಪ ರ‍್ಯಾಷ್ ಇರಬಹುದು. ಆದರೆ, ಸ್ವಲ್ಪ ನಮ್ರತೆ, ವಿನಯ ರೂಢಿಸಿಕೊಂಡು ಉದ್ಯಮದಲ್ಲಿ ನೀವು ಬೆಳೆಯಿರಿ... ಬೇರೆಯವರನ್ನು ಬೆಳೆಸಿ... ನಮ್ಮವ (ಒಕ್ಕಲಿಗ)ರಿಗೆ ಸ್ವಲ್ಪ ಹೆಚ್ಚು ಪ್ರೀತಿ ತೋರಿಸಿ ಉದ್ಯಮದಲ್ಲಿ ಬೆಳೆಯಲು ಬಿಡಿ ಎಂದು ಮಾಜಿ ಸಂಸದ ಪ್ರತಾಪ ಸಿಂಹ ಒಕ್ಕಲಿಗ ಉದ್ಯಮಿಗಳಿಗೆ ಸಲಹೆ ನೀಡಿದರು.

ಮೈಸೂರು ಖಾಸಗಿ ಹೋಟೆಲ್‌ನಲ್ಲಿ ಉದ್ಯಮಿ ಒಕ್ಕಲಿಗ ಶೀರ್ಷಿಕೆಯಡಿ ಫಸ್ಟ್ ಸರ್ಕಲ್ ನಾಡಪ್ರಭು ಮೈಸೂರು ಸರ್ಕಲ್ ಉದ್ಘಾಟನೆ ಹಾಗೂ ಪದಾಧಿಕಾರಿಗಳ ಪದಗ್ರಹಣ ಸಮಾರಂಭದಲ್ಲಿ ಮಾತನಾಡಿದ ಮಾಜಿ ಸಂಸದರು, ಮಾಜಿ ಪ್ರಧಾನ ಮಂತ್ರಿ ಹೆಚ್.ಡಿ.ದೇವೇಗೌಡ, ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಒಕ್ಕಲಿಗ ಸಮುದಾಯದ ಮೇರು ವ್ಯಕ್ತಿತ್ವವುಳ್ಳವರು. ಇವರಿಬ್ಬರ ಆಡಳಿತಾವಧಿಯಲ್ಲಿ ಕರ್ನಾಟಕದ ಘನತೆಯನ್ನು ಎತ್ತಿಹಿಡಿದಿದ್ದಾರೆ ಎಂದರು.

ಬೆಂಗಳೂರಿಗೆ ಎಸ್.ಎಂ.ಕೃಷ್ಣರ ಕೊಡುಗೆ ಅಪಾರ: ಪ್ರಸ್ತುತ ಬೆಂಗಳೂರು ಐಟಿ ಸಿಟಿ ಎಂದು ಖ್ಯಾತಿ ಪಡೆದಿದೆ. ಇದಕ್ಕೆ ಎಸ್.ಎಂ. ಕೃಷ್ಣರ ಕೊಡುಗೆ ಸಾಕ್ಷಿದೆ. ಅವರ ಆಡಳಿತಾವಧಿಯಲ್ಲಿ ಸರ್ಕಾರಿ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ, ಬಡವರಿಗೆ ಯಶಸ್ವಿನಿ ಆರೋಗ್ಯ ಯೋಜನೆ ಮತ್ತು ಬೆಂಗಳೂರು ಅಭಿವೃದ್ಧಿ ಕೆಲಸಗಳಿಗೆ ಒತ್ತು ನೀಡಿದ್ದರು. ಎಸ್.ಎಂ.ಕೃಷ್ಣ ಸಿಎಂ ಆಗಿರುವವರೆಗೂ ಗುಜರಾತಿನ ಅಂದಿನ ಸಿಎಂ ನರೇಂದ್ರ ಮೋದಿ, ಆಂಧ್ರಪ್ರದೇಶದ ಸಿಎಂ ಚಂದ್ರಬಾಬು ನಾಯ್ಡು ಅವರು ಕರ್ನಾಟಕವನ್ನು ಹಿಂದಿಕ್ಕಿ ಅಭಿವೃದ್ಧಿಪಡಿಸಲು ಸಾಧ್ಯವಾಗಲಿಲ್ಲ ಎಂದು ತಿಳಿಸಿದರು.

ಸಂಕಷ್ಟದ ನಡುವೆಯೂ ಮಾದರಿ ಆಡಳಿತ: ರಾಜಕಾರಣದಲ್ಲಿ ನನಗೆ ಎಸ್.ಎಂ.ಕೃಷ್ಣ ಮಾದರಿ ರಾಜಕಾರಣಿ. ಅವರ ಅಧಿಕಾರಾವಧಿಯಲ್ಲಿ ಸಾಕಷ್ಟು ಅಡೆತಡೆಗಳು ಬಂದವು. ಮಾಜಿ ಸಚಿವ ನಾಗಪ್ಪ ಹತ್ಯೆ, ಡಾ.ರಾಜ್‌ಕುಮಾರ್ ಅಪಹರಣ, ಕಾವೇರಿ ನೀರಿನ ಗಲಾಟೆ, ತೀವ್ರ ಬರಗಾಲ ಸೇರಿದಂತೆ ಇತರೆ ಸಾಲು ಸಾಲು ಸಂಕಷ್ಟಗಳು ಎದುರಾದವು. ಈ ನಡುವೆಯೂ ಎಸ್.ಎಂ. ಕೃಷ್ಣ ಮಾದರಿ ಆಡಳಿತವನ್ನು ನೀಡಿ, ಒಕ್ಕಲಿಗ ಸಮುದಾಯದ ಶಿಖರಪ್ರಾಯರಾಗಿದ್ದಾರೆ. ಕಾರ್ಯಾಂಗದಲ್ಲಿ ಭ್ರಷ್ಟಾಚಾರ ಕಡಿಮೆ ಮಾಡಲು ಡಿಜಿಟಲ್ ತಂತ್ರಜ್ಞಾನ ಪರಿಚಯಿಸಿದ ಕೀರ್ತಿ ಕೃಷ್ಣರಿಗೆ ಸಲ್ಲುತ್ತದೆ ಎಂದರು.

ಎಲ್ಲಾ ಕ್ಷೇತ್ರದಲ್ಲೂ ಒಕ್ಕಲಿಗರ ಛಾಪು ಇರಬೇಕು: ಕನ್ನಡಿಗರೊಬ್ಬರು ಈ ದೇಶದ ಪ್ರಧಾನಿ ಹುದ್ದೆಗೇರುವುದು ಸುಲಭದ ಮಾತಲ್ಲ. ದೇಶದ ರಾಜಕೀಯ ಅತಂತ್ರ ಪರಿಸ್ಥಿತಿಯಲ್ಲಿದ್ದಾಗ ಹೆಚ್.ಡಿ.ದೇವೇಗೌಡರು ಧೈರ್ಯದಿಂದ ಪ್ರಧಾನಿ ಹುದ್ದೆ ಅಲಂಕರಿಸಿದರು. ಅವರು, ರಾಜ್ಯದಲ್ಲಿ ನೀರಾವರಿ ಮಂತ್ರಿಗಳಾಗಿದ್ದಾಗ ಬೇರೆ ಸಮುದಾಯದವರ ಜೊತೆಗೆ ಒಕ್ಕಲಿಗರಿಗೂ ಅತೀ ಹೆಚ್ಚು ಗುತ್ತಿಗೆ ಕೆಲಸಗಳನ್ನು ನೀಡಿ, ಬೆಳೆಸಿದ್ದಾರೆ. ಆ ಫಲಾನುಭವಿಗಳಲ್ಲಿ ಸ್ಟಾರ್ ಚಂದ್ರು ಕೂಡ ಇರಬಹುದು. ಅಲ್ಲದೆ, ಸರ್ಕಾರಿ ಹುದ್ದೆಗಳಲ್ಲೂ ಒಕ್ಕಲಿಗ ಯುವಕರಿಗೆ ಆದ್ಯತೆ ನೀಡಿದ್ದರು. ಇವರಿಬ್ಬರ ಆಡಳಿತಾವಧಿಯಲ್ಲಿ ಬೇರೆ ಸಮುದಾಯದ ಜೊತೆಗೆ ಒಕ್ಕಲಿಗ ಸಮುದಾಯದ ಕೆಲಸಗಳಾಗಿವೆ. ಒಕ್ಕಲಿಗರ ಪ್ರಾಮುಖ್ಯತೆ ಕೇವಲ ಗುತ್ತಿಗೆ ಕಾಮಗಾರಿ, ಸರ್ಕಾರಿ ಹುದ್ದೆಗಳಲ್ಲಿದ್ದರೆ ಸಾಲದು. ಐಟಿ–ಬಿಟಿ, ರಾಜಕೀಯ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲೂ ಒಕ್ಕಲಿಗ ಯುವಕರು ಗುರುತಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಖಜಾನೆ ತುಂಬಿಸುವ ಕಾಮಧೇನು: ಕೆಂಪೇಗೌಡರು ಕಟ್ಟಿದ ಬೆಂಗಳೂರು ಪ್ರಸ್ತುತ ಅತೀ ಹೆಚ್ಚು ತೆರಿಗೆ ಸಂಗ್ರಹವಾಗುವ ನಗರ. ಅಲ್ಲದೆ, ಕರ್ನಾಟಕ, ಭಾರತ ಸರ್ಕಾರಗಳ ಖಜಾನೆ ತುಂಬುವ ಕಾಮಧೇನು. ಈ ನಗರದಲ್ಲಿ ನೂರಾರು ಸ್ಟಾರ್ಟ್‌ಪ್‌ಗಳ ಉದಯವಾಗಿವೆ. ಇದರಲ್ಲಿ ಒಕ್ಕಲಿಗರ ಪಾಲೆಷ್ಟು ಎಂಬುದು ಮುಖ್ಯ. ಕೇವಲ ನೌಕರಿಗಾಗಿ ಬದುಕುವುದಕ್ಕಿಂತ ಬೇರೆಯವರಿಗೆ ಉದ್ಯೋಗ ನೀಡುವಷ್ಟು ಒಕ್ಕಲಿಗ ಯುವ ಸಮೂಹ ಬೆಳೆಯಬೇಕು. ಈ ನಿಟ್ಟಿನಲ್ಲಿ ನಾಡಪ್ರಭು ಫಸ್ಟ್ ಸರ್ಕಲ್ ಸಂಘಟನೆಯಡಿ ಉದ್ಯಮಿಗಳು ಒಂದಾಗುತ್ತಿರುವುದು ಉತ್ತಮ ಬೆಳವಣಿಗೆ ಎಂದರು.

ಧಾರ್ಮಿಕವಾಗಿಯೂ ಕೊಡುಗೆ ಇದೆ: ಆದಿಚುಂಚನಗಿರಿ ಮಠದ ಪೀಠಾಧಿಪತಿ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಅವರು ತಮಿಳುನಾಡು ಐಐಟಿಯಲ್ಲಿ ಎಂ.ಟೆಕ್ ಪದವಿ ಮಾಡಿದ್ದಾರೆ. ಸ್ನಾತಕೋತ್ತರ ಪದವಿ ಮುಗಿಸಿರುವ ಶ್ರೀಗಳು, ಆದಿಚುಂಚನಗಿರಿ ಮಠದ ಪೀಠಾಧಿಪತಿಗಳಾಗಿದ್ದಾರೆ ಎಂಬುದು ಹೆಮ್ಮೆಯ ವಿಚಾರ. ಭೈರವೈಕ್ಯ ಡಾ.ಬಾಲಗಂಗಾಧರನಾಥ ಸ್ವಾಮೀಜಿ ಅವರು ಏಕಾಂಗಿಯಾಗಿ ಆದಿಚುಂಚನಗಿರಿ ಮಠ ಕಟ್ಟಿ ಬೆಳೆಸಿದ್ದು, ಧಾರ್ಮಿಕವಾಗಿಯೂ ಒಕ್ಕಲಿಗರ ಕೊಡುಗೆಯಿದೆ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಸಾಹಿತ್ಯ ಕ್ಷೇತ್ರದಲ್ಲಿ ಕುವೆಂಪು, ಡಾ.ಹಾ.ಮಾ.ನಾಯಕ್ ಸೇರಿದಂತೆ ಇತರರು ಅಪಾರ ಸೇವೆ ಸಲ್ಲಿಸಿದ್ದಾರೆ. ಕೇವಲ ಭೂಮಿ, ರಿಯಲ್ ಎಸ್ಟೇಟ್, ರಾಜಕಾರಣ ಬಿಟ್ಟು ಕ್ರೀಡೆ, ಕೈಗಾರಿಕೆ, ವಿಜ್ಞಾನ ಕ್ಷೇತ್ರ ಸೇರಿದಂತೆ ಇತರೆ ಕ್ಷೇತ್ರದಲ್ಲೂ ಒಕ್ಕಲಿಗರ ಛಾಯೆ ಇರಬೇಕು ಎಂದು ತಿಳಿಸಿದರು.

37 ವರ್ಷಗಳ ಬಳಿಕ ಒಕ್ಕಲಿಗರಿಗೆ ಲೋಕಸಭಾ ಟಿಕೆಟ್: ಮಾಜಿ ಸಂಸದ ತುಳಸಿದಾಸಪ್ಪರ ನಂತರ ಮೈಸೂರು ಲೋಕಸಭಾ ಕ್ಷೇತ್ರಕ್ಕೆ ಬಿಜೆಪಿ, ಒಕ್ಕಲಿಗರಿಗೆ 2014ರಲ್ಲಿ ಟಿಕೆಟ್ ನೀಡಿತ್ತು. ನಂತರ ನನ್ನನ್ನು ರಾಜಕೀಯವಾಗಿ ಪಕ್ಷಾತೀತವಾಗಿ ಬೆಂಬಲಿಸಿದ್ದು, ಮೈಸೂರು–ಕೊಡಗು ಜಿಲ್ಲೆಯ ಎಲ್ಲಾ ವರ್ಗದ ಜನ. ಇದರಲ್ಲಿ ಒಕ್ಕಲಿಗ ಸಮುದಾಯದ ಬೆಂಬಲ ಅಪಾರ. ನಾನು ಮೂವರಲ್ಲಿ ಒಬ್ಬರಂತೆ ರಿಯಲ್ ಎಸ್ಟೇಟ್ ವ್ಯವಹಾರ ಮಾಡಿಕೊಂಡು ರಾಜಕಾರಣ ಮಾಡಿದ್ದರೆ, ಇಂದು ಕೋಟ್ಯಾಧಿಪತಿ ಆಗಿರುತ್ತಿದ್ದೆ. ಆದರೆ, ನಾನು ಆ ಕೆಲಸ ಮಾಡಲಿಲ್ಲ. ಸಮುದಾಯಕ್ಕೆ ಚ್ಯುತಿ ಬಾರದ ರೀತಿ ಅಭಿವೃದ್ಧಿ ಕೆಲಸಕ್ಕೆ ಒತ್ತು ನೀಡಿದ್ದೇನೆ. ಅದರಲ್ಲಿ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್‌ವೇ, 13 ನೂತನ ರೈಲು, ಮೈಸೂರು ವಿಮಾನ ನಿಲ್ದಾಣದ ಅಭಿವೃದ್ಧಿ, ಮೈಸೂರಿಗೆ ಮೂಲಸೌಕರ್ಯ ಸೇರಿದಂತೆ ಅನೇಕ ಕೆಲಸಗಳು ನನ್ನ ಅವಧಿಯಲ್ಲಿ ಆಗಿವೆ. ಇದನ್ನು ಯಾವುದೇ ವೇದಿಕೆಯಲ್ಲಿ ಗಟ್ಟಿಯಾಗಿ ಹೇಳುತ್ತೇನೆ ಎಂದರು.

ವೇದಿಕೆಯಲ್ಲಿ ಫಸ್ಟ್ ಸರ್ಕಲ್ ಸೊಸೈಟಿ ಅಧ್ಯಕ್ಷ ನಂದೀಶ್ ಎಸ್.ರಾಜೇಗೌಡ, ಜಯರಾಂ ರಾಯ್‌ಪುರ, ವಕೀಲ ವಿನಯ್ ಬಾಬು, ಉದ್ಯಮಿಗಳಾದ ಆರ್.ಚೆಲುವರಾಜು, ಟಿ.ಜಿ.ಆದಿಶೇಷ ಗೌಡ, ಡಾ.ಕೆ. ಸಂತೋಷ್, ಸಿ.ರಮೇಶ್, ಫಸ್ಟ್ ಸರ್ಕಲ್ ನಾಡಪ್ರಭು ಮೈಸೂರು ಸರ್ಕಲ್ ಅಧ್ಯಕ್ಷ ಕೆ.ಕಾರ್ತಿಕ್ ಗೌಡ, ಕಾರ್ಯದರ್ಶಿ ಚೇತನ್ ಗೌಡ, ಸಂಚಾಲಕರಾದ ರಂಜಿತ, ಸೌಮ್ಯ ರಾಣಿ, ಉಪಾಧ್ಯಕ್ಷ ಎನ್.ಚಂದ್ರ, ಖಜಾಂಚಿ ಹರ್ಷವರ್ಧನ, ಮುಖಂಡರಾದ ನಿತಿನ್ ಕಾಂತರಾಜು, ಡಿ.ಎನ್.ಗೋಪಿಕೃಷ್ಣ ಸೇರಿದಂತೆ ಇತರರಿದ್ದರು. ಪದಾಧಿಕಾರಿಗಳಾದ ಹೇಮಂತ್, ಮಧು, ಸಂಜನ ಸುಧೀರ್, ಚೇತನ್, ಪ್ರೀತಂ, ಎನ್.ಚಂದ್ರು, ರಘುರಾಂ, ಹರ್ಷ, ಅಭಿ, ಪ್ರಿಯ ರಾಜೇಶ್, ಪುನೀತ್, ಲೋಕೇಶ್, ಜಯಂತ್, ವಿನೋದ್, ನವೀನ್, ಉಮೇಶ್, ಅಣ್ಣಾಜಿ ಗೌಡ್ರು, ಎ.ಎ.ಚೇತನ್, ಮಂಜು, ಉದಯ್ ಸೇರಿದಂತೆ ಇತರರಿದ್ದರು.

ವೀರಶೈವ ಲಿಂಗಾಯತ ಮಹಾಸಭಾ ಚುನಾವಣಾ ಪ್ರಣಾಳಿಕೆ ಬಿಡುಗಡೆ



ಅಖಿಲ ಭಾರತ ವೀರಶೈವ ಮಹಾಸಭಾ ಮೈಸೂರು ಘಟಕದ ಪ್ರಣಾಳಿಕೆಯನ್ನು ಹಿನಕಲ್ ಬಸವರಾಜು ಬಿಡುಗಡೆಗೊಳಿಸಿದರು.

ಮೈಸೂರು, ಜು.10– ಜುಲೈ 21ರಂದು ನಡೆಯಲಿರುವ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಮೈಸೂರು ಜಿಲ್ಲಾ ಘಟಕದ ಚುನಾವಣೆ ಹಿನ್ನೆಲೆಯಲ್ಲಿ ಹಿನಕಲ್ ಬಸವರಾಜು ತಂಡದಿಂದ ಚುನಾವಣಾ ಪ್ರಣಾಳಿಕೆ ಬಿಡುಗಡೆ ಮಾಡಲಾಯಿತು.

ನಗರದ ನಟರಾಜ ಕಾಲೇಜು ಸಭಾಂಗಣದಲ್ಲಿ ಬುಧವಾರ ಬೆಳಗ್ಗೆ ನಡೆದ ಸಮಾರಂಭದಲ್ಲಿ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿರುವ ಹಿನಕಲ್ ಬಸವರಾಜು, 20 ಪುರುಷ ಮತ್ತು 10 ಮಹಿಳಾ ಸದಸ್ಯರು, ಸಮುದಾಯದ ಹಿರಿಯ ಮುಖಂಡರ ಸಮ್ಮುಖದಲ್ಲಿ ಪ್ರಣಾಳಿಕೆ ಬಿಡುಗಡೆ ಮಾಡಿದರು.

ಈ ಸಂದರ್ಭದಲ್ಲಿ ಅಧ್ಯಕ್ಷ ಸ್ಥಾನದ ಅಭ್ಯರ್ಥಿ ಹಿನಕಲ್ ಬಸವರಾಜು ಮಾತನಾಡಿ, ಮಹಾಸಭಾ ಸಂಘಟನೆಯನ್ನು ಮತ್ತಷ್ಟು ಶಕ್ತಿಶಾಲಿಯಾಗಿ ಕಟ್ಟುವುದು ನಮ್ಮ ಉದ್ದೇಶವಾಗಿದೆ. ನಮ್ಮ ಸಂಘಟನೆಯ ಅಧೀನದಲ್ಲಿರುವ ಸಿಎ ನಿವೇಶನದಲ್ಲಿ ಸುಂದರವಾದ ಬಸವ ಭವನ ಕಟ್ಟಲು ಉದ್ದೇಶಿಸಿದ್ದೇವೆ ಎಂದರು.

ಈ ಸಂದರ್ಭದಲ್ಲಿ ಸಮುದಾಯದ ಹಿರಿಯ ಮುಖಂಡ ಎನ್.ಎಸ್.ಬಸವರಾಜು, ಮಾಜಿ ಮೇಯರ್ ದಕ್ಷಿಣಮೂರ್ತಿ, ಎಂ.ಎನ್.ಜಯಶಂಕರ್, ಎಂ.ಪ್ರದೀಪ್‌ಕುಮಾರ್, ರಾಷ್ಟ್ರೀಯ ಕಾರ್ಯಕಾರಿ ಸಮಿತಿ ಸದಸ್ಯರಾದ ಟಿ.ಎಸ್.ಲೋಕೇಶ್, ಎಲ್.ಎಸ್.ಮಹಾದೇವಸ್ವಾಮಿ, ಟಿ.ಎಲ್. ಲಿಂಗರಾಜು, ದೇವಲಾಪುರ ನಟರಾಜು, ಗೆಜ್ಜಗಳ್ಳಿ ಶಂಕರ್, ಡಿ.ಎ.ಮಹದೇವಸ್ವಾಮಿ, ದೂರ ರಾಜಶೇಖರ್, ಜಯಪುರ ಹೋಬಳಿ ವಿಕಾಸ ವೇದಿಕೆ ಅಧ್ಯಕ್ಷರಾದ ದಾರಿಪುರ ಡಿ.ಚಂದ್ರಶೇಖರ್ ಹಾಗೂ ತಂಡದ ಎಲ್ಲಾ ಸದಸ್ಯರು, ಜಿಲ್ಲೆಯ ಸಮಾಜದ ಎಲ್ಲಾ ಮುಖಂಡರು ಇದ್ದರು.

ದೇಶದಾದ್ಯಂತ 111 ಮಸಾಲೆ ತಯಾರಕರ ಉತ್ಪಾದನಾ ಕಂಪನಿಗಳ ಪರವಾನಗಿ ರದ್ದು!

ನವದೆಹಲಿ, ಜು.10– ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ (ಎಫ್‌ಎಸ್‌ಎಸ್‌ಎಐ) ಕಳೆದ ತಿಂಗಳಿನಿಂದ ಬರೋಬ್ಬರಿ 111 ಮಸಾಲೆ ತಯಾರಕರ ಉತ್ಪಾದನಾ ಪರವಾನಗಿಯನ್ನು ರದ್ದುಗೊಳಿಸಿದೆ. ಅಲ್ಲದೆ ಉತ್ಪಾದನೆಯನ್ನು ನಿಲ್ಲಿಸುವಂತೆ ಕಂಪನಿಗಳಿಗೆ ತಾಕೀತು ಮಾಡಿದೆ.



ಏಪ್ರಿಲ್ ತಿಂಗಳಲ್ಲಿ, ಸಿಂಗಾಪುರ್ ಮತ್ತು ಹಾಂಗ್‌ಕಾಂಗ್ ಜನಪ್ರಿಯ ಭಾರತೀಯ ಮಸಾಲೆ ಬ್ರ್ಯಾಂಡ್‌ಗಳಾದ ಎಂಡಿಎಚ್ ಮತ್ತು ಎವರೆಸ್ಟ್ ಮಸಾಲೆಗಳಲ್ಲಿ ಕಾರ್ಸಿನೋಜೆನಿಕ್ ಕೀಟನಾಶಕ ಎಥಿಲೀನ್ ಆಕ್ಸೈಡ್ ಇದೆ ಎಂದು ಆರೋಪಿಸಿ ಈ ಉತ್ಪನ್ನಗಳನ್ನು ತಮ್ಮ ದೇಶದಲ್ಲಿ ಬ್ಯಾನ್ ಮಾಡಿದ್ದವು. ಈ ವಿವಾದದ ಬೆನ್ನಲ್ಲೇ ಎಫ್‌ಎಸ್‌ಎಸ್‌ಎಐ ಸುರಕ್ಷತಾ ತಪಾಸಣೆಗಾಗಿ ವಿವಿಧ ನಗರಗಳಲ್ಲಿ ಮಸಾಲೆಗಳ ಮಾದರಿಗಳನ್ನು ಸಂಗ್ರಹಿಸಲು ಪ್ರಾರಂಭಿಸಿತು. ಈ ತಪಾಸಣೆ ಬಳಿಕ ಕಳೆದ ಒಂದು ತಿಂಗಳಿನಿಂದ 111 ಮಸಾಲೆ ಉತ್ಪಾದಕರ ಉತ್ಪಾದನಾ ಪರವಾನಗಿಯನ್ನು ರದ್ದುಗೊಳಿಸಲಾಗಿದೆ ಎಂದು ವರದಿಗಳು ತಿಳಿಸಿವೆ.

ಗಾಂಜಾ ಮಾರಾಟ; ಸೆನ್ ಕ್ರೈಂ ಪೊಲೀಸರಿಂದ ನಾಲ್ವರ ಬಂಧನ

6.30 ಲಕ್ಷ ರೂ. ಮೌಲ್ಯದ 21 ಕೆಜಿ 300 ಗ್ರಾಂ ಗಾಂಜಾ, ಕಾರು, ಮೊಬೈಲ್‌ಗಳು ವಶಕ್ಕೆ

ಮೈಸೂರು,ಜು.10(ಪಿಎಂ)– ಗಾಂಜಾ ಮಾರಾಟ ಮಾಡುತ್ತಿದ್ದ ನಾಲ್ವರನ್ನು ಬಂಧಿಸಿರುವ ಮೈಸೂರಿನ ಸೆನ್ ಕ್ರೈಂ ಪೊಲೀಸರು, ಒಟ್ಟು 6.30 ಲಕ್ಷ ರೂ. ಮೌಲ್ಯದ 21 ಕೆಜಿ 300 ಗ್ರಾಂ ಗಾಂಜಾದೊಂದಿಗೆ ಕೃತ್ಯಕ್ಕೆ ಬಳಸಿದ ಕಾರು ಮತ್ತು ಮೊಬೈಲ್‌ಗಳನ್ನು ವಶಪಡಿಸಿಕೊಂಡಿದ್ದಾರೆ.

ಜು.8ರಂದು ಮೈಸೂರು ನಗರ ಉದಯಗಿರಿ ಪೊಲೀಸ್ ಠಾಣಾ ವ್ಯಾಪ್ತಿಯ ಮೈಸೂರು ಸಾತಗಳ್ಳಿ ಡಿಪೋ ರಾಜೀವ ನಗರದ ಶ್ರೀನಿಧಿ ಬಡಾವಣೆ ಪಕ್ಕದ ರಿಂಗ್ ರಸ್ತೆಯ ಸರ್ವಿಸ್ ರಸ್ತೆಯಲ್ಲಿ ಗಾಂಜಾ ಮಾರಾಟಕ್ಕೆ ಪ್ರಯತ್ನಿಸುತ್ತಿರುವ ಖಚಿತ ಮಾಹಿತಿ ಮೇರೆಗೆ ಸೆನ್ ಕ್ರೈಂ ಪೊಲೀಸರ ತಂಡ ದಾಳಿ ನಡೆಸಿತ್ತು. ಈ ವೇಳೆ ನಾಲ್ವರನ್ನು ಬಂಧಿಸಿ ಅವರ ಬಳಿಯಿದ್ದ ಒಟ್ಟು 6,30,000 ರೂ. ಮೌಲ್ಯದ ಗಾಂಜಾ ಹಾಗೂ ಕೃತ್ಯಕ್ಕೆ ಬಳಸಿದ ಟೊಯೋಟಾ ಕೋರೋಲಾ ಕಾರು ಮತ್ತು ಮೊಬೈಲ್‌ಗಳನ್ನು ವಶಪಡಿಸಿಕೊಳ್ಳಲಾಯಿತು. ಈ ಬಗ್ಗೆ ಸೆನ್ ಕ್ರೈಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಡಿಸಿಪಿ ಎಂ. ಮುತ್ತುರಾಜು ಅವರ ಮಾರ್ಗದರ್ಶನದಲ್ಲಿ ಸೆನ್ ಕ್ರೈಂ ಪೊಲೀಸ್ ಠಾಣೆಯ ಎಸಿಪಿ ಎನ್.ಸ್ನೇಹರಾಜ್ ನೇತೃತ್ವದಲ್ಲಿ ಸೆನ್ ಕ್ರೈಂ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಪ್ರಸನ್ನಕುಮಾರ್, ಪಿಎಸ್‌ಐ ಅನಿಲ್‌ಕುಮಾರ್, ಸಿಬ್ಬಂದಿಯಾದ ಕೆ.ಎಸ್.ಶ್ರೀನಿವಾಸ್, ವಿ.ಎ. ಮಧು, ಎಂ.ಭಾಷಾ ಮತ್ತು ತಾಂತ್ರಿಕ ವಿಭಾಗದ ಪಿ.ಕುಮಾರ್ ಕಾರ್ಯಾಚರಣೆ ನಡೆಸಿದ್ದು, ಈ ಪತ್ತೆ ಕಾರ್ಯದ ಬಗ್ಗೆ ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಪ್ರಶಂಸಿಸಿದ್ದಾರೆ ಎಂದು ಪೊಲೀಸ್ ಆಯುಕ್ತರ ಕಚೇರಿಯ ಪ್ರಕಟಣೆ ತಿಳಿಸಿದೆ.

ಮೈಸೂರು ವಿಮಾನ ನಿಲ್ದಾಣಕ್ಕೆ ಸಂಸದ ಯದುವೀರ್ ಭೇಟಿ

ಅಭಿವೃದ್ಧಿ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚೆ



ಮೈಸೂರು ವಿಮಾನ ನಿಲ್ದಾಣವನ್ನು ಸಂಸದ ಯದುವೀರ್ ಪರಿಶೀಲಿಸಿದರು.

ಮೈಸೂರು, ಜು.10– ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಬುಧವಾರ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ವಿಮಾನ ನಿಲ್ದಾಣದ ಎಲ್ಲಾ ಸೌಲಭ್ಯಗಳ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದ ಅವರು, ಎರಡು ಹಂತಗಳಲ್ಲಿ ನಡೆಯಲಿರುವ ವಿಮಾನ ನಿಲ್ದಾಣ ವಿಸ್ತರಣೆ ಸಂಬಂಧ ವಿಮಾನ ನಿಲ್ದಾಣದ ನಿರ್ದೇಶಕರಾದ ಅನೂಪ್ ಮತ್ತು ಇತರ ಅಧಿಕಾರಿಗಳೊಂದಿಗೆ ಸುದೀರ್ಘವಾಗಿ ಚರ್ಚಿಸಿದರು. ಮೈಸೂರು ವಿಮಾನ ನಿಲ್ದಾಣದ ಅಭಿವೃದ್ಧಿ ವಿಚಾರವಾಗಿ ತಮ್ಮ ಪ್ರಯತ್ನಗಳಿಗೆ ನಾಗರಿಕ ವಿಮಾನಯಾನ ಸಚಿವಾಲಯ ಸಂಪೂರ್ಣ ಬೆಂಬಲ ನೀಡಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ ಯದುವೀರ್, ಮೈಸೂರು ವಿಮಾನ ನಿಲ್ದಾಣವು ಅತ್ಯುತ್ತಮ ಗುಣಮಟ್ಟದ ಸೌಲಭ್ಯಗಳೊಂದಿಗೆ ಮೈಸೂರು ಮತ್ತು ಕೊಡಗಿಗೆ ಭೇಟಿ ನೀಡುವ ಪ್ರವಾಸಿಗರಿಗೆ ಕೇಂದ್ರ ಸ್ಥಾನವಾಗಿಸುವುದು ತಮ್ಮ ಗುರಿ ಎಂದರು.

ಮೈಸೂರು ನ್ಯಾಯಾಲಯಕ್ಕೆ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಭೇಟಿ



ಪ್ರತಿಷ್ಠಿತ ಮೈಸೂರು ನ್ಯಾಯಾಲಯಕ್ಕೆ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳಾದ ನಿಲಯ್ ವಿಪಿನ್ ಚಂದ್ರ ಅಂಜಾರಿಯಾ, ಆಡಳಿತಾತ್ಮಕ ನ್ಯಾಯಮೂರ್ತಿಗಳಾದ ಎಸ್.ಜಿ.ಪಂಡಿತ್ ಭೇಟಿ ನೀಡಿದ್ದರು. ಇವರಿಗೆ ಮೈಸೂರು ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್ ಅವರು ನೆನಪಿನ ಕಾಣಿಕೆ ನೀಡಿ, ಸನ್ಮಾನಿಸಿದರು. ಈ ವೇಳೆ ಸಂಘದ ಕಾರ್ಯದರ್ಶಿ ಸುಧೀರ್, ಉಪಾಧ್ಯಕ್ಷ ಚಂದ್ರಶೇಖರ್, ಜಂಟಿ ಕಾರ್ಯದರ್ಶಿ ಚರಣ್‌ರಾಜ್ ಇನ್ನಿತರ ವಕೀಲರು ಉಪಸ್ಥಿತರಿದ್ದರು.

ನಟ ಪ್ರಭುದೇವ ಅಜ್ಜಿ ನಿಧನ

ನಂಜನಗೂಡು, ಜು.10– ಕನ್ನಡಿಗ, ಬಹುಭಾಷಾ ನಟ ಪ್ರಭುದೇವ ಅವರ ಅಜ್ಜಿ ಪುಟ್ಟಮ್ಮಣ್ಣಿ ವಯೋಸಹಜ ಕಾಯಿಲೆಯಿಂದ ಜು.9ರಂದು ವಿಧಿವಶರಾಗಿದ್ದಾರೆ. ಅಜ್ಜಿಯ ಅಂತ್ಯಕ್ರಿಯೆಯಲ್ಲಿ ಭಾಗಿಯಾಗಲು ಸಹೋದರರ ಜೊತೆ ಪ್ರಭುದೇವ ಚೆನ್ನೈನಿಂದ ಮೈಸೂರಿಗೆ ಆಗಮಿಸಿದ್ದಾರೆ. ಜು.9ರಂದು ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ದೂರ ಗ್ರಾಮದಲ್ಲಿ ಅಜ್ಜಿ ನಿಧನರಾಗಿದ್ದಾರೆ. ದೂರ ಗ್ರಾಮದಲ್ಲಿ ಇಂದು (ಜು.10) ಸಂಜೆ ಅಜ್ಜಿ ಪುಟ್ಟಮ್ಮಣ್ಣಿ ಅಂತ್ಯಕ್ರಿಯೆ ನಡೆದಿದೆ.



ಮೈಸೂರು ಮಿತ್ರ ಗುರುವಾರ 11 ಜುಲೈ 2024

ಆನೆ ಕಂದಕಗಳ ದುರಸ್ತಿಗೆ ನಿರ್ಧಾರ

ವಿರಾಜಪೇಟೆಯಲ್ಲಿ ರೈತ ಸಂಘ, ಅರಣ್ಯಾಧಿಕಾರಿಗಳ ಸಭೆ



ವಿರಾಜಪೇಟೆ ಗಾಂಧಿನಗರದ ಅರಣ್ಯ ಇಲಾಖೆ ಭವನದದಲ್ಲಿ ನಡೆದ ರೈತರು ಹಾಗೂ ಅರಣ್ಯಾಧಿಕಾರಿಗಳ ಸಭೆಯಲ್ಲಿ ರೈತ ಸಂಘದ ಜಿಲ್ಲಾಧ್ಯಕ್ಷ ಮನು ಸೋಮಯ್ಯ ಮಾತನಾಡಿದರು.

> "ಪಕ್ಕದ ರಾಜ್ಯದಿಂದ ಕೊಡಗಿಗೆ ಬರುವ ಆನೆಗಳನ್ನು ಮತ್ತೆ ಅದೇ ಜಾಗಕ್ಕೆ ಸೇರಿಸಬೇಕು. ಕೊಡಗಿನ ಜನರಿಗೆ ನೆಮ್ಮದಿಯಿಂದ ಬದುಕಲು ಅರಣ್ಯಾಧಿಕಾರಿಗಳು ಅವಕಾಶ ಮಾಡಿಕೊಡಬೇಕು.
> –ಮನು ಸೋಮಯ್ಯ, ರೈತ ಸಂಘ ಜಿಲ್ಲಾಧ್ಯಕ್ಷ

ವಿರಾಜಪೇಟೆ, ಜೂ.10–ಕೊಡಗಿನಲ್ಲಿ ಇತ್ತೀಚೆಗೆ ಆನೆ ಮತ್ತು ಮಾನವ ಸಂಘರ್ಷ ಹೆಚ್ಚಾಗುತ್ತಿರುವುದರಿಂದ ಸರ್ಕಾರ ಶಾಶ್ವತ ಪರಿಹಾರ ಕಂಡು ಹಿಡಿಯುವ ಮೂಲಕ ಈಗಾಗಲೇ ನಿರ್ಮಿಸಿರುವ ಆನೆ ಕಂದಕವನ್ನು ದುರಸ್ತಿಗೊಳಿಸಲು ಅರಣ್ಯಾಧಿಕಾರಿಗಳ ಸಭೆಯಲ್ಲಿ ನಿರ್ಧರಿಸಲಾಯಿತು.


ಇಲ್ಲಿನ ಗಾಂಧಿನಗರದ ಅರಣ್ಯ ಇಲಾಖೆ ಭವನದ ಸಭಾಂಗಣದಲ್ಲಿ ಬುಧವಾರ ನಡೆದ ಪೊನ್ನಂಪೇಟೆ ಮತ್ತು ವಿರಾಜಪೇಟೆ ತಾಲೂಕು ರೈತ ಸಂಘ ಹಾಗೂ ಅರಣ್ಯಾಧಿಕಾರಿಗಳ ಸಭೆಯಲ್ಲಿ ಆನೆ ಕಂದಕಗಳನ್ನು ಮತ್ತೆ 12 ಅಡಿಯಷ್ಟು ಅಳ, ಸೋಲಾರ್ ಬೇಲಿ ದುರಸ್ತಿಪಡಿಸುವುದು, ಅರಣ್ಯಗಳಲ್ಲಿ ಕ್ಯಾಮರಾ ಮತ್ತು ಟವರ್‌ಗಳನ್ನು ಅಳವಡಿಸುವುದು, ಕಾಡಿನಲ್ಲಿ ಆದಿವಾಸಿಗಳು ವಾಸವಿರುವ ಜಾಗದಲ್ಲಿ ಬೇಲಿ ನಿರ್ಮಾಣಕ್ಕೆ ನಿರ್ಧರಿಸಲಾಯಿತು.

ರೈತ ಸಂಘದ ಜಿಲ್ಲಾಧ್ಯಕ್ಷ ಮನು ಸೋಮಯ್ಯ ಮಾತನಾಡಿ, ಕೊಡಗಿನಲ್ಲಿ ಸುಮಾರು 20–25 ವರ್ಷಗಳಿಂದಲ್ಲೂ ಯಾವುದೇ ಸರ್ಕಾರ ಆನೆ ಮತ್ತು ಮಾನವ ಸಂಘರ್ಷ ತಪ್ಪಲಿಲ್ಲ. ರೈತರ ಬೆಳೆ ಹಾನಿ ನಷ್ಟ ಹಾಗೂ ಕಷ್ಟವನ್ನು ಕೇಳುವರಿಲ್ಲ. ಅರಣ್ಯ ಇಲಾಖೆ ಸಿಬ್ಬಂದಿ ಆನೆ ಓಡಿಸುತ್ತಾರೆ. ಮತ್ತೆ ಅದೇ ಜಾಗಕ್ಕೆ ಬಂದು ದಾಳಿ ಮಾಡುತ್ತವೆ. ಕೇಂದ್ರ ಮತ್ತು ರಾಜ್ಯ ಸರ್ಕಾರದೊಂದಿಗೆ ಅರಣ್ಯಾಧಿಕಾರಿಗಳು ಚರ್ಚಿಸಿ ಕಾಡಿನಲ್ಲೇ ಪ್ರಾಣಿಗಳಿಗೆ ಆಹಾರ ಮತ್ತು ಕುಡಿಯಲು ನೀರು ಒದಗಿಸಬೇಕು ಎಂದು ಮನವಿ ಮಾಡಿದರು.

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮನೋಜ್ ಕುಮಾರ್ ತ್ರಿಪಾಠಿ ಮಾತನಾಡಿ, ನಾವು ಇರುವುದು ಜನರ ಸೇವೆ ಹಾಗೂ ರಕ್ಷಣೆಗಾಗಿ. ಕಾಡಾನೆಗಳ ಹಾವಳಿ ತಡೆಗೆ ಸಾಕಷ್ಟು ಪ್ರಯತ್ನಿಸಲಾಗುತ್ತಿದೆ. ಕೊಡಗಿನಲ್ಲಿ 170 ರಿಂದ 200 ಕಾಡಾನೆಗಳಿದ್ದು, ಹಿಂದೆ ಆನೆಗಳು ಎಲ್ಲೆಂದರಲ್ಲಿ ತಿರುಗಾಡುತ್ತಿದ್ದವು. ಈಗ ಸೋಲಾರ್ ಬೇಲಿ ಹಾಕಿರುವುದರಿಂದ ಆನೆಗಳು ರಸ್ತೆಯಲ್ಲಿ ಓಡಾಡುತ್ತಿವೆ. ಸದ್ಯದಲ್ಲೇ ಅರವಳಿಕೆ ಮದ್ದು ನೀಡಿ ಆನೆಗಳನ್ನು ಸೆರೆ ಹಿಡಿಯುವ ಕಾರ್ಯಾಚರಣೆ ನಡೆಸಲಾಗುವುದು. ಈ ಸಂಬಂಧ ಈಗಾಗಲೇ ಜಿಲ್ಲಾಧಿಕಾರಿಯೊಂದಿಗೆ ಚರ್ಚಿಸಲಾಗಿದ್ದು, ರೈತರು, ಅರಣ್ಯ ಸಚಿವರು ಹಾಗೂ ಇಲಾಖೆಯ ಮೇಲಾಧಿಕಾರಿಗಳೊಂದಿಗೆ ಚರ್ಚಿಸಿ ಶಾಶ್ವತ ಪರಿಹಾರ ನೀಡುವುದಾಗಿ ಭರವಸೆ ನೀಡಿದರು.

ಸಭೆಯಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಎನ್.ಎಚ್.ಜಗನ್ನಾಥ್, ಸಹಾಯಕ ಸಂರಕ್ಷಣಾಧಿಕಾರಿ ಕೆ.ಎ.ನೆಹರು, ಅರಣ್ಯಾಧಿಕಾರಿ ಕೆ.ಪಿ.ಗೋಪಾಲ್, ಶ್ರೀನಿವಾಸ್ ನಾಯಕ್, ದಯಾನಂದ್, ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಚೆಟ್ರುಮಾಡ ಸುಜೈ ಬೋಪಣ್ಣ, ಸಂಚಾಲಕ ಪುಚ್ಚಿಮಾಡ ಸುಭಾಷ್, ತಾಲೂಕು ಅಧ್ಯಕ್ಷ ಮಂಜುನಾಥ್, ಖಜಾಂಚಿ ಸಭೀತಾ ಬೀಮಯ್ಯ, ಹೋಬಳಿ ಅಧ್ಯಕ್ಷ ಪುಚ್ಚಿಮಾಡ ರಾಯಿ, ವಿರಾಜಪೇಟೆ ಪಲೆಕಂಡ ಜೀವನ್, ಅಮ್ಮಣಿ ಚಂಡ ರವಿ, ಸಿ.ಎ.ಕಾರ್ಯಪ್ಪ ಹಾಗೂ ವಿರಾಜಪೇಟೆ ವಲಯ ಅಧಿಕಾರಿಗಳು ಭಾಗವಹಿಸಿದ್ದರು.

ಅಪ್ರಾಪ್ತೆ ಮೇಲೆ ಅತ್ಯಾಚಾರ : ಐವರ ಬಂಧನ



ನವೀಂದ್ರ



ಅಕ್ಷಯ್



ರಾಹುಲ್



ಮನು



ಸಂದೀಪ್

ಮಡಿಕೇರಿ, ಜು.10–ಓರ್ವ ಅಪ್ರಾಪ್ತೆ ಮೇಲೆ ಅತ್ಯಾಚಾರ ಎಸಗಿದ್ದ ಇಬ್ಬರು ಹಾಗೂ ಮತ್ತೋರ್ವ ಬಾಲಕಿ ಅತ್ಯಾಚಾರಕ್ಕೆ ಯತ್ನಿಸಿದ್ದ ಮೂವರು ಸೇರಿ ಐವರು ಆರೋಪಿಗಳನ್ನು ಕುಟ್ಟ ಠಾಣೆ ಪೊಲೀಸರು ಘಟನೆ ನಡೆದ 12 ಗಂಟೆಯೊಳಗೆ ಬಂಧಿಸಿದ್ದಾರೆ.

ಪೊನ್ನಂಪೇಟೆ ತಾಲೂಕಿನ ಕುಟ್ಟ ನಾಥಂಗಾಲ ನಿವಾಸಿ ನವೀಂದ್ರ (24), ಅಕ್ಷಯ್ (27), ಕೇರಳದ ತೋಲ್ಪಟ್ಟಿ ನಡುಂದನ ಕಾಲೋನಿ ನಿವಾಸಿಗಳಾದ ರಾಹುಲ್ (21), ಮನು (25) ಹಾಗೂ ಸಂದೀಪ್ (27) ಬಂಧಿತ ಆರೋಪಿಗಳು.

ಮಂಗಳವಾರ(ಜು.9) ಮಧ್ಯಾಹ್ನ 3.15 ರಲ್ಲಿ ಕುಟ್ಟದಿಂದ ನಾಗರಹೊಳೆ ಕಡೆಗೆ ಹೋಗುವ ಮಾರ್ಗದಲ್ಲಿ ಇಬ್ಬರು ಅಪ್ರಾಪ್ತ ಬಾಲಕಿಯರು ಹಾಗೂ ಮೂರು ಯುವಕರು ತೆರಳುತ್ತಿದ್ದರು. ಈ ವೇಳೆ ಕುಟ್ಟ ಕಡೆಯಿಂದ ಬಂದ ಕಾರನ್ನು ತಡೆದು ಅಪ್ರಾಪ್ತ ಬಾಲಕಿಯರೊಂದಿಗೆ ತೆರಳುತ್ತಿದ್ದ ಮೂರು ಯುವಕರು ಕಾರಿನಲ್ಲಿ ನಮ್ಮನ್ನು ನಾಗರಹೊಳೆ ಕಡೆ ಬಿಡುವಂತೆ ಕೇಳಿದ್ದಾರೆ. ನಂತರ ಕಾರಿನಲ್ಲಿ ಬಾಲಕಿಯರೊಂದಿಗೆ ಎಲ್ಲರೂ ಪ್ರಯಾಣಿಸಿದ್ದಾರೆ.

ಸ್ವಲ್ಪ ದೂರ ತೆರಳಿದ ಬಳಿಕ ರಸ್ತೆಬದಿಯ ಕಾಫಿ ತೋಟದ ಬಳಿ ಕಾರನ್ನು ನಿಲ್ಲಿಸಿ ಕಾರಿನಲ್ಲಿ ಬಂದ ಇಬ್ಬರು ಓರ್ವ ಅಪ್ರಾಪ್ತ ಬಾಲಕಿಯ ಮೇಲೆ ಅತ್ಯಾಚಾರ ಎಸಗಿದ್ದಾರೆ. ಈ ವೇಳೆ ಜೊತೆಯಲ್ಲಿ ಬಂದಿದ್ದ ಮೂವರು ಯುವಕರು ಮತ್ತೋರ್ವ ಅಪ್ರಾಪ್ತೆಯ ಮೇಲೆ ಅತ್ಯಾಚಾರಕ್ಕೆ ಪ್ರಯತ್ನಿಸಿದ್ದಾರೆ.

ನಂತರ ಈ ಸಂಬಂಧ ಕುಟ್ಟ ಪೊಲೀಸ್ ಠಾಣೆಯಲ್ಲಿ ಈ ಐವರ ವಿರುದ್ಧ ಪೋಕ್ಸೋ ಕಾಯ್ದೆಯಡಿ ಪ್ರಕರಣ ದಾಖಲಾಗಿತ್ತು. ಅಪರಾಧ ಕೃತ್ಯದ ಕುರಿತು ದೂರುದಾರರು ನೀಡಿದ ಮಾಹಿತಿ ಹಾಗೂ ಸಾಕ್ಷ್ಯಾಧಾರಗಳನ್ನು ಕಲೆ ಹಾಕಿದ ಪೊಲೀಸರು ಘಟನೆ ನಡೆದ 12 ಗಂಟೆಯೊಳಗೆ ಐವರು ಆರೋಪಿಗಳನ್ನು ಬಂಧಿಸಿ, ನ್ಯಾಯಾಂಗ ವಶಕ್ಕೆ ನೀಡಿದ್ದಾರೆ. ವಿರಾಜಪೇಟೆ ಡಿವೈಎಸ್‌ಪಿ ಆರ್.ಮೋಹನ್ ಕುಮಾರ್, ಕುಟ್ಟ ವೃತ್ತ ನಿರೀಕ್ಷಕ ಸಿ.ಎ.ಮಂಜಪ್ಪ, ಕುಟ್ಟ ಠಾಣಾಧಿಕಾರಿ ಹೆಚ್.ಕೆ.ಮಹದೇವ ಮತ್ತು ಸಿಬ್ಬಂದಿ ಆರೋಪಿಗಳ ಪತ್ತೆ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಪ್ರತಿಭಟನೆ



ಕುಶಾಲನಗರ ತಹಸೀಲ್ದಾರ್ ಕಚೇರಿ ಎದುರು ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಸಿಐಟಿಯು ಸಂಘಟನೆ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಕುಶಾಲನಗರ, ಜು.10–ಕಾರ್ಮಿಕರ ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ ಸಂಘಟನೆ ಕಾರ್ಯಕರ್ತರು ಪಟ್ಟಣದ ತಹಸೀಲ್ದಾರ್ ಕಚೇರಿ ಎದುರು ಬುಧವಾರ ಪ್ರತಿಭಟನೆ ನಡೆಸಿದರು.

ಅಗತ್ಯ ವಸ್ತುಗಳ ಬೆಲೆ ಏರಿಕೆ ನಿಯಂತ್ರಿಸಬೇಕು. ಶ್ರೀಮಂತರ ಮೇಲಿನ ತೆರಿಗೆ ಹೆಚ್ಚಿಸಿ, ಬಡವರಿಗೆ ಬದುಕಲು ಅವಕಾಶ ಕಲ್ಪಿಸುವ ನೀತಿ ಜಾರಿಗೊಳಿಸಬೇಕು. ರೈತ ವಿರೋಧಿ ಕೃಷಿ ಕಾನೂನುಗಳನ್ನು ವಾಪಸ್ ಪಡೆಯಬೇಕು. ಬೆಳೆಗಳಿಗೆ ಲಾಭದಾಯಕ ಬೆಂಬಲ ಬೆಲೆ ಖಾತರಿಪಡಿಸಬೇಕು. ಎಪಿಎಂಸಿ ವ್ಯವಸ್ಥೆ ಬಲಗೊಳಿಸಬೇಕು. ಕೃಷಿ ಹಿಡುವಳಿಗಳಿಗೆ ಸಬ್ಸಿಡಿ ಕಡಿತಗೊಳಿಸುವ ನೀತಿ ಕೈಬಿಡಬೇಕು ಎಂದು ಆಗ್ರಹಿಸಿದರು.

ಎನ್‌ಪಿಎಸ್ ರದ್ದುಗೊಳಿಸಿ ಓಪಿಎಸ್ ಮರು ಸ್ಥಾಪಿಸಬೇಕು ಹಾಗೂ ಇಪಿಎಸ್ ಪಿಂಚಣಿದಾರರಿಗೆ ಕನಿಷ್ಠ 9 ಸಾವಿರ ರೂ. ಪಿಂಚಣಿಯನ್ನು ಖಚಿತಪಡಿಸಬೇಕು. ದೇಶದ ಎಲ್ಲಾ ಅಸಂಘಟಿತ ಕಾರ್ಮಿಕರ ಕಲ್ಯಾಣಕ್ಕಾಗಿ ರಚಿಸಲಾಗಿರುವ ಸಾಮಾಜಿಕ ಭದ್ರತಾ ಮಂಡಳಿಯನ್ನು ಬಲಪಡಿಸಿ ಕೇಂದ್ರ ಸರ್ಕಾರ ವಾರ್ಷಿಕ ನಿವ್ವಳ ಆದಾಯದ ಶೇ.3ರಷ್ಟು ಅನುದಾನವನ್ನು ಅಸಂಘಟಿತ ಕಾರ್ಮಿಕರ ಕಾರ್ಯಕ್ರಮಗಳಿಗೆ ನೀಡಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ತಹಸೀಲ್ದಾರ್ ಕಿರಣ್ ಗೌರಯ್ಯ ಅವರಿಗೆ ಮನವಿ ಸಲ್ಲಿಸಿದರು. ಪ್ರತಿಭಟನೆಯಲ್ಲಿ ಸಿಐಟಿಯು ಜಿಲ್ಲಾಧ್ಯಕ್ಷ ಪಿ.ಆರ್.ಭರತ್, ಅಂಗನವಾಡಿ ನೌಕರರ ಸಂಘದ ಪದಾಧಿಕಾರಿಗಳಾದ ಯಮುನಾ, ಸಾವಿತ್ರಿ, ತೋಟ ಕಾರ್ಮಿಕರ ಸಂಘದ ರಘು, ಮುತ್ತ, ಯೂಸಫ್, ರೈತ ಸಂಘದ ಮುಖಂಡ ಟಿ.ಟಿ.ಉದಯಕುಮಾರ್, ಸಿಐಟಿಯು ಸಂಘಟನೆ ಕಾರ್ಯಕರ್ತರು ಪಾಲ್ಗೊಂಡಿದ್ದರು.

ಹಿಟಾಚಿ ಸಾಗಿಸುತ್ತಿದ್ದ ಲಾರಿ ಪಲ್ಟಿ



ಹಿಟಾಚಿ ಸಾಗಿಸುತ್ತಿದ್ದ ಲಾರಿ ರಸ್ತೆಯಲ್ಲಿ ಮಗುಚಿ ಬಿದ್ದಿರುವುದು.

ಮಡಿಕೇರಿ, ಜು.10– ಹಿಟಾಚಿ ಸಾಗಿಸುತ್ತಿದ್ದ ಲಾರಿಯೊಂದು ರಸ್ತೆಯಲ್ಲಿ ಮಗುಚಿ ಬಿದ್ದ ಘಟನೆ ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಯ ಜೋಡುಪಾಲ ಬಳಿ ಬುಧವಾರ ಸಂಭವಿಸಿದೆ.

ಮಡಿಕೇರಿ–ಮಂಗಳೂರು ರಾಷ್ಟ್ರೀಯ ಹೆದ್ದಾರಿ 275ರಲ್ಲಿ 6 ಚಕ್ರದ ಲಾರಿಯಲ್ಲಿ ಹಿಟಾಚಿಯನ್ನು ಸಂಪಾಜೆ ಕಡೆಗೆ ಸಾಗಿಸಲಾಗುತ್ತಿತ್ತು. ಆದರೆ, ಈ ವೇಳೆ ಇಳಿಜಾರಿನ ತಿರುವು ರಸ್ತೆಯಲ್ಲಿ ಲಾರಿಯ ಬ್ರೇಕ್ ವಿಫಲಗೊಂಡು ಚಾಲಕನ ನಿಯಂತ್ರಣ ಕಳೆದುಕೊಂಡು ಮಗುಚಿ ಬಿದ್ದಿದೆ.

ಲಾರಿ ಚಾಲಕ ಪ್ರಾಣಾಪಾಯದಿಂದ ಪಾರಾಗಿದ್ದು, ಹೆದ್ದಾರಿಯಲ್ಲಿ ಹಿಟಾಚಿ ಸಹಿತ ಲಾರಿ ಬಿದ್ದ ಪರಿಣಾಮ ಕೆಲಕಾಲ ವಾಹನ ಸಂಚಾರಕ್ಕೆ ಅಡ್ಡಿಯಾಗಿತ್ತು ನಂತರ ಹಿಟಾಚಿ ಹಾಗೂ ಲಾರಿಯನ್ನು ತೆರವುಗೊಳಿಸಿ, ಸಂಚಾರಕ್ಕೆ ಅನುವು ಮಾಡಲಾಯಿತು.

ಆ.15ರಂದು ಯರವರಿಂದ ಅರೆಬೆತ್ತಲೆ ಧರಣಿ



ಪಿ.ಎಸ್.ಮುತ್ತ

ಮಡಿಕೇರಿ, ಜು.10–ಕೊಡಗು ಜಿಲ್ಲೆಯ ಯರವರ ಜನಾಂಗದವರಿಗೆ ಜಮೀನು ನೀಡುವಂತೆ ಒತ್ತಾಯಿಸಿ ಆ.15ರಂದು ಜಿಲ್ಲಾ ನ್ಯಾಯಾಲಯ ಎದುರು ಅರೆಬೆತ್ತಲೆ ಧರಣಿ ನಡೆಸುವುದಾಗಿ ಯರವ ಯುವ ಒಕ್ಕೂಟದ ಗೌರವಾಧ್ಯಕ್ಷ ಪಿ.ಎಸ್.ಮುತ್ತ ತಿಳಿಸಿದ್ದಾರೆ.

ಯರವರ ಜನಾಂಗದವರನ್ನು ಗುಲಾಮಗಿರಿಯಿಂದ ಮುಕ್ತಗೊಳಿಸಿ, ಸ್ವತಂತ್ರವಾಗಿ ಕೃಷಿ ಮಾಡಿಕೊಂಡು ಜೀವನ ಸಾಗಿಸಲು ಜಮೀನು ನೀಡುವಂತೆ ಒತ್ತಾಯಿಸಿ 20 ವರ್ಷಗಳಿಂದ ನಡೆಸುತ್ತಿರುವ ಹೋರಾಟ ಫಲ ನೀಡದ ಕಾರಣ ಸ್ವಾತಂತ್ರ್ಯ ದಿನವಾದ ಆ.15 ರಂದು ಅರೆಬೆತ್ತಲೆ ಧರಣಿ ನಡೆಸಲು ನಿರ್ಧಾರಿಸಲಾಗಿದೆ. 'ಯರವರಿಗೆ ಬದುಕಲು ಭೂಮಿ ಕೊಡಿ' ಎಂದು 2003ರಿಂದ ನಿರಂತರ ಹೋರಾಟ ನಡೆಸುತ್ತಿದ್ದರೂ ಜಿಲ್ಲಾಡಳಿತ ಯಾವುದೇ ಸ್ಪಂದನೆ ನೀಡಿಲ್ಲವೆಂದು ಅವರು ಹೇಳಿಕೆಯಲ್ಲಿ ಆರೋಪಿಸಿದ್ದಾರೆ.

2015ರ ಆ.15ರಂದು ಜಿಲ್ಲಾಧಿಕಾರಿ ಕಚೇರಿ ಎದುರು ಅರೆಬೆತ್ತಲೆ ಸತ್ಯಾಗ್ರಹ ನಡೆಸಿ ಡಿಸಿಗೆ ಮನವಿ ಸಲ್ಲಿಸಲಾಗಿತ್ತು. ಅಂದಿನ ಜಿಲ್ಲಾಡಳಿತ 'ಯರವರ' ಸಮೀಕ್ಷೆ ನಡೆಸಿ ಸುಮಾರು 11 ಸಾವಿರ ಕುಟುಂಬಗಳು ತೋಟದ ಲೈನ್‌ಗಳಲ್ಲಿ ನೆಲೆಸಿ ಜೀವನ ನಡೆಸುತ್ತಿದ್ದಾರೆ. ಅವರಿಗೆ ಪುನರ್ವಸತಿ ಕಲ್ಪಿಸಬೇಕು ಎಂದು ವರದಿ ನೀಡಿತ್ತು. ಆದರೆ, ಇಲ್ಲಿಯವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಯರವರು ಭೂಮಿಯಿಂದ ವಂಚಿತರಾಗುತ್ತಿದ್ದಾರೆ ಮತ್ತು ಸ್ವತಂತ್ರವಾಗಿ ಬದುಕಲು ಸಾಧ್ಯವಾಗುತ್ತಿಲ್ಲ. ಇದೇ ಕಾರಣಕ್ಕೆ ಜಿಲ್ಲಾ ನ್ಯಾಯಾಲಯದ ಎದುರು ಅರೆಬೆತ್ತಲೆ ಧರಣಿ ನಡೆಸಲು ಮುಂದಾಗಿರುವುದಾಗಿ ತಿಳಿಸಿದ್ದಾರೆ.

ಮಹಿಳೆಯರ 5168 ಪ್ರಕರಣ ಇತ್ಯರ್ಥ

ಮಡಿಕೇರಿ: ರಾಜ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆಯ ಕೊಡಗು ಮಹಿಳಾ ಸಾಂತ್ವನ ಕೇಂದ್ರದಲ್ಲಿ 5168 ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ. ಈ ಸಾಂತ್ವನ ಕೇಂದ್ರದಲ್ಲಿ ಈವರೆಗೆ 5182 ವಿವಿಧ ಸ್ವರೂಪದ ಪ್ರಕರಣಗಳು ದಾಖಲಾಗಿದ್ದು, ಇದರಲ್ಲಿ 5168 ಪ್ರಕರಣಗಳು ಇತ್ಯರ್ಥಗೊಂಡಿವೆ. 2024–25ನೇ ಸಾಲಿನಲ್ಲಿ 65 ಪ್ರಕರಣಗಳು ದಾಖಲಾಗಿದ್ದು, 54 ಪ್ರಕರಣಗಳು ಇತ್ಯರ್ಥಗೊಂಡಿವೆ. ಉಳಿದ ಪ್ರಕರಣಗಳು ಇತ್ಯರ್ಥದ ಹಂತದಲ್ಲಿವೆ.

ವಿವಿಧ ಪ್ರಕರಣಗಳಿಗೆ ಸಂಬಂಧಿಸಿದಂತೆ ಒಟ್ಟು 55 ಸಾವಿರ ರೂ.ಗಳನ್ನು ಸಾಂತ್ವನ ಕೇಂದ್ರ ಹಾಗೂ ನ್ಯಾಯಾಲಯದ ಮೂಲಕ ಫಲಾನುಭವಿಗಳಿಗೆ ನೀಡಲಾಗಿದೆ. ಈ ಮೂಲಕ ಮಹಿಳಾ ಸಾಂತ್ವನ ಕೇಂದ್ರ ಕೊಡಗಿನಾದ್ಯಂತ ನೊಂದ ಮಹಿಳೆಯರ ಸಮಸ್ಯೆಗಳನ್ನು ದಾಖಲಿಸಿಕೊಂಡು ತಕ್ಷಣ ನೆರವು ಕಲ್ಪಿಸಲಾಗುತ್ತಿದೆ. ಮಾಹಿತಿಗೆ ಮಹಿಳಾ ಸಾಂತ್ವನ ಕೇಂದ್ರ ಅಥವಾ ಮೊ.ಸಂ: 9880985939 ಅನ್ನು ಸಂಪರ್ಕಿಸಬಹುದು ಎಂದು ಸಾಂತ್ವನ ಕೇಂದ್ರದ ಅಧ್ಯಕ್ಷ ಕೆ.ಎಸ್.ಪ್ರಕಾಶ್ ಹಾಗೂ ಪ್ರಧಾನ ಕಾರ್ಯದರ್ಶಿ ನಮಿತಾ ಆರ್.ರೈ ತಿಳಿಸಿದ್ದಾರೆ.

ಮುಂದಿನ ತಿಂಗಳು ಶಕ್ತಿ ಯೋಜನೆಗೆ ಚಾಲನೆ

ಚಾಮರಾಜನಗರ, ಜು.10–ಜಿಲ್ಲೆಯಲ್ಲಿ ಬಹುನಿರೀಕ್ಷಿತ ಸೋಲಾರ್ ಶಕ್ತಿ ಯೋಜನೆಗೆ ಮುಂದಿನ ತಿಂಗಳು ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಲಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ತಿಳಿಸಿದರು.

ನಗರದಲ್ಲಿ ನಡೆದ ಮತದಾರರ ಕೃತಜ್ಞತಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸೋಲಾರ್ ಶಕ್ತಿ ಯೋಜನೆಯಿಂದ ರೈತರ ಪಂಪ್‌ಸೆಟ್‌ಗಳಿಗೆ ವಿದ್ಯುತ್ ದೊರಕಲಿದೆ. ಇದರಿಂದ ರೈತರ ವಿದ್ಯುತ್ ಸಮಸ್ಯೆ ಬಗೆಹರಿಯಲಿದೆ ಎಂದರು.

ಆಹಾರ ಸಚಿವ ಕೆ.ಎಚ್.ಮುನಿಯಪ್ಪ ಮಾತನಾಡಿ, ನಾನು ಕೇಂದ್ರದಲ್ಲಿ ರೈಲ್ವೆ ಮಂತ್ರಿಯಾಗಿದ್ದಾಗ ಬೆಂಗಳೂರಿನಿಂದ ಕೊಳ್ಳೇಗಾಲ ಮಾರ್ಗವಾಗಿ ಚಾಮರಾಜನಗರಕ್ಕೆ ರೈಲು ಮಂಜೂರು ಮಾಡಿದ್ದೆ. 2.95 ಲಕ್ಷ ಹೊಸ ಕಾರ್ಡ್‌ಗಳನ್ನು ಮೂರು ತಿಂಗಳಲ್ಲಿ ವಿಲೇವಾರಿ ಮಾಡಲು ಆದೇಶಿಸಿದೆ ಎಂದು ಹೇಳಿದರು.

ವಸತಿ ಸಚಿವ ಜಮೀರ್ ಅಹಮದ್ ಮಾತನಾಡಿ, ಲೋಕಸಭಾ ಚುನಾವಣೆ ನಂತರ ಐದು ಗ್ಯಾರಂಟಿ ನಿಲ್ಲಿಸಿ ಎಂದು ಕೆಲವರು ಹೇಳಿದ್ದರು. ಇದು ಜನರ ಅನುಕೂಲಕ್ಕಾಗಿ ಕೊಟ್ಟಿದ್ದು, ರಾಜಕೀಯ ಲಾಭಕ್ಕಾಗಿ ಅಲ್ಲ. ಯಾವ ಕಾರಣಕ್ಕೂ ನಿಲ್ಲಿಸಲ್ಲ ಎಂದರು.

ಕಾರ್ಯಕ್ರಮದಲ್ಲಿ ಮಾಜಿ ಸಂಸದರಾದ ಎ.ಸಿದ್ದರಾಜು, ಎಂ.ಶಿವಣ್ಣ, ಮಾಜಿ ಶಾಸಕರಾದ ಎಸ್.ಜಯಣ್ಣ, ಎಂ.ಕೆ.ಸೋಮಶೇಖರ್, ಜಿ.ಎನ್.ನಂಜುಂಡಸ್ವಾಮಿ, ಭಾರತಿ ಶಂಕರ್, ಕೋಟೆ ಶಿವಣ್ಣ, ಬನ್ನೂರು ಕೃಷ್ಣಪ್ಪ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಸಮಿತಿ ಅಧ್ಯಕ್ಷ ಎಚ್.ವಿ.ಚಂದ್ರು, ಚುಡಾ ಅಧ್ಯಕ್ಷ ಮಹಮದ್ ಅಸ್ಗರ್ ಮುನ್ನ, ಬಿ.ಕೆ. ರವಿಕುಮಾರ್, ಜಿಪಂ ಮಾಜಿ ಸದಸ್ಯ ಕೆರೆಹಳ್ಳಿ ನವೀನ್, ಮುಖಂಡರಾದ ಆರ್. ಮಹದೇವ್, ಚಿಕ್ಕಮಹದೇವ್, ಆರ್.ಬಾಲರಾಜು, ಗ್ರಾಮಾಂತರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎ.ಎಸ್.ಗುರುಸ್ವಾಮಿ, ಚಾಮುಲ್ ನಿರ್ದೇಶಕ ನಂಜುಂಡಪ್ರಸಾದ್ ಇದ್ದರು.

ಚಾಮರಾಜನಗರ ಕ್ಷೇತ್ರಕ್ಕೆ 300 ಕೋಟಿ ಮಂಜೂರು

• ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹೇಳಿಕೆ • ಚಾ.ನಗರದಲ್ಲಿ ಮತದಾರರ ಕೃತಜ್ಞತಾ ಕಾರ್ಯಕ್ರಮ



ಚಾ.ನಗರದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ ಮತದಾರರ ಕೃತಜ್ಞತಾ ಕಾರ್ಯಕ್ರಮದಲ್ಲಿ ಸಿಎಂ ಸಿದ್ದರಾಮಯ್ಯ, ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ, ಕೆ.ವೆಂಕಟೇಶ್, ಜಮೀರ್ ಅಹಮದ್ ಖಾನ್, ಕೆ.ಹೆಚ್.ಮುನಿಯಪ್ಪ ಇದ್ದರು.

ಚಾಮರಾಜನಗರ, ಜು.10–ಒಂದು ತಿಂಗಳಲ್ಲಿ ಚಾಮರಾಜನಗರ ವಿಧಾನಸಭಾ ಕ್ಷೇತ್ರವೊಂದಕ್ಕೆ ಸಮಾಜ ಕಲ್ಯಾಣ ಇಲಾಖೆಯಿಂದ 300 ಕೋಟಿ ರೂ. ಅನ್ನು ಮಂಜೂರು ಮಾಡಲಾಗಿದೆ ಎಂದು ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹೇಳಿದರು.

ನಗರದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಮತದಾರರ ಕೃತಜ್ಞತಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕೊಳ್ಳೇಗಾಲ ಅಂಬೇಡ್ಕರ್ ಭವನಕ್ಕೆ 3.50 ಕೋಟಿ ರೂ. ನೀಡಲಾಗಿದೆ. ಮೈಸೂರು ಮತ್ತು ಚಾಮರಾಜನಗರ ಜಿಲ್ಲೆ ಒಂದೇ ಎಂದು ಭಾವಿಸಿ ಅಭಿವೃದ್ಧಿ ಕೆಲಸ ಮಾಡಲಾಗುವುದು. ನನ್ನ ಕ್ಷೇತ್ರದಲ್ಲಿ ಜನರು 3 ಸಾವಿರ ಲೀಡ್ ಕೊಡುವ ಮೂಲಕ ಹುಷಾರಾಗಿರು ಎಂದು ಎಚ್ಚರಿಕೆ ನೀಡಿದ್ದಾರೆ. ಸಂಸದ ಸುನೀಲ್ ಬೋಸ್ 6–7 ತಿಂಗಳಲ್ಲಿ ರಿಪೋರ್ಟ್ ಕಾರ್ಡ್ ತೋರಿಸುವುದಾಗಿ ಹೇಳಿದ್ದಾರೆ. ಅದು ಬರಿ ಮಾತಾಗಬಾರದು, ಅಭಿವೃದ್ಧಿ ಮಾಡಿ ತೋರಿಸಬೇಕು ಎಂದರು.

ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಐತಿಹಾಸಿಕ, ಅಭೂತಪೂರ್ವ ಗೆಲುವು ಸಾಧಿಸಲು ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರ ಪರಿಶ್ರಮದ ಕೊಡುಗೆಯೇ ಕಾರಣ. ಕ್ಷೇತ್ರದಲ್ಲಿ ಹೆಚ್ಚು ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು, ರೈತರು, ಕಾರ್ಮಿಕರಿಗೆ ಸರ್ಕಾರದ ಸವಲತ್ತು ಹಾಗೂ ಅಭಿವೃದ್ಧಿ ಕಾರ್ಯಗಳು ತಲುಪಬೇಕು. ಈ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ನಾವು ಶಕ್ತಿ ಮೀರಿ ಕೆಲಸ ಮಾಡುತ್ತೇವೆ ಎಂದು ಭರವಸೆ ನೀಡಿದರು.

ಹೆಚ್ಚಿನ ಅನುದಾನ ತಂದು ಕ್ಷೇತ್ರದ ಅಭಿವೃದ್ಧಿ: ಈಗ ತಾನೇ ಕ್ಷೇತ್ರದ ಮತದಾರರು ನನ್ನನ್ನು ಅಡ್ಮಿಷನ್ ಮಾಡಿಸಿದ್ದೀರಿ, ಇನ್ನೂ 6–7 ತಿಂಗಳಾದ ಮೇಲೆ ನನ್ನ ರಿಪೋರ್ಟ್ ಕಾರ್ಡ್ ನೋಡಿ ನನ್ನ ಬಗ್ಗೆ ಮಾತನಾಡಿ. ಕ್ಷೇತ್ರಕ್ಕೆ ಹೆಚ್ಚು ಅನುದಾನ ತಂದು ಅಭಿವೃದ್ಧಿ ಮಾಡುತ್ತೇನೆ ಎಂದು ಸಂಸದ ಸುನೀಲ್ ಬೋಸ್ ಹೇಳಿದರು.

ಲೋಕಸಭಾ ಕ್ಷೇತ್ರದ ಎಲ್ಲಾ ಮತದಾರ ಪ್ರಭುಗಳಿಗೆ ತುಂಬು ಹೃದಯದ ಕೃತಜ್ಞತೆ ಸಲ್ಲಿಸುತ್ತೇನೆ. ಐತಿಹಾಸಿಕ ಗೆಲುವು ತಂದು ಕೊಟ್ಟಿದ್ದೀರಿ. ಕಳೆದ ಬಾರಿ ಕಳೆದುಕೊಂಡಿದ್ದ ಕ್ಷೇತ್ರವನ್ನು ಮರಳಿ ಗೆದ್ದುಕೊಟ್ಟಿದ್ದೀರಿ. ಈ ಗೆಲುವಿನಿಂದ ನನಗೆ ಹೊಸ ಜವಾಬ್ದಾರಿ ನೀಡಿದ್ದೀರಿ. ಈ ನಂಬಿಕೆಯ ಉಳಿಸಿಕೊಳ್ಳುವ ಕೆಲಸವನ್ನು ಮಾಡುತ್ತೇನೆ ಎಂದರು.

ಬಿಜೆಪಿಯವರು 400 ಸ್ಥಾನ ಬಂದರೆ ಸಂವಿಧಾನ ಬದಲಾವಣೆ ಮಾಡುವ ಅಜೆಂಡಾ ಹೊಂದಿದ್ದರು. ಇದಕ್ಕೆ ಮತದಾರರು ತಕ್ಕಪಾಠ ಕಲಿಸಿದ್ದಾರೆ. ದೇಶದಲ್ಲಿ ಕಾಂಗ್ರೆಸ್ ಮುಗಿಸಲು ಸಾಧ್ಯವಿಲ್ಲ ಎಂಬ ಉತ್ತರ ನೀಡಿದ್ದಾರೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸಚಿವರಾದ ಜಮೀರ್ ಅಹಮದ್ ಖಾನ್, ಕೆ.ಹೆಚ್.ಮುನಿಯಪ್ಪ, ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಅನಿಲ್ ಚಿಕ್ಕಮಾದು, ಗಣೇಶ್ ಪ್ರಸಾದ್, ವಿಧಾನಪರಿಷತ್ ಸದಸ್ಯರಾದ ಡಾ.ಯತೀಂದ್ರ ಸಿದ್ದರಾಮಯ್ಯ, ಡಾ.ತಿಮ್ಮಯ್ಯ, ಮಾಜಿ ಶಾಸಕರಾದ ನರೇಂದ್ರ, ಕೆಪಿಸಿಸಿ ಮಹಿಳಾ ಅಧ್ಯಕ್ಷೆ ಪುಷ್ಪಾ ಅಮರನಾಥ್, ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ, ಮೈಸೂರು ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ವಿಜಯಕುಮಾರ್, ಪಕ್ಷದ ಮುಖಂಡರು ಇದ್ದರು.

ಲೋಕಾಯುಕ್ತ ಅಧಿಕಾರಿಗಳಿಂದ ದೂರು ಸ್ವೀಕಾರ



ಕೊಳ್ಳೇಗಾಲದಲ್ಲಿ ಲೋಕಾಯುಕ್ತ ಅಧಿಕಾರಿಗಳು ಸಾರ್ವಜನಿಕರಿಂದ ದೂರು ಸ್ವೀಕರಿಸಿದರು.

ಕೊಳ್ಳೇಗಾಲ, ಜು.10–ಪಟ್ಟಣದ ಪ್ರವಾಸಿ ಮಂದಿರದಲ್ಲಿ ಬುಧವಾರ ಲೋಕಾಯುಕ್ತ ಅಧಿಕಾರಿಗಳು ಸಾರ್ವಜನಿಕರಿಂದ 11 ದೂರು ಸ್ವೀಕರಿಸಿದರು.

ಇದೇ ವೇಳೆ ತಾಲೂಕಿನ ಧನಗೆರೆ ಹೆದ್ದಾರಿಯ ಚರಂಡಿ ಕಾಮಗಾರಿ ಪೂರ್ಣವಾಗದೆ ಕೊಳಚೆ ನೀರು ಜಮೀನುಗಳಿಗೆ ಹರಿಯುತ್ತಿದೆ. ನಗರಸಭೆಯಲ್ಲಿ ನಿವೇಶನಗಳಿಗೆ ಇ–ಸ್ವತ್ತು ಮಾಡಿಕೊಡುತ್ತಿಲ್ಲ. ನಗರಸಭಾಧಿಕಾರಿಗಳು ಖಾಸಗಿ ವ್ಯಕ್ತಿಗಳು ಒತ್ತುವರಿ ಮಾಡಿಕೊಂಡಿರುವ ಜಾಗವನ್ನು ತೆರವುಗೊಳಸದೆ ನಿರ್ಲಕ್ಷ್ಯ ವಹಿಸುತ್ತಿದ್ದಾರೆ. ಕೊಂಗರಹಳ್ಳಿ ಗ್ರಾಮದಲ್ಲಿ ಅಕ್ರಮ ಖಾತೆ ಮಾಡಲಾಗಿದೆ ಎಂದು ಸಾರ್ವಜನಿಕರು ದೂರು ಸಲ್ಲಿಸಿದರು. ಈ ಸಂಧರ್ಭದಲ್ಲಿ ಚಾ.ನಗರ ಡಿವೈಎಸ್ಪಿ ಮ್ಯಾಥ್ಯೂಸ್ ಥಾಮಸ್, ಇನ್ಸ್‌ಪೆಕ್ಟರ್ ಲೋಹಿತ್ ಕುಮಾರ್, ಶಶಿಕುಮಾರ್ ಮತ್ತು ಸಿಬ್ಬಂದಿ ಮಹಾಲಿಂಗಸ್ವಾಮಿ, ಶ್ರೀನಿವಾಸ್, ತಾಪಂ ಇಓ ಶ್ರೀನಿವಾಸ್, ಸಹಾಯಕ ನಿರ್ದೇಶಕ ಗೋಪಾಲಕೃಷ್ಣ, ನಗರಸಭೆ ಪೌರಯುಕ್ತ ರಮೇಶ್, ಕೃಷಿ ಅಧಿಕಾರಿ ಸುಂದರಮ್ಮ ಹಾಜರಿದ್ದರು.

ಬಸ್ ಡಿಕ್ಕಿ: 6 ವರ್ಷದ ಮಗು ಸಾವು



ಚಾಮರಾಜನಗರ, ಜು.10–ಸಾರಿಗೆ ಬಸ್ ಡಿಕ್ಕಿ ಹೊಡೆದ ಪರಿಣಾಮ 6 ವರ್ಷದ ಹೆಣ್ಣು ಮಗು ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ತಾಲೂಕಿನ ಮಾದಾಪುರ ಗ್ರಾಮದ ಬಳಿ ಬುಧವಾರ ನಡೆದಿದೆ.

ತಾಲೂಕಿನ ಭೋಗಾಪುರ ಗ್ರಾಮದ ಪಿ.ಮಲ್ಲೇಶ್ ಅವರ ಪುತ್ರಿ ತನಿಷ್ಕಾ ಮೃತಪಟ್ಟ ಮಗು. ಮಗುವನ್ನು ಮಾದಪುರದ ಖಾಸಗಿ ಶಾಲೆಗೆ ಸೇರಿಸಲು ತಾಯಿ ಹಾಗೂ ಅಜ್ಜಿ ಹೋಗಿದ್ದರು. ಈ ವೇಳೆ ಸಂತೇಮರಹಳ್ಳಿ ಕಡೆಯಿಂದ ಚಾಮರಾಜನಗರಕ್ಕೆ ಬರುತ್ತಿದ್ದ ರಸ್ತೆಯಲ್ಲಿ ಮಗು ಅಡ್ಡಲಾಗಿ ನುಗ್ಗಿದ ಪರಿಣಾಮ ಬಸ್ ಡಿಕ್ಕಿ ಹೊಡೆದಿದೆ. ಪರಿಣಾಮ ಮಗು ಸ್ಥಳದಲ್ಲೇ ಮೃತಪಟ್ಟಿದೆ.

ಸ್ಥಳ ಪರಿಶೀಲಿಸಿದ ಸಂಚಾರ ಠಾಣೆ ಪೊಲೀಸರು ಬಸ್ ಹಾಗೂ ಚಾಲಕನನ್ನು ವಶಕ್ಕೆ ಪಡೆದು ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಮಾದಿಗ ಸಮುದಾಯಕ್ಕೆ ಅವಕಾಶ ಕಲ್ಪಿಸಲು ಮನವಿ



ಚಾ.ನಗರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಡಾ.ಬಾಬು ಜಗಜೀವನರಾಂ ಸಂಘಗಳ ಒಕ್ಕೂಟದ ವತಿಯಿಂದ ಮನವಿ ಸಲ್ಲಿಸಲಾಯಿತು.

ಚಾಮರಾಜನಗರ, ಜು.10– ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಅವರಿಗೆ ಸಚಿವ ಸಂಪುಟ ದರ್ಜೆಯ ಸ್ಥಾನಮಾನ ನೀಡಬೇಕು. ಜಿಲ್ಲೆಯಲ್ಲಿ ಮಾದಿಗ ಸಮುದಾಯಕ್ಕೆ ಜಿಪಂ, ತಾಪಂ ಹಾಗೂ ನಿಗಮ ಮಂಡಳಿಗಳಲ್ಲಿ ಅವಕಾಶ ಕಲ್ಪಿಸಿಕೊಡಬೇಕು ಎಂದು ಡಾ.ಬಾಬು ಜಗಜೀವನರಾಂ ಸಂಘಗಳ ಒಕ್ಕೂಟದ ವತಿಯಿಂದ ನಗರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಲಾಯಿತು.

ನಗರದ ಅಂಬೇಡ್ಕರ್ ಕ್ರೀಡಾಂಗಣದಲ್ಲಿ ನಡೆದ ಚಾಮರಾಜನಗರ ಲೋಕಸಭಾ ಕ್ಷೇತ್ರದ ಮತದಾರರ ಕೃತಜ್ಞತಾ ಸಭೆಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಮಾಜಿ ನಿರ್ದೇಶಕ ಎಂ.ಶಿವಮೂರ್ತಿ ನೇತೃತ್ವದಲ್ಲಿ ಸಿಎಂ ಸಿದ್ದರಾಯಯ್ಯ ಅವರಿಗೆ ಮನವಿ ಸಲ್ಲಿಸಿ, ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಸಚಿವರಾದ ಹೆಚ್.ಸಿ. ಮಹದೇವಪ್ಪ, ಕೆ.ವೆಂಕಟೇಶ್, ಕೆ.ಎಚ್.ಮುನಿಯಪ್ಪ, ವಿಧಾನಪರಿಷತ್ ಸದಸ್ಯ ಡಾ. ತಿಮ್ಮಯ್ಯ, ಹೆಚ್.ಹೆಚ್. ನಾಗರಾಜು, ರಾಜಶೇಖರ್ ಬಸವನಪುರ, ರಾಚಪ್ಪಾಜಿ, ಲಿಂಗರಾಜು ಎಡತೊರೆ, ಸೋಮಶೇಖರ್, ನರಸಿಂಹ, ನಿಟ್ರೆ ಮಹದೇವ, ಬಾಲರಾಜು, ಸೋಮು, ಚಾಮರಾಜು ಜವರಯ್ಯ ರಾಚಯ್ಯ, ಮರಪ್ಪ, ಜಗದೀಶ್, ರಾಜುಮರಳ್ಳಿ, ಆರ್.ಕೆ.ಶಿವಕುಮಾರ್ ಇತರರು ಹಾಜರಿದ್ದರು.

ಜಿಲ್ಲೆಯ ಅಭಿವೃದ್ಧಿಗೆ ಸಾಕಷ್ಟು ಅನುದಾನ

ಚಾಮರಾಜನಗರ: ಜಿಲ್ಲೆಯ ಅಭಿವೃದ್ಧಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಾಕಷ್ಟು ಅನುದಾನ ನೀಡಿದ್ದಾರೆ ಎಂದು ಕೊಳ್ಳೇಗಾಲ ಶಾಸಕ ಎ.ಆರ್. ಕೃಷ್ಣಮೂರ್ತಿ ಹೇಳಿದರು.



ಎ.ಆರ್. ಕೃಷ್ಣಮೂರ್ತಿ

ಸಿದ್ದರಾಮಯ್ಯ ಅವರು 2013ರಿಂದ 2018ರ ಅವಧಿಯಲ್ಲಿ ಸಿಎಂ ಆಗಿದ್ದಾಗ ಅನೇಕ ಅಭಿವೃದ್ಧಿ ಕೆಲಸಗಳು ನಡೆದಿದ್ದವು. ಕೊಯಮತ್ತೂರಿನಲ್ಲಿ ಸಮಾವೇಶ ಮಾಡಿ, ಅನೇಕ ಉದ್ಯಮಿಗಳನ್ನು ಚಾಮರಾಜನಗರಕ್ಕೆ ಆಹ್ವಾನಿಸಿದ್ದರು. ಇದರಿಂದ ಬದನಗುಪ್ಪೆ ಕೈಗಾರಿಕಾ ಪ್ರದೇಶದಲ್ಲಿ ಅನೇಕ ಕೈಗಾರಿಕೆಗಳು ಆರಂಭವಾಗಿ ಉದ್ಯೋಗಗಳು ದೊರೆತಿವೆ. ಎರಡನೇ ಹಂತ ಕೂಡ ವಿಸ್ತರಣೆಯಾಗುತ್ತಿದೆ ಎಂದರು.

ಕಾಡಂಚಿನ ಗ್ರಾಮಗಳ ಜನರ ಬಗ್ಗೆ ಸರ್ಕಾರ ಗಮನ ಹರಿಸಬೇಕು. ಮೂಲ ನಿವಾಸಿಗಳನ್ನು ಒಕ್ಕಲೆಬ್ಬಿಸುವ ಕೆಲಸ ನಡೆಯುತ್ತಿದೆ. ನಮ್ಮ ತಂದೆ ಬಿ.ರಾಚಯ್ಯ ಅವರು ತಲಾ ಎರಡು ಎಕರೆ ಜಮೀನು ನೀಡಿ ಜೀವನ ನಿರ್ವಹಣೆಗೆ ಅನುವು ಮಾಡಿಕೊಟ್ಟಿದ್ದರು. ಇಂದು ಅರಣ್ಯ ಇಲಾಖೆ ಅವರನ್ನೆಲ್ಲ ಒಕ್ಕಲೆಬ್ಬಿಸುತ್ತಿದೆ. ಹೊರ ರಾಜ್ಯದವರು ಜಮೀನುಗಳನ್ನು ಖರೀದಿಸಿ, ರೆಸಾರ್ಟ್‌ಗಳನ್ನು ಮಾಡುತ್ತಿದ್ದಾರೆ. ಅವರ ವಿರುದ್ಧ ಕ್ರಮವಿಲ್ಲ. ಈ ಬಡ ಗಿರಿಜನರನ್ನು ಒಕ್ಕಲೆಬ್ಬಿಸಲಾಗುತ್ತಿದೆ. ಇದು ಸರಿಯಲ್ಲ ಎಂದರು.

ಶಾಸಕ ಸಿ.ಪುಟ್ಟರಂಗಶೆಟ್ಟಿ ಮಾತನಾಡಿ, ಚಾಮರಾಜನಗರಕ್ಕೆ ಮುಖ್ಯಮಂತ್ರಿ ಬಂದರೆ ಅಧಿಕಾರ ಕಳೆದುಕೊಳ್ಳುತ್ತಾರೆ ಎಂಬ ಮೂಢನಂಬಿಕೆಯನ್ನು ಹೋಗಲಾಡಿಸಿದ ಕೀರ್ತಿ ಸಿದ್ದರಾಮಯ್ಯ ಅವರಿಗೆ ಸಲ್ಲುತ್ತದೆ. ಕುಡಿಯುವ ನೀರಿನ ಎರಡನೇ ಹಂತದ ಯೋಜನೆ, ಒಳಚರಂಡಿ, ಬಸ್ ನಿಲ್ದಾಣ, ನಿವೇಶನ ಹಂಚಿಕೆ ಮಾಡುವಂತೆ ಮನವಿ ಮಾಡಿದರು.

ಒಂದನೇ ಪುಟದಿಂದ

ಸಿಎಂ ಸಿದ್ದರಾಮಯ್ಯ ಪುನರುಚ್ಚಾರ

ಮುಡಾದಲ್ಲಿ ಶೇ.50:50 ಅನುಪಾತನವನ್ನು ರದ್ದುಪಡಿಸಲಾಗಿದೆ. ಈಗಾಗಲೇ ತನಿಖೆ ನಡೆಯುತ್ತಿರುವುದರಿಂದ ಪ್ರಾಧಿಕಾರದಲ್ಲಿ ಆಗಿರುವ ನಿರ್ಣಯಗಳ ಅಮಾನತ್ತಿನರಿಸಲಾಗಿದೆ. ಮುಡಾ ಪ್ರಕರಣವನ್ನು ಸಿಬಿಐಗೆ ವಹಿಸಲ್ಲ. ನಮ್ಮ ಪೊಲೀಸರು ಸಮರ್ಥರಿಲ್ಲವೇ? ಎಲ್ಲದಕ್ಕೂ ಸಿಬಿಐ ಎನ್ನುವ ಬಿಜೆಪಿ ನಾಯಕರು ತಮ್ಮ ಸರ್ಕಾರದ ಅವಧಿಯಲ್ಲಿ ಎಷ್ಟು ಕೇಸ್‌ಗಳನ್ನು ಕೊಟ್ಟಿದ್ದಾರೆ. ಮೊದಲು ಚೋರ್ ಬಚಾವ್ ಸಂಸ್ಥೆ ಎನ್ನುತ್ತಿದ್ದವರಿಗೆ ಈಗ ಅದರ ಮೇಲೆ ಪ್ರೀತಿ ಬಂದಿದೆ. ಈಗಿನ ಸಿಬಿಐ ಮುಖ್ಯಸ್ಥ ಕೂಡ ಕರ್ನಾಟಕದಲ್ಲಿ ಕೆಲಸ ಮಾಡಿದವರು.ನಮ್ಮ ಪೊಲೀಸರು ತನಿಖೆ ವಿಚಾರದಲ್ಲಿ ಸಮರ್ಥರಿದ್ದಾರೆ ಎಂದು ಸಮರ್ಥಿಸಿಕೊಂಡರು.

ಸಂಪುಟದಲ್ಲಿ ತೀರ್ಮಾನ: ರಾಮನಗರ ಜಿಲ್ಲೆಯ ಹೆಸರನ್ನು ಬದಲಾವಣೆ ಮಾಡುವ ಕುರಿತು ಸಚಿವ ಸಂಪುಟದಲ್ಲಿ ಚರ್ಚಿಸಿ ತೀರ್ಮಾನ ಮಾಡುತ್ತೇವೆ. ಜಿಲ್ಲೆಯ ಮುಖಂಡರು, ಜನಪ್ರತಿನಿಧಿಗಳು ಬಂದು ರಾಮನಗರ ಜಿಲ್ಲೆಯ ಹೆಸರು ಬದಲಾವಣೆ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಮೊದಲಿನಿಂದಲೂ ಬೆಂಗಳೂರು ದಕ್ಷಿಣ ಎಂದು ಹೆಸರು ಬದಲಾಗಬೇಕು ಎಂಬುದು ಅವರ ಆಸೆಯಾಗಿದೆ. ಮನವಿ ಕೊಟ್ಟಿದ್ದಾರೆ, ಸಚಿವ ಸಂಪುಟದಲ್ಲಿ ಇಟ್ಟು ಚರ್ಚೆ ಮಾಡಿ ಮುಂದಿನ ತೀರ್ಮಾನ ಮಾಡುತ್ತೇವೆ ಎಂದರು.

ಜೆಡಿಎಸ್ ಅಧಿಕಾರಕ್ಕೆ ಬರಲ್ಲ: ಅಧಿಕಾರಕ್ಕೆ ಬಂದರೆ ಹೆಸರು ಕಿತ್ತು ಹಾಕುತ್ತೇವೆಂದು ಹೆಚ್.ಡಿ.ಕುಮಾರಸ್ವಾಮಿ ಹೇಳಿರುವ ಮಾತಿಗೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ಅವರು (ಜೆಡಿಎಸ್) ಅಧಿಕಾರಕ್ಕೆ ಬಂದರೆ ತಾನೇ ಹೆಸರು ಕಿತ್ತು ಹಾಕುವುದು. ಜನರು ಆಶೀರ್ವಾದ ಮಾಡಿದ ಕಾರಣ ನಾನು ಸಿಎಂ ಆಗಿದ್ದೇನೆ. ಇವರಿಗೆ ಜನರು ಆಶೀರ್ವಾದ ಮಾಡುವುದಿಲ್ಲ. ಇವರು ಇನ್ನೆಲ್ಲಿ ಸಿಎಂ ಆಗುತ್ತಾರೆ. ಹೆಸರು ಬದಲಾವಣೆ ಮಾಡುವುದು ಭ್ರಮೆ ಎಂದು ತಿರುಗೇಟು ನೀಡಿದರು. ಮಾಜಿ ಸಚಿವ ಬಿ.ನಾಗೇಂದ್ರ ಅವರ ಮೇಲೆ ಇಡಿ ದಾಳಿ ವಿಚಾರ ಕುರಿತು ಪ್ರತಿಕ್ರಿಯೆ ನೀಡಿದ ಸಿಎಂ, ಇಡಿ ಅವರ ಕೆಲಸವನ್ನು ಅವರು ಮಾಡುತ್ತಾರೆ. ಇದರ ಬಗ್ಗೆ ನಾನೇನೂ ಜಾಸ್ತಿ ಮಾತನಾಡುವುದಿಲ್ಲ. ದಾಳಿ ಮಾಡಲಿ. ನಾವು ಅದರ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ ಎಂದರು.

ಇಲಾಖಾವಾರು ಪ್ರಗತಿ ಪರಿಶೀಲನಾ ಸಭೆ: ರಾಜ್ಯದ ಅಭಿವೃದ್ಧಿಗೆ ಸಂಬಂಧಿಸಿದಂತೆ ರಾಜ್ಯದ ಸಂಸದರ ಜತೆ ಸಭೆ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಕರ್ನಾಟಕಕ್ಕೆ ಆಗುವ ವಿಚಾರಗಳ ಬಗ್ಗೆ ಕಾದು ನೋಡೋಣ. ಮುಂದಿನ ದಿನಗಳಲ್ಲಿ ಜಿಲ್ಲಾವಾರು ಪ್ರಗತಿಪರಿಶೀಲನೆ ನಡೆಸುತ್ತೇನೆ ಎಂದರು. ಕೇಂದ್ರಸರ್ಕಾರಕ್ಕೆ ಕರ್ನಾಟಕಕ್ಕೆ ಆಗಬೇಕಿರುವ ಕೆಲಸಗಳ ಬಗ್ಗೆ ಮನವಿ ಸಲ್ಲಿಸಿದ್ದೇವೆ. ಗಂಭೀರವಾಗಿ ಪರಿಗಣಿಸುತ್ತೇವೆಂದು ಭರವಸೆ ನೀಡಿದ್ದಾರೆ ಎಂದರು. ಈ ಸಂದರ್ಭದಲ್ಲಿ ಸಚಿವರಾದ ಡಾ.ಹೆಚ್.ಸಿ. ಮಹದೇವಪ್ಪ, ಕೆ.ವೆಂಕಟೇಶ್, ಜಮೀರ್ ಅಹ್ಮದ್, ಸಂಸದ ಸುನೀಲ್ ಬೋಸ್, ಮುಡಾ ಅಧ್ಯಕ್ಷ ಕೆ.ಮರೀಗೌಡ, ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಡಾ. ಪುಷ್ಪಾ ಅಮರನಾಥ್, ಮಾಜಿ ಎಂ.ಕೆ.ಸೋಮಶೇಖರ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಮತ್ತಿತರರು ಹಾಜರಿದ್ದರು.

ಕಾರಣಕ್ಕೂ 'ಗ್ಯಾರಂಟಿ' ನಿಲ್ಲಿಸಲ್ಲ

ರಾಜ್ಯದ ಸಂಸದರಿಗೆ ಸಿದ್ದರಾಮಯ್ಯ ಸಲಹೆ ನೀಡಿದರು. ನೆಹರೂ ಅವಧಿಯಿಂದ ಇವತ್ತಿನವರೆಗೆ ಕಾಂಗ್ರೆಸ್ ನಿರಂತರವಾಗಿ ಸಮಾಜದ ಸಮಗ್ರ ಅಭಿವೃದ್ಧಿ, ಜೊತೆಗೆ ಸರ್ವ ಜನರ ಪ್ರಗತಿ ಮತ್ತು ಸಾಮರಸ್ಯಕ್ಕಾಗಿ ಶ್ರಮಿಸುತ್ತಿದೆ ಎಂದು ತಿಳಿಸಿದರು.

ಬಿಜೆಪಿಯವರು ಬ್ರಿಟಿಷ್‌ರೊಂದಿಗೆ ಸೇರಿದ್ದರು; ಸಂವಿಧಾನದ ಅಡಿಯಲ್ಲಿ ದಲಿತರು, ಮಹಿಳೆಯರು, ಹಿಂದುಳಿದವರು ಸೇರಿದಂತೆ ಎಲ್ಲಾ ಬಡವರಿಗೆ ಆರ್ಥಿಕ, ಸಾಮಾಜಿಕ ಶಕ್ತಿ ಕೊಡಬೇಕು ಎನ್ನುವುದು ನನ್ನ ಗುರಿಯಾಗಿದೆ. ಕಾಂಗ್ರೆಸ್ ಆದ್ಯತೆಯೂ ಇದೇ ಆಗಿದೆ. ದೇಶದ ಸ್ವಾತಂತ್ರ್ಯಕ್ಕಾಗಿ ಅತೀ ಹೆಚ್ಚು ಪ್ರಾಣ, ಆಸ್ತಿ–ಪಾಸ್ತಿ ಕಳೆದುಕೊಂಡವರು ನಾವು ಕಾಂಗ್ರೆಸ್ಸಿಗರು. ಬ್ರಿಟಿಷರೇ ಭಾರತ ಬಿಟ್ಟು ತೊಲಗಿ ಎಂದು ಮಹಾತ್ಮಗಾಂಧಿ ಕರೆ ಕೊಟ್ಟಾಗ ಬಿಜೆಪಿಯವರು ಬ್ರಿಟಿಷರ ಜೊತೆ ಕೈಜೋಡಿಸಿದರು. ಉಳಿದ ಭಾರತೀಯರೆಲ್ಲರೂ ಸ್ವಾತಂತ್ರ್ಯ ಹೋರಾಟಕ್ಕೆ ದುಮುಕಿದರು ಎಂದು ಹೋರಾಟದ ದಿನಗಳನ್ನು ನೆನಪಿಸಿದರು.

ಸರ್ವ ಜನಾಂಗಗಳ ಅನುಕೂಲಕ್ಕಾಗಿ ಕಾಂಗ್ರೆಸ್ ನಿರಂತರವಾಗಿ ಹಲವು ಭಾಗ್ಯಗಳನ್ನು ನೀಡುತ್ತಾ ಬಂದಿದೆ. ನಾನು ಎರಡನೇ ಬಾರಿ ಮುಖ್ಯಮಂತ್ರಿಯಾಗಿ ಐದು ಗ್ಯಾರಂಟಿಗಳನ್ನು ನಾಡಿನ ಜನತೆಯ ಮನೆ ಮನೆಗೆ ತಲುಪಿಸಿದ್ದೇನೆ. ಆದರೂ ಬಿಜೆಪಿಯವರು ನಿರಂತರ ಸುಳ್ಳುಗಳನ್ನು ಹುಟ್ಟುಹಾಕುತ್ತಾ ಗ್ಯಾರಂಟಿಗಳಿಗೆ ಹಣ ಇಲ್ಲ ಎಂದು ಅಪಪ್ರಚಾರ ಮಾಡುತ್ತಿದ್ದಾರೆ ಎಂದರು. ಕಾರ್ಯಕ್ರಮದಲ್ಲಿ ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ, ಕೆ.ವೆಂಕಟೇಶ್, ಜಮೀರ್ ಅಹಮದ್ ಖಾನ್, ಕೆ.ಹೆಚ್.ಮುನಿಯಪ್ಪ, ಸಂಸದ ಸುನೀಲ್ ಬೋಸ್, ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಎ.ಆರ್.ಕೃಷ್ಣಮೂರ್ತಿ, ಅನಿಲ್ ಚಿಕ್ಕಮಾದು, ಗಣೇಶ್ ಪ್ರಸಾದ್, ವಿಧಾನ ಪರಿಷತ್ ಸದಸ್ಯರಾದ ಡಾ.ಯತೀಂದ್ರ ಸಿದ್ದರಾಮಯ್ಯ, ಡಾ.ತಿಮ್ಮಯ್ಯ, ಮಾಜಿ ಶಾಸಕರಾದ ನರೇಂದ್ರ, ಕೆಪಿಸಿಸಿ ಮಹಿಳಾ ಅಧ್ಯಕ್ಷೆ ಪುಷ್ಪಾ ಅಮರನಾಥ್, ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ, ಮೈಸೂರು ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ವಿಜಯಕುಮಾರ್, ಪಕ್ಷದ ಮುಖಂಡರು ಇದ್ದರು.

ಆಕ್ಸಿಜನ್ ಸಂತ್ರಸ್ತರಿಗೆ ಅನ್ಯಾಯವಾಗಲು ಬಿಡಲ್ಲ

ಚಾಮರಾಜನಗರ, ಜು.10– ಕೋವಿಡ್ ಸಂದರ್ಭದಲ್ಲಿ ಚಾಮರಾಜ ನಗರ ಜಿಲ್ಲಾ ಆಸ್ಪತ್ರೆಯಲ್ಲಿ ಆಕ್ಸಿಜನ್ ಕೊರತೆಯಿಂದ ಮೃತಪಟ್ಟವರ ಕುಟುಂಬಕ್ಕೆ ಅನ್ಯಾಯವಾಗಲು ನಮ್ಮ ಸರ್ಕಾರ ಬಿಡುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಮತದಾರರ ಕೃತಜ್ಞತಾ ಸಮಾರಂಭ ಮುಕ್ತಾಯವಾದ ಬಳಿಕ ಆಕ್ಸಿಜನ್ ದುರಂತದಲ್ಲಿ ಮೃತಪಟ್ಟ ಸಂತ್ರಸ್ತ ಕುಟುಂಬಸ್ಥರು ದಯಾಮರಣ ನೀಡುವಂತೆ ಕೇಳುತ್ತಿದ್ದಾರೆ ಎಂಬ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, ಯಾರು ಕೂಡ ದಯಾ ಮರಣ ಕೇಳಬಾರದು. ಸಂತ್ರಸ್ತರಿಗೆ ಉದ್ಯೋಗ ನೀಡುವ ಬಗ್ಗೆ ನಾನು ಈ ಕೂಡಲೇ ಜಿಲ್ಲಾಧಿಕಾರಿಗೆ ಸೂಚನೆ ನೀಡಿದ್ದೇನೆ. ಮೃತಪಟ್ಟವರ ಕುಟುಂಬಸ್ಥರಿಗೆ ಯಾವುದೇ ಕಾರಣಕ್ಕೂ ಅನ್ಯಾಯವಾಗಲ್ಲ ಎಂದರು.

ಪ್ರಾಧಿಕಾರಗಳ ಅಧಿಕಾರಕ್ಕೆ ಕತ್ತರಿ

ಅಧಿಕೃತ ಜ್ಞಾಪನ ಮಾಡುವ ಮೊದಲು ಆಯುಕ್ತಾಲಯದ ಒಪ್ಪಿಗೆ ಪಡೆಯಬೇಕು. 1 ಕೋಟಿ ರೂ.ಗಿಂತ ಮಿಗಿಲಾದ ಯೋಜನೆಗಳಿಗೆ ಹಣಕಾಸು ಬಳಸುವ ಅಧಿಕಾರವೂ ಮೊಟಕು ಪ್ರಾಧಿಕಾರಗಳ ಕಾರ್ಯವೈಖರಿ ನಿಯಂತ್ರಣ, ತಪಾಸಣೆಯೂ ಆಯುಕ್ತಾಲಯದ ಅಧಿಕಾರ ವ್ಯಾಪ್ತಿಗೆ ಬಂದಿದ್ದು, ಗ್ರೂಪ್ 'ಬಿ', 'ಸಿ' ಮತ್ತು 'ಡಿ' ನೌಕರರ ಸಂಬಂಧಿಸಿದ ವಿಷಯಗಳನ್ನೂ ಪ್ರಾಧಿಕಾರ ನಿರ್ವಹಿಸುವಂತಿಲ್ಲ. ಎಲ್ಲಾ ಕಡತಗಳನ್ನೂ ಆಯುಕ್ತರ ಮೂಲಕ ಸರ್ಕಾರಕ್ಕೆ ಕಳುಹಿಸಬೇಕೆಂದು ಆದೇಶದಲ್ಲಿ ತಿಳಿಸಲಾಗಿದೆ. ಈ ಅಂಶಗಳನ್ನು ಗಮನಿಸಿದರೆ ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳು ಹೆಸರಿಗಷ್ಟೇ ಇರುತ್ತವೆ. ನಿರ್ಧಾರ, ಅನುಪಾಲನೆ, ಆಡಳಿತದ ಬಹುಪಾಲು ಜವಾಬ್ದಾರಿಯನ್ನು ಆಯುಕ್ತಾಲಯದ ಆಯುಕ್ತರಿಗೆ ವಹಿಸಲಾಗಿದೆ ಎಂಬುದಿಲ್ಲಿ ಗಮನಾರ್ಹ.

ಫೈಲ್ ರೆಡಿ ಮಾಡಿಸುತ್ತಿದ್ದರು!

ಬಂದಿದ್ದ ನಗರಾಭಿವೃದ್ಧಿ ಸಚಿವರ ಕಿವಿಯೂದಿ ಅವರನ್ನು ಎತ್ತಂಗಡಿ ಮಾಡಿಸಲಾಗಿದೆ ಎಂಬ ಆರೋಪಗಳು ವ್ಯಾಪಕವಾಗಿ ಕೇಳಿಬರುತ್ತಿವೆ. ಪ್ರತಿಯೊಂದು ಫೈಲ್‌ಗೂ ಸಚಿವರು ಹೇಳಿದ್ದಾರೆ ಎಂದು ಅಧಿಕಾರಿಗಳ ಬೆನ್ನತ್ತಿ ಫೈಲ್ ತರಿಸಿಕೊಂಡು ತಮ್ಮ ಎದುರೇ ಅಭಿಪ್ರಾಯ ಪೂರಕ ಅಭಿಪ್ರಾಯಗಳನ್ನು ಬರೆಸುತ್ತಿದ್ದರು. ಮೇಲಾಧಿಕಾರಿಗಳ ಮಾತು ಕೇಳದಿದ್ದರೆ ಮುಂದೆ ಏನೇನು ತೊಂದರೆ ಕೊಡುತ್ತಾರೋ ಎಂಬ ಭಯದಿಂದ ಕೆಲವರು ಅವರು ಹೇಳಿದಂತೆ ಫೈಲ್ ಸಿದ್ಧಪಡಿಸಿದ್ದಾರೆ. ಕೆಲ ಧೈರ್ಯ ಮಾಡಿ 'ನೀವು ಲಿಖಿತ ಆದೇಶ ಮಾಡಿದರೆ ಮಾತ್ರ ಕ್ರಮ ವಹಿಸುತ್ತೇನೆ' ಎಂದು ಖಡಕ್ಕಾಗಿ ಹೇಳಿರುವುದೂ ಉಂಟು. ಒಟ್ಟಾರೆ ಮಧ್ಯವರ್ತಿ ಗಳ ಸಿಂಡಿಕೇಟ್ ಮಾಡಿಕೊಂಡು ಸರ್ಕಾರದ ಕಾನೂನು–ಕಾಯ್ದೆಯನ್ನೂ ಧಿಕ್ಕರಿಸಿ ಆಯಕಟ್ಟಿನ ಬಡಾವಣೆಗಳ ಬೆಲೆ ಬಾಳುವ ನಿವೇಶನಗಳನ್ನು ಹಂಚಿಕೆ ಮಾಡುವ ಮೂಲಕ ರಾಜ–ಮಹಾರಾಜರು ಕಟ್ಟಿದ ಮಹಾ ಸಂಸ್ಥೆಯನ್ನು ಆರ್ಥಿಕವಾಗಿ ದಿವಾಳಿ ಸ್ಥಿತಿಗೆ ದೂಡಿದ್ದಾರೆ.

ಇಡಿ ವಶಕ್ಕೆ ಸಾಧ್ಯತೆ

ದಾಳಿ ಸಂದರ್ಭದಲ್ಲೇ ನಾಗೇಂದ್ರ ಹಾಗೂ ದದ್ದಲ್ ಅವರನ್ನು ವಿಚಾರಣೆಗೆ ಒಳಪಡಿಸಲಾಗಿತ್ತು. ನಿನ್ನೆಯಷ್ಟೇ ಎಸ್‌ಐಟಿ ತಂಡ ಈ ಇಬ್ಬರು ಶಾಸಕರನ್ನು ಇಡೀ ದಿನ ವಿಚಾರಣೆ ನಡೆಸಿ ಬಿಡುಗಡೆ ಮಾಡಿತ್ತು. ಇದರ ಬೆನ್ನಲ್ಲೇ ಇಡಿ ಇಂದು ದಾಳಿ ನಡೆಸಿ ಮಹತ್ತರ ದಾಖಲೆಗಳನ್ನು ವಶಪಡಿಸಿಕೊಂಡಿರುವುದಲ್ಲದೆ, ಯಾವುದೇ ಸಂದರ್ಭದಲ್ಲಿ ಇವರನ್ನು ವಶಕ್ಕೆ ಪಡೆಯಲಿದೆ. ಬಳ್ಳಾರಿಯ ನೆಹರು ಕಾಲೋನಿಯಲ್ಲಿರುವ ನಾಗೇಂದ್ರ ಅವರ ನಿವಾಸ, ಬೆಂಗಳೂರಿನ ಡಾಲರ್ಸ್ ಕಾಲೋನಿಯಲ್ಲಿನ ಅವರ ಅಪಾರ್ಟ್‌ಮೆಂಟ್, ದದ್ದಲ್ ವಾಸಿಸುವ ನಗರದ ಯಲಹಂಕ ಮತ್ತು ಕೋರಮಂಗಲ ಮನೆ ಸೇರಿದಂತೆ 18 ಕಡೆ ಇಡಿ ದಾಳಿ ನಡೆಸಿತು. ಇದಲ್ಲದೆ, ನಿಗಮದ ಎಂಡಿ ಜೆ.ಜೆ.ಪದ್ಮನಾಭ್, ಲೆಕ್ಕ ಪರಿಶೋಧಕ ಪರಶುರಾಮ್, ನಾಗೇಂದ್ರ ಆಪ್ತ ನೆಕ್ಕಂಟಿ ನಾಗರಾಜ್, ಸತ್ಯನಾರಾಯಣ ವರ್ಮ ಅವರ ಮನೆ, ಕಚೇರಿಗಳ ಮೇಲೂ ದಾಳಿ ನಡೆದಿದೆ. ನಿಗಮದಲ್ಲಿ 187 ಕೋಟಿ ರೂ. ಅವ್ಯವಹಾರ ನಡೆದಿದೆ ಎಂದು ನಗರದ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಸಿಬಿಐಗೆ ದೂರು ದಾಖಲಿಸಿತ್ತು. ಬ್ಯಾಂಕ್ ಆಡಳಿತ ಮಂಡಳಿ ಪ್ರಕರಣವನ್ನು ಸಿಬಿಐಗೆ ವಹಿಸುತ್ತಿದ್ದಂತೆ ಎಚ್ಚೆತ್ತ ರಾಜ್ಯ ಸರ್ಕಾರ ಹಗರಣದ ತನಿಖೆಗೆ ಎಸ್‌ಐಟಿ ರಚನೆ ಮಾಡಿತ್ತು.

ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ಪ್ರಾಥಮಿಕ ಮಾಹಿತಿ ಸಂಗ್ರಹಿಸಿ, ಭಾರೀ ಪ್ರಮಾಣದಲ್ಲಿ ಹಣಕಾಸು ವಹಿವಾಟು ನಡೆದಿರುವುದರಿಂದ ಇದರ ತನಿಖೆಯನ್ನು ಇಡಿಗೆ ವಹಿಸಿತ್ತು. ನಾಗೇಂದ್ರ ಕಳೆದ ತಿಂಗಳಷ್ಟೇ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ ನಂತರ ಪ್ರಕರಣಕ್ಕೆ ಸಂಬಂಧಿಸಿದ ಪೂರಕ ದಾಖಲೆ ಸಂಗ್ರಹಿಸಿದ ಇಡಿ ಇಂದು ಮನೆ ಮತ್ತು ಕಚೇರಿಗಳ ಮೇಲೆ ದಾಳಿ ನಡೆಸಿ ಒಬ್ಬರನ್ನು ವಶಕ್ಕೆ ಪಡೆದಿದ್ದು, ಉಳಿದವರ ಬಂಧನಕ್ಕೆ ಕ್ಷಣಗಣನೆ ಆರಂಭವಾಗಿದೆ

ಇದು ಯುದ್ಧದ ಸಮಯವಲ್ಲ, ಅಮಾಯಕರ ಹತ್ಯೆ ಒಪ್ಪಿಕೊಳ್ಳಲು ಸಾಧ್ಯವಿಲ್ಲ: ಮೋದಿ



ವಿಯೆನ್ನಾ, ಜು.10– ಆಸ್ಟ್ರಿಯಾದ ಚಾನ್ಸೆಲರ್ ಕಾರ್ಲ್ ನೆಹಮ್ಮರ್ ಅವರೊಂದಿಗೆ ಉಕ್ರೇನ್ ಸಂಘರ್ಷ ಮತ್ತು ಪಶ್ಚಿಮ ಏಷ್ಯಾದ ಪರಿಸ್ಥಿತಿ ಸೇರಿದಂತೆ ಜಗತ್ತಿನ ಇತರ ಸಂಘರ್ಷಗಳ ಕುರಿತು ವಿವರವಾದ ಫಲಪ್ರದ ಚರ್ಚೆ ನಡೆಸಿರುವುದಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ಹೇಳಿದ್ದಾರೆ.

ಎರಡು ದಿನಗಳ ಭೇಟಿಗಾಗಿ ಮಂಗಳವಾರ ರಾತ್ರಿ ರಷ್ಯಾಗೆ ಆಗಮಿಸಿರುವ ಪ್ರಧಾನಿ ಮೋದಿ, ಭಾರತ ಮತ್ತು ಆಸ್ಟ್ರಿಯಾ ಪರಸ್ಪರ ಸಹಕಾರವನ್ನು ಮತ್ತಷ್ಟು ಬಲಪಡಿಸಲು ಹೊಸ ಸಾಧ್ಯತೆಗಳನ್ನು ಗುರುತಿಸಿವೆ ಮತ್ತು ಮುಂಬರುವ ದಶಕದ ಸಹಕಾರಕ್ಕಾಗಿ ಒಂದು ನೀಲನಕ್ಷೆ ಸಿದ್ಧವಾಗಿದೆ ಎಂದು ತಿಳಿಸಿದ್ದಾರೆ.

ಇಂದು, ಚಾನ್ಸೆಲರ್ ನೆಹಮ್ಮರ್ ಮತ್ತು ನಾನು ಫಲಪ್ರದವಾದ ಚರ್ಚೆ ನಡೆಸಿದ್ದೇವೆ. ನಮ್ಮ ಪರಸ್ಪರ ಸಹಕಾರವನ್ನು ಮತ್ತಷ್ಟು ಬಲಪಡಿಸಲು ನಾವು ಹೊಸ ಸಾಧ್ಯತೆಗಳನ್ನು ಗುರುತಿಸಿದ್ದೇವೆ. ನಮ್ಮ ಸಂಬಂಧಕ್ಕೆ ಕಾರ್ಯತಂತ್ರದ ನಿರ್ದೇಶನವನ್ನು ನೀಡಲು ನಾವು ನಿರ್ಧರಿಸಿದ್ದೇವೆ. ಮುಂಬರುವ ದಶಕದ ಸಹಕಾರಕ್ಕಾಗಿ ನೀಲನಕ್ಷೆಯನ್ನು ಸಿದ್ಧಪಡಿಸಲಾಗಿದೆ ಎಂದು ಪ್ರಧಾನಿ ಮೋದಿ ಅವರು ಚಾನ್ಸೆಲರ್ ನೆಹಮ್ಮರ್ ಅವರ ಮಾತುಕತೆಯ ನಂತರ ಜಂಟಿ ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ.

ಚಾನ್ಸೆಲರ್ ನೆಹಮ್ಮರ್ ಮತ್ತು ನಾನು ಪ್ರಪಂಚದಾದ್ಯಂತ ನಡೆಯುತ್ತಿರುವ ಸಂಘರ್ಷಗಳ ಬಗ್ಗೆ ಸುದೀರ್ಘವಾಗಿ ಮಾತನಾಡಿದ್ದೇವೆ. ಅದು ಉಕ್ರೇನ್ ಸಂಘರ್ಷ ಅಥವಾ ಪಶ್ಚಿಮ ಏಷ್ಯಾದ ಪರಿಸ್ಥಿತಿಯಾಗಿರಬಹುದು. ಇದು ಯುದ್ಧದ ಸಮಯವಲ್ಲ ಎಂದು ನಾನು ಮೊದಲೇ ಹೇಳಿದ್ದೇನೆ ಎಂದು ಪ್ರಧಾನಿ ಮೋದಿ ತಿಳಿಸಿದರು.

ಸಮಸ್ಯೆಗಳಿಗೆ ಯುದ್ಧಭೂಮಿಯಲ್ಲಿ ಪರಿಹಾರ ಕಂಡುಕೊಳ್ಳಲು ಸಾಧ್ಯವಿಲ್ಲ ಎಂದು ಪ್ರತಿಪಾದಿಸಿದ ಮೋದಿ, ಭಾರತ ಮತ್ತು ಆಸ್ಟ್ರಿಯಾ ಮಾತುಕತೆ ಮತ್ತು ರಾಜತಾಂತ್ರಿಕತೆಗೆ ಒತ್ತು ನೀಡುತ್ತವೆ ಮತ್ತು ಅದಕ್ಕಾಗಿ ಅಗತ್ಯವಿರುವ ಯಾವುದೇ ಬೆಂಬಲವನ್ನು ನೀಡಲು ಸಿದ್ಧ ಎಂದು ಹೇಳಿದರು.

ಭಾರತ ಮತ್ತು ಆಸ್ಟ್ರಿಯಾ ಎರಡೂ ಭಯೋತ್ಪಾದನೆಯನ್ನು ಬಲವಾಗಿ ಖಂಡಿಸುತ್ತವೆ ಮತ್ತು ಎಲ್ಲೇ ಆದರೂ ಅಮಾಯಕರ ಹತ್ಯೆಯನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಭಾರತ ಮತ್ತು ಆಸ್ಟ್ರಿಯಾ ಮಾತುಕತೆ ಮತ್ತು ರಾಜತಾಂತ್ರಿಕತೆಗೆ ಒತ್ತು ನೀಡುತ್ತವೆ ಮತ್ತು ಅದಕ್ಕಾಗಿ ಅಗತ್ಯವಿರುವ ಯಾವುದೇ ಬೆಂಬಲವನ್ನು ನೀಡಲು ನಾವು ಒಟ್ಟಿಗೆ ಸಿದ್ಧರಿದ್ದೇವೆ ಎಂದು ಪ್ರಧಾನಿ ಮೋದಿ ಹೇಳಿದರು.

ಜೆಎಲ್‌ಬಿ ರಸ್ತೆಯ ಜಾವಗಲ್ ಶ್ರೀನಾಥ್ ವೃತ್ತದಲ್ಲಿ 'ಬಲಿಗಾಗಿ ಕಾಯುತ್ತಿದೆ ದಿಂಡುಗಲ್ಲು'

ರಾತ್ರಿ ವೇಳೆ ಕಲ್ಲು ಬಡಿದು ಬಿದ್ದಿರುವ ದ್ವಿಚಕ್ರ ವಾಹನ ಸವಾರರು



ಮೈಸೂರಿನ ಜೆಎಲ್‌ಬಿ ರಸ್ತೆಯ ಜಾವಗಲ್ ಶ್ರೀನಾಥ್ ವೃತ್ತದಲ್ಲಿ ರಸ್ತೆ ಮಧ್ಯೆ ಗುಂಡಿಯಲ್ಲಿಟ್ಟಿರುವ ದಿಂಡುಗಲ್ಲು ಅನಾಹುತಕ್ಕೆ ಆಹ್ವಾನ ನೀಡಿದಂತಿದೆ.

ಮೈಸೂರು,ಜು.10(ಎಂಟಿವೈ)– ಮೈಸೂರಿನ ಪ್ರಮುಖ ರಸ್ತೆಗಳಲ್ಲಿ ಒಂದಾಗಿರುವ ಜೆಎಲ್‌ಬಿ ರಸ್ತೆಯ ಇನ್ಸ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ ಸಮೀಪದ ಜಾವಗಲ್ ಶ್ರೀನಾಥ್ ವೃತ್ತದ ಮಧ್ಯಭಾಗದಲ್ಲಿ ವಾಹನ ಸವಾರರಿಗೆ 'ದಿಂಡುಗಲ್ಲು' ಅಪಾಯಕ್ಕೆ ಎಡೆ ಮಾಡಿಕೊಡುತ್ತಿದ್ದು, ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಕನ್ನಡಿ ಹಿಡಿದಂತಿದೆ.

ಮೈಸೂರಿಗೆ ಬರುವ ಗಣ್ಯರು, ನ್ಯಾಯಾಧೀಶರು ಸಂಚರಿಸುವ ಪ್ರಮುಖ ರಸ್ತೆಯೂ ಆಗಿರುವ ಜೆಎಲ್‌ಬಿ ರಸ್ತೆಯಲ್ಲಿರುವ ಜಾವಗಲ್ ಶ್ರೀನಾಥ್ ವೃತ್ತದ ಮಧ್ಯ ಭಾಗದಲ್ಲಿ ಕೆಲ ತಿಂಗಳ ಹಿಂದೆ ಪೈಪ್‌ಲೈನ್ ದುರಸ್ತಿಗಾಗಿ ಹಳ್ಳವೊಂದನ್ನು ತೆಗೆಯಲಾಗಿತ್ತು. ಕೆಲ ದಿನದ ನಂತರ ಹಳ್ಳ ಮುಚ್ಚಿ ಡಾಂಬರ್ ಹಾಕಲಾಗಿತ್ತು. ಆದರೆ, ಆ ಜಾಗದಲ್ಲಿ ಹಳ್ಳವೊಂದು ನಿರ್ಮಾಣವಾಗಿದ್ದು, ದ್ವಿಚಕ್ರ ವಾಹನ, ತ್ರಿಚಕ್ರ ಹಾಗೂ ಲಘು ವಾಹನಗಳ ಸುಗಮ ಸಂಚಾರಕ್ಕೆ ಅಡಚಣೆಯಾಗುತ್ತಿದೆ. ರೈಲ್ವೆ ನಿಲ್ದಾಣದ ಕಡೆಯಿಂದ ರಾಮಸ್ವಾಮಿ ವೃತ್ತದ ಕಡೆಗೆ ವೇಗವಾಗಿ ಬರುವ ವಾಹನಗಳ ಚಾಲಕರು ರಸ್ತೆಯಲ್ಲಿರುವ ಹಳ್ಳವನ್ನು ಗಮನಿಸದೆ ಅಪಘಾತ ಸಂಭವಿಸುತ್ತಿದೆ. ಈ ಹಿನ್ನೆಲೆಯಲ್ಲಿ ವಾಹನ ಸವಾರರ ಗಮನ ಸೆಳೆಯುವ ನಿಟ್ಟಿನಲ್ಲಿ ರಸ್ತೆಯಲ್ಲಿದ್ದ ಹಳ್ಳಕ್ಕೆ ದಿಂಡುಗಲ್ಲೊಂದನ್ನು ಇಡಲಾಗಿದೆ. ಇದು ಇನ್ನಷ್ಟು ಅಪಾಯಕಾರಿಯಾಗಿದ್ದು, ರಸ್ತೆಯ ಗುಂಡಿಯೊಂದಿಗೆ ದಿಂಡುಗಲ್ಲು ದ್ವಿಚಕ್ರ ವಾಹನ ಸವಾರರನ್ನು ನೆಲಕ್ಕುರುಳಿಸುತ್ತಿದೆ. ಪ್ರಾಣಹಾನಿ ಸಂಭವಿಸುವ ಮುನ್ನ ರಸ್ತೆಯಲ್ಲಿನ ಗುಂಡಿ ಮುಚ್ಚಿ ಪ್ರಾಣಕ್ಕೆ ಸಂಚಕಾರವನ್ನುಂಟು ಮಾಡುವ ದಿಂಡುಗಲ್ಲನ್ನು ಸ್ಥಳಾಂತರ ಮಾಡುವಂತೆ ಸಾರ್ವಜನಿಕರು ಆಗ್ರಹಿಸಿದ್ದಾರೆ. ಅಲ್ಲದೆ, ಗುಂಡಿಗಳಿರುವಿಕೆ ಗಮನ ಸೆಳೆಯಲು ದಪ್ಪಕಲ್ಲುಗಳನ್ನಿಡುವುದು ರಾತ್ರಿ ವೇಳೆ ಅಪಾಯಕ್ಕೆ ಆಹ್ವಾನ ನೀಡಿದಂತಾಗುತ್ತದೆ ಎಂದು ಕಿಡಿಕಾರಿದ್ದಾರೆ.

ದೀಪಾಲಂಕಾರಕ್ಕಾಗಿ ಬೀದಿದೀಪಗಳಿಂದ ಸಂಪರ್ಕ ಪಡೆದರೆ ಕಾನೂನು ಕ್ರಮ

ಮೈಸೂರು ನಗರಪಾಲಿಕೆ ಎಚ್ಚರಿಕೆ

ಮೈಸೂರು, ಜು.10–ಸಂಘ–ಸಂಸ್ಥೆಗಳು, ಸಾರ್ವಜನಿಕರು ವಿದ್ಯುತ್ ದೀಪಾಲಂಕಾರಕ್ಕಾಗಿ ಬೀದಿದೀಪಗಳ ವಿದ್ಯುತ್ ಮಾರ್ಗ ಅಥವಾ ಮಾಪಕಗಳಿಗೆ ಸಂಪರ್ಕ ನೀಡಿದರೆ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಮೈಸೂರು ನಗರಪಾಲಿಕೆ ವಿದ್ಯುತ್ ವಿಭಾಗದ ಕಾರ್ಯಪಾಲಕ ಅಭಿಯಂತರರು ಎಚ್ಚರಿಕೆ ನೀಡಿದ್ದಾರೆ. ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು ಸಂಘ–ಸಂಸ್ಥೆಗಳು, ಸಾರ್ವಜನಿಕರು ವಿದ್ಯುತ್ ದೀಪಾಲಂಕಾರ ಅಥವಾ ಷೋಕಾಸ್ ವಿದ್ಯುತ್ ದೀಪಗಳನ್ನು ಅಳವಡಿಸಬೇಕಿದ್ದಲ್ಲಿ ಸೆಸ್ಕಾಂನಿಂದ ಪ್ರತ್ಯೇಕವಾಗಿ ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆದು, ಎಲ್ಲಾ ರೀತಿಯ ಸುರಕ್ಷತಾ ಕ್ರಮಗಳನ್ನು ಅನುಸರಿಸಿ ತಮ್ಮದೇ ಪೂರ್ಣ ಹೊಣೆಗಾರಿಕೆ ಮೇಲೆ ನಿರ್ವಹಿಸತಕ್ಕದ್ದು. ಅದನ್ನು ಹೊರತುಪಡಿಸಿ, ಸಾರ್ವಜನಿಕ ವಿದ್ಯುತ್ ದೀಪಗಳಿಗೆ ಧಕ್ಕೆ ಉಂಟು ಮಾಡಿದ್ದಲ್ಲಿ ಅದು ಭಾರತೀಯ ವಿದ್ಯುತ್ ಕಾಯ್ದೆಯ–2023ರ ಸೆಕ್ಷನ್ 141ರನ್ವಯ ಶಿಕ್ಷಾರ್ಹ ಅಪರಾಧವಾಗಿರುತ್ತದೆ ಎಂದು ತಿಳಿಸಿದ್ದಾರೆ.

'ಗಿಡ ನೆಡಿ ಪರಿಸರ ಉಳಿಸಿ' ಕಾರ್ಯಕ್ರಮ



ರೋಟರಿ ಮೈಸೂರು ಉತ್ತರ ಮತ್ತು ಇನ್ನರ್‌ವೀಲ್ ಉತ್ತರ ಆಯೋಜಿಸಿದ್ದ 'ಗಿಡ ನೆಡಿ ಪರಿಸರ ಉಳಿಸಿ' ಕಾರ್ಯಕ್ರಮವನ್ನು ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ಉದ್ಘಾಟಿಸಿದರು. ರೋಟರಿ ಉತ್ತರ ಅಧ್ಯಕ್ಷ ಪಿ.ಪ್ರಭಾಕರ್, ಇನ್ನರ್‌ವ್ಹೀಲ್ ಅಧ್ಯಕ್ಷೆ ವಿಮಲಾ ಮೂರ್ತಿ, ರಾಜೇಶ್ವರಿಗೌಡ, ಯಶಸ್ವಿ ಸೋಮಶೇಖರ್ ಮತ್ತಿತರರು ಉಪಸ್ಥಿತರಿದ್ದರು.

ಗ್ಯಾರಂಟಿಗೆ ಪರಿಶಿಷ್ಟರ ಹಣ ಬಳಕೆ: ರಾಜ್ಯ ಸರ್ಕಾರದಿಂದ ವರದಿ ಕೇಳಿದ ಪರಿಶಿಷ್ಟ ಜಾತಿಗಳ ರಾಷ್ಟ್ರೀಯ ಆಯೋಗ

ಬೆಂಗಳೂರು, ಜು.10– ಗ್ಯಾರಂಟಿ ಯೋಜನೆಗಳಿಗೆ ಪರಿಶಿಷ್ಟ ಜಾತಿ ಉಪ ಯೋಜನೆ ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆಗೆಂದು ಬಜೆಟ್‌ನಲ್ಲಿ ಮೀಸಲಿಟ್ಟ ಹಣ ಬಳಕೆ ವಿಚಾರವಾಗಿ ಪರಿಶಿಷ್ಟ ಜಾತಿಗಳ ರಾಷ್ಟ್ರೀಯ ಆಯೋಗ ಮಧ್ಯಪ್ರವೇಶ ಮಾಡಿದೆ.

ರಾಷ್ಟ್ರೀಯ ಪರಿಶಿಷ್ಟ ಜಾತಿಗಳ ರಾಷ್ಟ್ರೀಯ ಆಯೋಗ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದು ವಿವರಣೆ ಕೇಳಿದೆ. 7 ದಿನಗಳ ಒಳಗಾಗಿ ಸಂಪೂರ್ಣ ವರದಿ ನೀಡುವಂತೆ ಪತ್ರದಲ್ಲಿ ಸೂಚನೆ ನೀಡಲಾಗಿದೆ. ಕರ್ನಾಟಕ ಸರ್ಕಾರ ಐದು ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಗೊಳಿಸಲು ಕರ್ನಾಟಕ ಪರಿಶಿಷ್ಟ ಜಾತಿ ಉಪ ಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಅಡಿಯಲ್ಲಿ ನಿಗದಿಪಡಿಸಿದ ಹಣವನ್ನು ಬಳಸಿಕೊಳ್ಳಲು ನಿರ್ಧರಿಸಿದೆ ಎಂಬ ಮಾಹಿತಿ ಇದೆ. ಕರ್ನಾಟಕ ಸರ್ಕಾರವು ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಹಂಚಿಕೆಯಿಂದ ಗ್ಯಾರಂಟಿ ಯೋಜನೆಗಳಿಗೆ 14,730.53 ಕೋಟಿ ರೂ ಬಳಸಿಕೊಳ್ಳಲು ತೀರ್ಮಾನ ತೆಗೆದುಕೊಂಡಿದೆ.

ರಾಜ್ಯಗಳಲ್ಲಿನ ಪರಿಶಿಷ್ಟ ಜಾತಿಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ವಿಶೇಷ ಘಟಕ ಯೋಜನೆ (ಎಸ್‌ಸಿಪಿ) ಮತ್ತು ವಿಶೇಷ ಕೇಂದ್ರ ಸಹಾಯ (ಎಸ್‌ಸಿಎ)ವೂ ಇದೆ. ಹಾಗಾಗಿ ಭಾರತ ಸಂವಿಧಾನದ 338 ನೇ ವಿಧಿಯ ಅಡಿಯಲ್ಲಿ ನೀಡಲಾದ ಅಧಿಕಾರ ವನ್ನು ಕಡ್ಡಾಯವಾಗಿ ಅನುಸರಿಸಲು ಆಯೋಗ ಬದ್ಧವಾಗಿದೆ. ದಯವಿಟ್ಟು ಈ ವಿಷಯದ ಬಗ್ಗೆ ವಿವರವಾದ ವರದಿಯನ್ನ 7 ದಿನಗಳೊಳಗೆ ಆಯೋಗಕ್ಕೆ ಒದಗಿಸಬೇಕೆಂದು ಪತ್ರ ಬರೆದಿದೆ. ಅಲ್ಲದೇ ಇದನ್ನು ಅತ್ಯಂತ ತುರ್ತು ಎಂದು ಪರಿಗಣಿಸ ಬೇಕೆಂದು ಆಯೋಗ ತನ್ನ ಪತ್ರದಲ್ಲಿ ಉಲ್ಲೇಖಿಸಿದೆ.

ರಾಜ್ಯಾದ್ಯಂತ ಡೆಂಗ್ಯೂ ಉಲ್ಬಣ: ಸ್ವಯಂಪ್ರೇರಿತ ಕೇಸ್ ದಾಖಲಿಸಿಕೊಂಡ ಹೈಕೋರ್ಟ್



ಬೆಂಗಳೂರು, ಜು.10– ಆಂಗ್ಲ ದೈನಿಕವೊಂದರ ಓದುಗರೊಬ್ಬರು ಅದರ ಸಂಪಾದಕರಿಗೆ ಬರೆದ ಪತ್ರ ಹಾಗೂ ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾದ ಡೆಂಗ್ಯೂ ಜ್ವರದ ವರದಿಗಳ ಆಧಾರದ ಮೇಲೆ ರಾಜ್ಯಾದ್ಯಂತ ಡೆಂಗ್ಯೂ ಹರಡುತ್ತಿರುವ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿರುವ ಹೈಕೋರ್ಟ್, ಸ್ವಯಂಪ್ರೇರಿತವಾಗಿ ಬುಧವಾರ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಕೈಗೆತ್ತಿಕೊಂಡಿದೆ.

ಜುಲೈ 9 ರಂದು ಆಂಗ್ಲ ದೈನಿಕವೊಂದರಲ್ಲಿ ಪ್ರಕಟವಾದ ರಾಯಚೂರಿನ ವಿಜಯಕುಮಾರ್ ಎಂಬವರು ಬರೆದಿರುವ ಪತ್ರವನ್ನು ಪರಿಗಣಿಸಿದ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಮತ್ತು ನ್ಯಾಯಮೂರ್ತಿ ಕೆ.ವಿ.ಅರವಿಂದ್ ಅವರನ್ನೊಳಗೊಂಡ ವಿಭಾಗೀಯ ಪೀಠ, ಡೆಂಗ್ಯೂ ತಡೆಗಟ್ಟುವ ಮತ್ತು ಪರಿಹಾರ ಕ್ರಮಗಳ ವಿವರಗಳನ್ನು ಒದಗಿಸುವಂತೆ ರಾಜ್ಯ ಸರ್ಕಾರಕ್ಕೆ ಸೂಚಿಸಿದೆ. ಜ್ವರ ವೇಗವಾಗಿ ಹರಡುತ್ತಿರುವುದಕ್ಕೆ ಕೂಡಲೇ ಪರೀಕ್ಷೆ ನಡೆಸುವಂತೆ ಸೂಚಿಸಿದೆ. ಪ್ರಮುಖ ನಗರಗಳಿಂದ ಗ್ರಾಮೀಣ ಪ್ರದೇಶಗಳಿಗೆ ರೋಗಿಗಳಿಗೆ ಚಿಕಿತ್ಸೆ ನೀಡಲು ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಲು ತೆಗೆದುಕೊಂಡ ಕ್ರಮಗಳ ವಿವರಗಳನ್ನು ಸಲ್ಲಿಸುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದ ನ್ಯಾಯಾಲಯ, ತುರ್ತುಪರಿಸ್ಥಿತಿಯಲ್ಲಿ ಚಿಕಿತ್ಸೆ ನೀಡಲು ಲಭ್ಯವಿರುವ ವೈದ್ಯಕೀಯ ಮೂಲಸೌಕರ್ಯಗಳ ವಿವರಗಳನ್ನು ಒದಗಿಸುವಂತೆ ಸಹ ಕೇಳಿದೆ. ಸಂಪಾದಕರಿಗೆ ಬರೆದ ಪತ್ರವು ಡೆಂಗ್ಯೂ ಹರಡುವಿಕೆ ಮತ್ತು ಇತರ ಸಂಬಂಧಿತ ವಿಷಯಗಳಲ್ಲಿ ಸಮಾಜದ ನಾಡಿಮಿಡಿತವನ್ನು ಪ್ರತಿಬಿಂಬಿಸುತ್ತದೆ ಎಂದು ನ್ಯಾಯಾಲಯವು ತನ್ನ ಆದೇಶದಲ್ಲಿ ಡೆಂಗ್ಯೂ ಹರಡುವಿಕೆಯ ಬಗ್ಗೆ ನಾಡಿನ ವಿವಿಧ ಪತ್ರಿಕೆಗಳ ವರದಿಗಳನ್ನು ಉಲ್ಲೇಖಿಸಿದೆ

ಚಾಮುಂಡಿಬೆಟ್ಟದ ಮೆಟ್ಟಿಲು ಸ್ವಚ್ಛಗೊಳಿಸುವ ಕಾರ್ಯಕ್ಕೆ ಚಾಲನೆ

● ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ● ಈಗ ಸ್ವಚ್ಛತೆ ಅರಿವು ಅನಿವಾರ್ಯ: ಬನ್ನೂರು ರಾಜು ಅಭಿಮತ

ಮೈಸೂರು, ಜು.10(ಎಂಟಿವೈ)– ಜನರಿಗೆ ಆರೋಗ್ಯ ಭಾಗ್ಯ ಮಹತ್ವದ್ದಾಗಿದ್ದು, ಸುತ್ತಲಿನ ಪರಿಸರ ಸ್ವಚ್ಛವಾಗಿಟ್ಟುಕೊಂಡು ಆರೋಗ್ಯಲಕ್ಷ್ಮಿ ಸದಾ ನೆಲೆಸುವಂತಹ ವಾತಾವರಣ ಸೃಷ್ಟಿಸಿಕೊಳ್ಳುವಂತೆ ಸಾಹಿತಿ ಬನ್ನೂರು ಕೆ.ರಾಜು ಸಲಹೆ ನೀಡಿದ್ದಾರೆ.

ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಭಾರತ ರತ್ನ ಸರ್ ಎಂ.ವಿಶ್ವೇಶ್ವರಯ್ಯ ನಲ್ಲಿ ಮತ್ತು ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘವು ಆಷಾಢ ಮಾಸದ ಅಂಗವಾಗಿ ಬುಧವಾರ ಮುಂಜಾನೆ ಆಯೋಜಿಸಿದ್ದ ಬೆಟ್ಟದ ಮೆಟ್ಟಿಲುಗಳ ಸ್ವಚ್ಛತೆ ಮತ್ತು ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಾವು ಆರೋಗ್ಯವಂತರಾಗಿ ಜೀವನ ನಡೆಸಬೇಕಾದರೆ ನಮ್ಮ ಪರಿಸರ, ಸೇವಿಸುವ ಆಹಾರ, ಕುಡಿಯುವ ನೀರು, ಉಸಿರಾಡುವ ಗಾಳಿ ಹಾಗೂ ನಡೆದಾಡುವ ನೆಲ ಪರಿಶುದ್ಧವಾಗಿರಬೇಕು. ಆದರೆ, ಇತ್ತೀಚಿನ ದಿನಗಳಲ್ಲಿ ಜನರ ಬೇಜವಾಬ್ದಾರಿ ಧೋರಣೆಯಿಂದ ಪರಿಸರ ಮಾಲಿನ್ಯ ಹೆಚ್ಚಾಗುತ್ತಿದೆ. ಈ ಹಿನ್ನೆಲೆಯಲ್ಲಿ ಪ್ರತಿಯೊಬ್ಬರಲ್ಲೂ ಸ್ವಚ್ಛತೆಯ ಅರಿವು ಮತ್ತು ಪರಿಸರ ಪ್ರಜ್ಞೆ ಮೂಡಬೇಕು. ಆಗ ಮಾತ್ರ ನಮ್ಮ ಸುತ್ತಮುತ್ತಲಿನ ಪರಿಸರ ಸಂರಕ್ಷಣೆ ಸಾಧ್ಯ ಎಂದು ಅಭಿಪ್ರಾಯಪಟ್ಟರು.

ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರಿಂದ ರಾಜರ್ಷಿಯೆಂದು ಕರೆಸಿಕೊಂಡ ನಾಲ್ವಡಿ ಕೃಷ್ಣರಾಜ ಒಡೆಯರು ಸ್ವಚ್ಛ ಪರಿಸರಕ್ಕೆ ಆದ್ಯತೆ ನೀಡಿದ್ದರು. ಇದು ಇವತ್ತಿಗೂ ನಮ್ಮನ್ನು ಆಳುವವರಿಗೆ ಆದರ್ಶವಾಗಬೇಕು. ಸ್ವಚ್ಛತೆ ಎಂದರೆ ಕೇವಲ ಕಸ ಗುಡಿಸಿ, ತೆಗೆಯುವುದಷ್ಟೇ ಅಲ್ಲ. ಜಲಮಾಲಿನ್ಯ, ಭೂ ಮಾಲಿನ್ಯ, ವಾಯುಮಾಲಿನ್ಯ, ಹಾಗೂ ಶಬ್ದಮಾಲಿನ್ಯ ಸೇರಿದಂತೆ ಪ್ರತಿಯೊಂದು ಮಾಲಿನ್ಯವನ್ನೂ ತೊಡೆದು ಹಾಕುವುದರ ಜೊತೆಗೆ ಬಹು ಮುಖ್ಯವಾಗಿ ಮನುಷ್ಯರು ಮನೋಮಾಲಿನ್ಯದಿಂದ ತಮ್ಮನ್ನು ತಾವೇ ಶುದ್ಧೀಕರಿಸಿಕೊಳ್ಳಬೇಕು. ಇಂದು ರಾಜಕಾರಣ ಸೇರಿದಂತೆ ಪ್ರತಿಯೊಂದು ಸಾರ್ವಜನಿಕ ಕ್ಷೇತ್ರಗಳು ಕೂಡ ಬಹುಪಾಲು ಅಶುಚಿತ್ವದಿಂದ ಕೂಡಿ ರೋಗಗ್ರಸ್ಥವಾಗುತ್ತಿವೆ. ಆದ್ದರಿಂದ ಪ್ರತಿಯೊಬ್ಬ ವ್ಯಕ್ತಿಯೂ ಸ್ವಚ್ಛ ಪರಿಸರದ ಮಹತ್ವವನ್ನು ಅರಿತು ಮೊದಲು ತಮ್ಮನ್ನು ತಾವು ಶುದ್ಧೀಕರಿಸಿಕೊಂಡರೆ ಇಡೀ ಪರಿಸರ ಸ್ವಚ್ಛವಾಗುತ್ತದೆ ಎಂದರು.

ಇದಕ್ಕೂ ಮುನ್ನ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಭಾವಚಿತ್ರಕ್ಕೆ ಪದ್ಮಶ್ರೀ ಡಾ.ಖಾದರ್ ವಲ್ಲಿ ದುಡೇಕುಲ ಪುಷ್ಪಾರ್ಚನೆ ಮಾಡುವ ಮೂಲಕ ಬೆಟ್ಟದ ಮೆಟ್ಟಿಲುಗಳ ಸ್ವಚ್ಛತೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಮರ ಗಿಡಗಳಿಂದ ಉದುರಿದ ಎಲೆ, ಸೊಪ್ಪು, ಕಾಗದ, ಕಡ್ಡಿ, ಕಸವನ್ನು ಗುಡಿಸಿ ಹಾಕಿದರೆ ಸಾಲದು. ಇದೆಲ್ಲವೂ ಸ್ವಲ್ಪ ದಿನಗಳ ನಂತರ ಬಿಸಿಲಲ್ಲಿ ಒಣಗಿ, ಮಳೆಯಲ್ಲಿ ನೆನೆದು ಕೊಳೆತು ಮಣ್ಣಿನೊಂದಿಗೆ ಕರಗಿ ಹೋಗುತ್ತದೆ. ಆದರೆ ಕರಗದೆ ಜೀವ ಸಂಕುಲಕ್ಕೆ ಅಪಾಯಕಾರಿಯಾಗಿ ಉಳಿಯುವ ಪ್ಲಾಸ್ಟಿಕ್ ಮಾರಿಯನ್ನು ಮೊದಲು ತೊಡೆದುಹಾಕಬೇಕು. ಪ್ಲಾಸ್ಟಿಕ್‌ನಷ್ಟು ಹಾನಿಕಾರಕ ವಸ್ತು ಬೇರೊಂದಿಲ್ಲ. ಆಹಾರ ಪದಾರ್ಥಗಳಿಂದ ಹಿಡಿದು ಯಾವುದಕ್ಕೂ ಪ್ಲಾಸ್ಟಿಕ್ ಮಾರಿಯನ್ನು ಬಳಸಬಾರದು. ಪ್ಲಾಸ್ಟಿಕ್ ಮುಕ್ತ ಜಗತ್ತನ್ನು ಕಟ್ಟಲು ಪ್ರತಿಯೊಬ್ಬರೂ ಮುಂದಾಗಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಭಾರತ ರತ್ನ ಸರ್ ಎಂ.ವಿಶ್ವೇಶ್ವರಯ್ಯ ನಲ್ಲಿ ಮತ್ತು ಒಳ ಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎಸ್.ಮಹೇಶ್ ವಹಿಸಿದ್ದರು. ಇದೇ ಸಂದರ್ಭದಲ್ಲಿ ಪದ್ಮಶ್ರೀ ಡಾ.ಖಾದರ್ ವಲ್ಲಿ ದುಡೇಕುಲ ಮತ್ತು ಸಾಹಿತಿ ಬನ್ನೂರು ಕೆ. ರಾಜು ಅವರನ್ನು ಸನ್ಮಾನಿಸಲಾಯಿತು. ಸಂಘದ ನಿರ್ದೇಶಕ ಚಂದ್ರೇಗೌಡ ಪ್ರಾಸ್ತಾವಿಕ ವಾಗಿ ಮಾತನಾಡಿದರು. ಸಂಘದ ಉಪಾಧ್ಯಕ್ಷ ಎಂ.ಎಸ್.ಸುರೇಶ್ ಕುಮಾರ್, ಪ್ರಧಾನ ಕಾರ್ಯದರ್ಶಿ ಎಂ.ರವಿಕುಮಾರ್, ಖಜಾಂಚಿ ಎಂ.ಪ್ರಕಾಶ್, ನಿರ್ದೇಶಕರಾದ ರುದ್ರಸ್ವಾಮಿ, ಸಂತೋಷ್ ಕುಮಾರ್ ಬೆಹೆರಾ, ಮೊಹಮದ್ ಜಕೀರ್ ಹುಸೇನ್, ಶಿವರಾಜ್, ಯೋಗೇಶ್ ಹೆಬ್ಬಾಳು ಹಾಗೂ ಹಿರಿಯ ಸದಸ್ಯರಾದ ಬಸವರಾಜು, ಸಿದ್ದರಾಜು, ಕಾಳೇಗೌಡ, ಮುನಿರತ್ನ, ಮಹದೇವು, ಕೃಷ್ಣ ಹಾಗೂ ಛಾಯಾಗ್ರಾಹಕ ಅನಿಲ್ ಕುಮಾರ್ ಇನ್ನಿತರರು ಉಪಸ್ಥಿತರಿದ್ದರು.



ಆಷಾಢ ಮಾಸದ ಹಿನ್ನೆಲೆಯಲ್ಲಿ ಭಾರತ ರತ್ನ ಸರ್ ಎಂ.ವಿಶ್ವೇಶ್ವರಯ್ಯ ನಲ್ಲಿ ಮತ್ತು ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದ ಕಾರ್ಯಕರ್ತರು ಚಾಮುಂಡಿಬೆಟ್ಟ ಮೆಟ್ಟಿಲುಗಳ ಸ್ವಚ್ಛತಾ ಕಾರ್ಯ ನಡೆಸಿದರು.

ನೀವು ನಮ್ಮ ಜೊತೆ ಇರ್ತಿರೋ, ಸಂವಿಧಾನ ಬದಲಾವಣೆ ಮಾಡ್ತೀನಿ ಅಂದವರ ಜೊತೆ ಇರ್ತಿರೋ...!

ಅಂಬೇಡ್ಕರ್ ಜಯಂತ್ಯುತ್ಸವದಲ್ಲಿ ಸಿಎಂ ಸಿದ್ದರಾಮಯ್ಯ ಪ್ರಶ್ನೆ



ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯದ ಆವರಣದಲ್ಲಿ ಆಯೋಜಿಸಲಾಗಿದ್ದ ಡಾ.ಬಿ.ಆರ್.ಅಂಬೇಡ್ಕರ್ ಅವರ 133ನೇ ಜಯಂತ್ಯುತ್ಸವ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು.

ನಂಜನಗೂಡು, ಜು.10– ಸಮಾಜದಲ್ಲಿ ಇನ್ನೂ ಅಸಮಾನತೆ ದೂರವಾಗಿಲ್ಲ. ಈಗಲೂ ಮೇಲು–ಕೀಳು ಎಂಬ ಭಾವನೆ ಇದೆ. ಇದನ್ನು ದೇವರು ಮಾಡಿದ್ದಲ್ಲ. ಕೆಲವರು ತಮ್ಮ ಸ್ವಾರ್ಥ ಸಾಧನೆಗಾಗಿ ಚತುರ್ವರ್ಣ ಪದ್ಧತಿ ಜಾರಿಗೊಳಿಸಿ ಜಾತಿ ವ್ಯವಸ್ಥೆ ತಂದಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಶ್ರೀಕಂಠೇಶ್ವರ ದೇವಾಲಯದ ಆವರಣದಲ್ಲಿ ದಲಿತ ಸಂಘಟನೆಗಳ ಒಕ್ಕೂಟದ ವತಿಯಿಂದ ಆಯೋಜಿಸಲಾಗಿದ್ದ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 133ನೇ ಜಯಂತ್ಯುತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ದೀನ ದಲಿತರ ಪರವಾಗಿರುವ ನಮ್ಮ ಜೊತೆ ನೀವು ಇರ್ತಿರೋ ಅಥವಾ ಸಂವಿಧಾನ ಬದಲಾವಣೆ ಮಾಡುತ್ತೇವೆ ಎಂದವರ ಜೊತೆಗೆ ಇರ್ತಿರೋ ಹೇಳಿ ಎಂದು ಮಾರ್ಮಿಕವಾಗಿ ಪ್ರಶ್ನಿಸಿದರು.

ಎಲ್ಲರಿಗೂ ಸಾಮಾಜಿಕ, ಆರ್ಥಿಕ ಸ್ವಾತಂತ್ರ್ಯ ಸಿಕ್ಕಾಗ ಮಾತ್ರ ಸ್ವಾತಂತ್ರ್ಯ ಬಂದದಕ್ಕೆ ಸಾರ್ಥಕವಾಗುತ್ತದೆ ಎಂದು ಅಂಬೇಡ್ಕರ್ ಹೇಳಿದ್ದಾರೆ. ನಮಗೆ ಅಧಿಕಾರ ಸಿಕ್ಕಾಗ ಅಂಬೇಡ್ಕರ್ ಆಶಯದಂತೆ ನಡೆದಾಗ ಮಾತ್ರ ನಾವು ಅವರಿಗೆ ಗೌರವ ಸಲ್ಲಿಸಿದಂತಾಗುತ್ತದೆ ಎಂದರು. ಈ ಕಾರಣದಿಂದಲೇ ನಾನು 24.1ರಷ್ಟಿರುವ ಎಸ್ಸಿ, ಎಸ್ಟಿ ಸಮುದಾಯಕ್ಕೆ ಜನಸಂಖ್ಯೆಗೆ ಅನುಗುಣವಾಗಿ ಅನುದಾನ ಮೀಸಲಿಟ್ಟು ಖರ್ಚು ಮಾಡಬೇಕೆಂದು ಕಾನೂನು ಜಾರಿಗೆ ತಂದೆ. ಅಲ್ಲದೆ ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಭೂಮಿಗಳ ವರ್ಗಾವಣೆ ನಿಷೇಧ ತಿದ್ದುಪಡಿ(ಪಿಸಿಟಿಎಲ್) ಕಾಯ್ದೆ ತಿದ್ದುಪಡಿಗೊಳಿಸಿ ಜಾರಿಗೊಳಿಸಿದ್ದೇನೆ ಎಂದರು.

ಬಾಬಾ ಸಾಹೇಬರು ಎಂದಿಗೂ ಕೂಡ ಸ್ವಾಭಿಮಾನದ ಜೊತೆಗೆ ರಾಜೀ ಮಾಡಿಕೊಂಡಿರಲಿಲ್ಲ, ಸಂಘಟನೆಗಳು ಹಾಗೂ ಶೋಷಿತರು ಕೂಡ ಸ್ವಾಭಿಮಾನದ ಜೀವನ ಅಳವಡಿಸಿಕೊಳ್ಳಬೇಕು, ಬಾಬಾ ಸಾಹೇಬರು ತಮ್ಮ ಜೀವನದುದ್ದಕ್ಕೂ ಮಾಡಿದ ಹೋರಾಟದ ಬದುಕು, ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಡೆಯುವುದೇ ನಾವೆಲ್ಲ ಅವರಿಗೆ ಸಲ್ಲಿಸುವ ಗೌರವವಾಗಿದೆ. ಈ ನಿಟ್ಟಿನಲ್ಲಿ ಬುದ್ಧಿವಂತಿಕೆ ಯಾರಪ್ಪನ ಸ್ವತ್ತಲ್ಲ. ಬಾಬಾ ಸಾಹೇಬರು ಹೇಳಿದಂತೆ ವಿದ್ಯಾವಂತರಾಗಿ, ಮನುಷ್ಯರಾಗಿ ಸ್ವಾಭಿಮಾನಿಗಳಾದಾಗ ಮಾತ್ರ ಸಮಾನತೆ ಬರಲು ಸಾಧ್ಯ ಎಂದರು.

ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ ಮಾತನಾಡಿ, ಬಾಬಾ ಸಾಹೇಬರು ಬರೀ ಮೀಸಲಾತಿ, ದಲಿತರಿಗೆ ಮಾತ್ರ ಸೀಮಿತವಾಗಿಲ್ಲ. ಭಾರತದ ಎಲ್ಲಾ ವರ್ಗದ ಜನರ ಹಕ್ಕನ್ನು ರಕ್ಷಿಸುವಂತಹ ಶ್ರೇಷ್ಠ ಸಂವಿಧಾನವನ್ನು ನೀಡಿದ್ದಾರೆ. ಆದ್ದರಿಂದಲೇ ಅಂಬೇಡ್ಕರ್ ಅವರ ವಿಚಾರ ಧಾರೆಗಳು ಎಲ್ಲರನ್ನೂ ತಲುಪಬೇಕು, ಅಸಮಾನತೆ ತೊಡೆದು ಹಾಕಬೇಕು ಎಂಬ ಸದುದ್ದೇಶದಿಂದ ನಮ್ಮ ಸರ್ಕಾರ ಸಂವಿಧಾನ ಪೀಠಿಕೆ ಓದುವುದು ಅರ್ಥೈಸುವ ಆದೇಶವನ್ನು ಜಾರಿಗೊಳಿಸಿದೆ ಎಂದರು.

ಶಾಸಕ ದರ್ಶನ್ ಧ್ರುವನಾರಾಯಣ್ ಮಾತನಾಡಿ, ಬಾಬಾ ಸಾಹೇಬರ ಜಯಂತಿ ಆಚರಣೆಯಿಂದಾಗಿ ನಂಜನಗೂಡಿನಲ್ಲಿ ಇಂದು ಹಬ್ಬದ ವಾತಾವರಣ ನಿರ್ಮಾಣವಾಗಿದೆ. ಮೆರವಣಿಗೆ ಮೂಲಕ ಸಂವಿಧಾನದ ಆಶಯ, ಕಾನೂನಿನ ಅರಿವು ಮೂಡಿಸುವ ಕೆಲಸವನ್ನು ಮಾಡಿದ್ದೇವೆ ಎಂದರು. ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಮಾತನಾಡಿ, ಬಾಬಾ ಸಾಹೇಬರ ಸಂವಿಧಾನದಿಂದಾಗಿ ನಾವೆಲ್ಲರೂ ಅಸಮಾನತೆಯ ದಾಸ್ಯದಿಂದ ದೂರವಾಗಿ ಸ್ವಾಭಿಮಾನದಿಂದ ಬದುಕುವಂತಾಗಿದೆ. ಎಂದಲ್ಲದೆ ಸಂವಿಧಾನವನ್ನು ಬದಲಾಯಿಸಬೇಕು ಎಂಬ ದುಷ್ಟಶಕ್ತಿಗಳಿಗೆ ಲೋಕಸಭೆ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಿದ್ದೀರಿ ಎಂದರು.

ಸಂಸದ ಸುನೀಲ್‌ಬೋಸ್ ಮಾತನಾಡಿ, ಅಂಬೇಡ್ಕರ್ ಅವರನ್ನು ಒಂದೇ ಜಾತಿಗೆ ಸೀಮಿತಗೊಳಿಸಬಾರದು. ವಿಶ್ವಸಂಸ್ಥೆ ಅವರ ಜನ್ಮದಿನವನ್ನು ಸಮಾನತೆಯ ದಿನವನ್ನಾಗಿ ಆಚರಿಸುತ್ತಿದೆ. ಕಾಂಗ್ರೆಸ್ ಪಕ್ಷ ಅಂಬೇಡ್ಕರ್ ಆಶಯದಂತೆ ಬ್ಯಾಂಕ್‌ಗಳನ್ನು ರಾಷ್ಟ್ರೀಕರಣಗೊಳಿಸಿದರೆ, ಬಿಜೆಪಿ ಸರ್ಕಾರ ಅವರ ಆಶಯಕ್ಕೆ ವಿರುದ್ಧವಾಗಿ ಬ್ಯಾಂಕ್‌ಗಳ ಖಾಸಗೀಕರಣಗೊಳಿಸುತ್ತಿದೆ ಎಂದು ಆಪಾದಿಸಿದರು.

ಕಾರ್ಯಕ್ರಮದಲ್ಲಿ ಜಯಂತ್ಯುತ್ಸವದ ಅಂಗವಾಗಿ ಏರ್ಪಡಿಸಿದ್ದ ಚರ್ಚಾಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದ ಕುಸುಮಾ ಬಾಯಿಗೆ ಲ್ಯಾಪ್‌ಟಾಪ್, ದ್ವಿತೀಯ ಬಹುಮಾನ ಪಡೆದ ಮನುಶ್ರೀಗೆ ಟ್ಯಾಬ್, ತೃತೀಯ ಬಹುಮಾನ ಪಡೆದ ಚೇತ್ರ, ಮಾಧವಾಬಿಂಕೆರಿಗೆ ಬಹುಮಾನ ವಿತರಿಸಿದರು.

ಇದಕ್ಕೂ ಮುನ್ನ ಡಾ.ಅಂಬೇಡ್ಕರ್ ಅವರ ಭಾವಚಿತ್ರ ಹಾಗೂ ಸ್ತಬ್ಧಚಿತ್ರ ಮೆರವಣಿಗೆಗೆ ಸಂಸದ ಸುನೀಲ್‌ಬೋಸ್, ಶಾಸಕ ದರ್ಶನ್ ಧ್ರುವನಾರಾಯಣ್, ಅನಿಲ್ ಚಿಕ್ಕಮಾದು, ವಿಧಾನಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ, ಮಾಜಿ ಶಾಸಕ ಹರ್ಷವರ್ಧನ್ ಚಾಲನೆ ನೀಡಿದರು. ಮೆರವಣಿಗೆ ವಿವಿಧ ಕಲಾತಂಡಗಳೊಂದಿಗೆ ಶ್ರೀಕಂಠೇಶ್ವರ ದೇವಾಲಯ ತಲುಪಿತು.

ಸಮಾರಂಭದಲ್ಲಿ ಶಾಸಕರಾದ ಅನಿಲ್ ಚಿಕ್ಕಮಾದು, ಗಣೇಶ್‌ಪ್ರಸಾದ್, ಡಾ.ತಿಮ್ಮಯ್ಯ, ಮಾಜಿ ಶಾಸಕರಾದ ಕಳಲೆ ಕೇಶವಮೂರ್ತಿ, ಮರಿತಿಬ್ಬೇಗೌಡ, ಮುಖಂಡರಾದ ವೇಣುಗೋಪಾಲ್, ಎಸ್ಸಿ.ಬಸವರಾಜು, ಇಂಧನ್ ಬಾಬು, ಎನ್.ಟಿ.ಗಿರೀಶ್, ಲಕ್ಷ್ಮಿನಾರಾಯಣ, ರಾಜೇಶ್, ಬುಲೆಟ್‌ಮಹದೇವಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಕುರಹಟ್ಟಿಮಹೇಶ್, ಹಾಡ್ಯರಂಗಸ್ವಾಮಿ, ಸಿ.ಎಂ.ಶಂಕರ, ಶ್ರೀಕಂಠನಾಯಕ, ದಸಂಸ ಒಕ್ಕೂಟದ ಅಧ್ಯಕ್ಷ ನಗರ್ಲೆ ವಿಜಯಕುಮಾರ್, ಮಲ್ಲೇಶ್, ಕಾರ್ಯಬಸವಣ್ಣ, ಮಲ್ಲಹಳ್ಳಿ ನಾರಾಯಣ, ಕೆಪಿಸಿಸಿ ಸದಸ್ಯ ಅಕ್ಬರ್ ಅಲಿ, ಜಿಪಂ ಮಾಜಿ ಸದಸ್ಯರಾದ ಕೆ.ಮಾರುತಿ, ನಗರಸಭಾ ಸದಸ್ಯರಾದ ಶ್ರೀಕಂಠಸ್ವಾಮಿ, ಗಂಗಾಧರ್, ಗಾಯತ್ರಿ, ಎಸ್.ಪಿ.ಮಹೇಶ್, ಪ್ರದೀಪ್ ಸೇರಿದಂತೆ ಹಲವಾರು ಪ್ರಮುಖರು ಇದ್ದರು.

ತುಂಬಸೋಗೆ ಗ್ರಾಪಂ ಅಭಿವೃದ್ಧಿ ಅಧಿಕಾರಿ ವಿರುದ್ಧ ದೂರು

ಕಚೇರಿಗೆ ಸರಿಯಾಗಿ ಬರುತ್ತಿಲ್ಲ, ಗ್ರಾಮದ ಕೆಲಸ ಮಾಡುತ್ತಿಲ್ಲ, ನೀರು, ಚರಂಡಿ, ಸೊಳ್ಳೆ ಸೇರಿದಂತೆ ಯಾವುದೇ ಸಮಸ್ಯೆಗೆ ಸ್ಪಂದಿಸುತ್ತಿಲ್ಲ

ಹೆಚ್.ಡಿ.ಕೋಟೆ, ಜು.10– ತಾಲೂಕಿನ ತುಂಬಸೋಗೆ ಗ್ರಾಮ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ ಸಾರ್ವಜನಿಕರಿಗೆ ಸ್ಪಂದಿಸಿ ಕೆಲಸ ಮಾಡುತ್ತಿಲ್ಲ. ಅವರ ವಿರುದ್ಧ ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿ ತಾಲೂಕು ಪಂಚಾಯತಿ ಇಓ ಅವರಿಗೆ ಗ್ರಾಮಸ್ಥರು ಮನವಿ ಸಲ್ಲಿಸಿದರು.



ಹೆಚ್.ಡಿ.ಕೋಟೆ ಪಟ್ಟಣದ ತಾಲೂಕು ಪಂಚಾಯತಿ ಇಓ ಅವರಿಗೆ ತುಂಬಸೋಗೆ ಗ್ರಾಮಸ್ಥರು ಪಿಡಿಓ ವಿರುದ್ಧ ದೂರು ನೀಡುತ್ತಿರುವುದು.

ಪಟ್ಟಣದ ತಾಲೂಕು ಪಂಚಾಯತಿ ಕಾರ್ಯಾಲಯಕ್ಕೆ ಆಗಮಿಸಿದ ಗ್ರಾಮಸ್ಥರು ಪಿಡಿಓ ಮಧುರ ಅವರು ಪಂಚಾಯತಿ ಕಾರ್ಯಾಲಯಕ್ಕೆ ನಿಗದಿತ ಸಮಯಕ್ಕೆ ಆಗಮಿಸುತ್ತಿಲ್ಲ. ಗ್ರಾಮದಲ್ಲಿ ತಲೆದೋರಿರುವ ಸಮಸ್ಯೆಗಳ ಬಗ್ಗೆ ಗಮನ ಹರಿಸುತ್ತಿಲ್ಲ. ಆದ ಕಾರಣ ಜನತೆ ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ದೂರಿದರು.

ಪಂಚಾಯತ್ ನಿಯಮದ ಪ್ರಕಾರ ಪ್ರತೀ 15 ದಿನಗಳಿಗೊಮ್ಮೆ ಚರಂಡಿಗಳನ್ನು ಬ್ಲೀಚಿಂಗ್ ಪೌಡರ್‌ನಿಂದ ಸ್ವಚ್ಛಗೊಳಿಸಬೇಕೆಂಬ ನಿಯಮವಿದ್ದರೂ ಅದನ್ನು ಮಾಡುತ್ತಿಲ್ಲ. ದಿನದಿಂದ ದಿನಕ್ಕೆ ಉಲ್ಬಣಗೊಳ್ಳುತ್ತಿರುವ ಡೆಂಗ್ಯೂ ಮಹಾಮಾರಿ ತಡೆಯುವ ನಿಟ್ಟಿನಲ್ಲಿ ಯಾವುದೇ ಕ್ರಮ ಕೈಗೊಂಡಿಲ್ಲ, ಪಂಚಾಯ್ತಿಯಲ್ಲಿ ನಡೆಯುವ ಆರೋಗ್ಯ ಪ್ರಧಾನ, ಮಹಿಳಾ ಪ್ರಧಾನ ಕಾರ್ಯಕ್ರಮಗಳಿಗೆ ಆಶಾ ಕಾರ್ಯಕರ್ತೆಯರಿಗೆ, ಅಂಗನವಾಡಿ ಕಾರ್ಯಕರ್ತೆಯರಿಗೆ ಮಾಹಿತಿಯನ್ನೇ ನೀಡುವುದಿಲ್ಲ. ಅಲ್ಲದೇ ಪಂಚಾಯ್ತಿ ಕಾರ್ಯಕ್ರಮಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುತ್ತಿಲ್ಲ ಎಂದು ಆರೋಪಿಸಿದರು.

ಗ್ರಾಮದ ಯುವ ಮುಖಂಡ ಅಂಕಪ್ಪ ಮಾತನಾಡಿ, ಪಂಚಾಯ್ತಿ ಅಭಿವೃದ್ಧಿ ಅಧಿಕಾರಿಗಳು ಪ್ರತೀ ನಿತ್ಯ 12.30ಕ್ಕೆ ಕಚೇರಿಗೆ ಬರುತ್ತಾರೆ, ಮಧ್ಯಾಹ್ನ 3, 4 ಗಂಟೆಗೆ ಹೊರಟು ಹೋಗುತ್ತಾರೆ. ಗ್ರಾಮದ ಹೃದಯ ಭಾಗದಲ್ಲಿ ಸುಮಾರು ಒಂದೂವರೆ ವರ್ಷದಿಂದ ಬಿದ್ದಿದ್ದ ಕಸವನ್ನು ಮಾಧ್ಯಮಗಳಲ್ಲಿ ವರದಿ ಬಂದ ನಂತರ ತೆರವುಗೊಳಿಸಿದ್ದಾರೆ. ಮಾಹಿತಿ ಹಕ್ಕು ಅಧಿನಿಯಮದಡಿ ಮಾಹಿತಿ ಕೇಳಿದರೆ ಮಾಹಿತಿ ನೀಡಲು ಇಲ್ಲ–ಸಲ್ಲದ ಸಬೂಬು ಹೇಳು ತ್ತಾರೆ, ಕುಡಿಯುವ ನೀರಿನ ಸಮಸ್ಯೆ ತಲೆದೋರಿದ್ದರೂ ಕೆಟ್ಟು ನಿಂತಿರುವ ಕೈ ಪಂಪ್‌ಗಳನ್ನು ದುರಸ್ತಿ ಪಡಿಸಿಲ್ಲ ಎಂದು ಆರೋಪಿಸಿದರು.

ಗ್ರಾಪಂನ ಕೇಂದ್ರ ಸ್ಥಾನದಲ್ಲಿರುವ ಗ್ರಂಥಾ ಲಯಕ್ಕೆ ಸಮರ್ಪಕ ಪುಸ್ತಕ ಒದಗಿಸಿಲ್ಲ, ಗ್ರಂಥಾಲಯದಲ್ಲಿರುವ ಕಂಪ್ಯೂಟರ್‌ಗಳು ಗುಣಮಟ್ಟದಿಂದ ಕೂಡಿಲ್ಲ, ಗ್ರಂಥಾ ಲಯಕ್ಕೆ ಸೋಲಾರ್ ದೀಪದ ವ್ಯವಸ್ಥೆ ಮಾಡಿಲ್ಲ, ಗ್ರಾಮದಲ್ಲಿ ತಲೆದೋರಿರುವ ನೀರಿನ ಸಮಸ್ಯೆ ಬಗೆಹರಿಸಿಲ್ಲ ಎಂದು ದೂರಿದರು.

ಇದೇ ಸಂದರ್ಭದಲ್ಲಿ ಟಿ.ಆರ್.ಮಹೇಶ್, ಅಭಿ, ಅನಿಲ್, ಪ್ರವೀಣ್, ತಗಡೂರ ನಾಯಕ, ಟಿ.ಎ.ಅಂಕಪ್ಪ ಶಿವಕುಮಾರ ಇದ್ದರು.

ಹುಣಸೂರು ತಾಲೂಕಲ್ಲಿ ಡೆಂಗ್ಯೂ ಬಗ್ಗೆ ಎಚ್ಚರಿಕೆ ಅಗತ್ಯ

ಬೆಳಗ್ಗೆಯಿಂದ ಸಂಜೆವರೆಗೂ ವೈದ್ಯರ ಉಪಸ್ಥಿತಿ ಅಗತ್ಯ; ಕೆಡಿಪಿ ಸಭೆಯಲ್ಲಿ ಶಾಸಕ ಹರೀಶ್‌ಗೌಡರ ಸೂಚನೆ

ಹುಣಸೂರು, ಜು.10– ತಾಲೂಕಿನಲ್ಲಿ ಕಾಣಿಸಿಕೊಂಡಿರುವ ಡೆಂಗ್ಯೂ ಜ್ವರ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಎಚ್ಚರಿಕೆ ವಹಿಸಬೇಕು. ಅದನ್ನು ನಿಯಂತ್ರಿಸಿ, ಸಾರ್ವಜನಿಕರಿಗೆ ಚಿಕಿತ್ಸೆ ದೊರಕುವಂತಾಗಲು ವೈದ್ಯರು ಮತ್ತು ಸಿಬ್ಬಂದಿ ಬೆಳಗ್ಗೆಯಿಂದ ಸಂಜೆವರೆಗೂ ಆರೋಗ್ಯ ಕೇಂದ್ರದಲ್ಲಿ ಇರಬೇಕು ಎಂದು ಶಾಸಕ ಜಿ.ಡಿ. ಹರೀಶ್‌ಗೌಡರು ತಿಳಿಸಿದ್ದಾರೆ.



ತಾಲೂಕು ಮಟ್ಟದ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ ಶಾಸಕ ಜಿ.ಡಿ. ಹರೀಶ್‌ಗೌಡ ಮಾತನಾಡಿದರು.

ನಗರಸಭೆಯ ಸಭಾಂಗಣದಲ್ಲಿ ನಡೆದ ತಾಲೂಕು ಮಟ್ಟದ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಆರೋಗ್ಯ ಇಲಾಖೆಗೆ ಬಯೋಮೆಟ್ರಿಕ್ ನೀಡಿ, ಅದರ ಮೂಲಕ ವೈದ್ಯರ ಮತ್ತು ಸಿಬ್ಬಂದಿ ಇರುವಿಕೆಯನ್ನು ದೃಢಪಡಿಸಬೇಕು ಎಂದರು.

ನಗರದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಗೆ ಡೆಂಗ್ಯೂ ರೋಗಿಗಳಿಗೆ 2 ಕೊಠಡಿ ಮೀಸಲಿರಿಸಿದ್ದೇವೆ. ಜ್ವರ ಕಂಡುಬಂದಲ್ಲಿ ರೋಗಿಯನ್ನು ಪರೀಕ್ಷಿಸಿ ಪ್ರಥಮ ಚಿಕಿತ್ಸೆ ಮೂಲಕ ಉತ್ತಮ ರೀತಿಯಲ್ಲಿ ಚಿಕಿತ್ಸೆ ನೀಡುತ್ತಿದ್ದೇವೆ. ಮಕ್ಕಳ ಹಾಗೂ ಚರ್ಮರೋಗ ತಜ್ಞರ ಕೊರತೆಯಿರುವುದರಿಂದ ಮುಂದಿನ ದಿನಗಳಲ್ಲಿ ವೈದ್ಯರನ್ನು ನೇಮಕ ಮಾಡಿಕೊಡಬೇಕೆಂದು ಶಾಸಕರಲ್ಲಿ ಡಾ. ಸತೀಶ್ ಮನವಿ ಮಾಡಿದರು.

ನಗರದ 17 ಎಕರೆ ನರಸಿಂಹಸ್ವಾಮಿ ತಿಟ್ಟು ಭೂಮಿಯನ್ನು ಕೊಳೆಗೇರಿ ಅಭಿವೃದ್ಧಿ ಮಂಡಳಿ ಮತ್ತು ನಗರಸಭೆ ಜಂಟಿಯಾಗಿ ಸಮೀಕ್ಷೆ ನಡೆಸಿ ವ್ಯವಸ್ಥಿತ ರೀತಿಯಲ್ಲಿ ಬಡಾವಣೆ ನಿರ್ಮಿಸಿ ನಿವೇಶನ ನೀಡುವ ಕೆಲಸವಾಗಬೇಕು ಎಂದು ಶಾಸಕರು ಇದೇ ವೇಳೆ ಹೇಳಿದರು.

ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿಯ ಲಕ್ಷ್ಮೀಶ್ ಗೌಡ ಸಭೆಗೆ ನರಸಿಂಹಸ್ವಾಮಿ ತಿಟ್ಟು ಪ್ರದೇಶದಲ್ಲಿ 161 ಮಂದಿಗೆ ಹಕ್ಕುಪತ್ರ ನೀಡಿದ್ದೇವೆ. ನಗರದಲ್ಲಿ 17 ಕೊಳಚೆ ಪ್ರದೇಶಗಳನ್ನು ಗುರುತಿಸಲಾಗಿದೆ ಎಂದು ಮಾಹಿತಿ ನೀಡಿದ್ದೀರಿ. ನರಸಿಂಹಸ್ವಾಮಿ ತಿಟ್ಟಿನ ರಸ್ತೆ, ಚರಂಡಿ ಮೇಲೆ ಮನೆ ಕಟ್ಟಿಕೊಂಡಿದ್ದಾರೆ. ಇಲಾಖೆಯವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ಮಾಡಿದ್ದೀರಾ. ಇಲಾಖೆ ವತಿಯಿಂದ ಮೊದಲು ಬಡಾವಣೆ ನಕ್ಷೆ ತಯಾರು ಮಾಡಬೇಕಿತ್ತು. ನಗರಸಭೆಯಲ್ಲಿ ಯಾವುದೇ ಖಾತೆಯಾಗಿಲ್ಲ ಎಂದು ಸ್ಥಳೀಯರು ದೂರುತ್ತಾರೆ. ನಗರಸಭೆಯವರು ಅನಧಿಕೃತ ಬಡಾವಣೆ ಎಂದು ಅಧಿಕಾರಿಗಳು ಹೇಳುತ್ತಾರೆ ಎಂದು ತಿಳಿಸಿದರು.

ತಾಲೂಕಿನಲ್ಲಿ ಪ.ಜಾತಿ, ಪ.ಪಂಗಡದ ಸಮುದಾಯ ಭವನಗಳು ಯಾವುದಾದರೂ ಅರ್ಧಕ್ಕೆ ನಿಂತಿದ್ದರೆ ಅವುಗಳ ಬಗ್ಗೆ ಮಾಹಿತಿ ನೀಡಿ. ನಾನು ಇಲಾಖೆಯಿಂದ ಅನುದಾನ ತರಲು ಸಂಪೂರ್ಣವಾಗಿ ಸಹಕರಿಸುತ್ತೇನೆ ಎಂದು ತಿಳಿಸಿದರು.

ತಾಲೂಕು ಪಂಚಾಯಿತಿ ಕಾರ್ಯ ನಿರ್ವಹಣಾಧಿಕಾರಿ ಮನು, ತಹಸೀಲ್ದಾರ್ ಮಂಜುನಾಥ್, ಪೌರಾಯುಕ್ತರಾದ ಮಾನಸ, ಬಿ.ಒ.ಮಹದೇವ್, ಬಿ.ಆರ್.ಸಿ.ಸಂತೋಷ್ ಕುಮಾರ್, ಶರವಣ, ಎಡಿಎಲ್‌ಆರ್ ಅಧಿಕಾರಿ ಹುಸೇನ್, ಮಹಮ್ಮದ್ ಕಲೀಂ, ಸೈಯದ್ ನುಸ್ರತ್ ಫಾತಿಮಾ, ಮಹೇಶ್ ಇನ್ನಿತರರು ಹಾಜರಿದ್ದರು.

ಶ್ರೀಕಂಠೇಶ್ವರಸ್ವಾಮಿ ದೇವಾಲಯದಲ್ಲಿ ಗಿರಿಜಾ ಕಲ್ಯಾಣ ಸಂಪನ್ನ

ನಂಜನಗೂಡು, ಜು.10– ನಗರದ ಪುರಾಣ ಪ್ರಸಿದ್ಧ ಶ್ರೀಕಂಠೇಶ್ವರ ಸ್ವಾಮಿ ದೇವಾಲಯದಲ್ಲಿ ಬುಧವಾರ ಸಾವಿರಾರು ಭಕ್ತರ ಸಮ್ಮುಖದಲ್ಲಿ ದೇವಾಲಯದ ವಸಂತ ಮಂಟಪದಲ್ಲಿ ಪಾರ್ವತಿ ಅಮ್ಮನವರು ಹಾಗೂ ಶ್ರೀಕಂಠೇಶ್ವರ ಸ್ವಾಮಿಯವರ ಗಿರಿಜಾಕಲ್ಯಾಣ ಮಹೋತ್ಸವ ಅದ್ಧೂರಿಯಾಗಿ ನೆರವೇರಿತು.



ಬೆಳಿಗ್ಗೆ 5 ಗಂಟೆಗೆ ದೇವಾಲಯದಲ್ಲಿ ಗಿರಿಜಾ ಕಲ್ಯಾಣ ಮಹೋತ್ಸವ ಪ್ರಯುಕ್ತ ದೇವಾಲಯದ ಆಗಮಿಕ ನಾಗಚಂದ್ರ ದೀಕ್ಷಿತ್ ನೇತೃತ್ವದಲ್ಲಿ ಮಂಗಳವಾರ ವರ ಪೂಜಾ ಮಹೋತ್ಸವವನ್ನು ನಡೆಸಲಾಯಿತು. ಬುಧವಾರ ಶ್ರೀಕಂಠೇಶ್ವರ, ಪಾರ್ವತಿಯವರ ಮೂಲ ದೇವರು ಹಾಗೂ ಉತ್ಸವ ಮೂರ್ತಿಗಳಿಗೆ ಅರಿಸಿನ, ಎಣ್ಣೆ ಮಜ್ಜನ ಸೇವೆಯ ನಂತರ ಬಿಸಿನೀರಿನ ಸ್ನಾನದ ನಂತರ ಅಂಕುರಾರ್ಪಣ, ಅನುಜ್ಞ ವಿಧಿ ವಿಧಾನಗಳ ನಂತರ ನವಗ್ರಹ ಹೋಮ, ಕಲಶ ಮೆರವಣಿಗೆಗಳನ್ನು ನಡೆಸಲಾಯಿತು.


ಗಿರಿಜಾ ಕಲ್ಯಾಣ ಮಹೋತ್ಸವದ ಪ್ರಯುಕ್ತ ದೇವಾಲಯದ ಮುಂಭಾಗದಲ್ಲಿ ಚಪ್ಪರಕ್ಕೆ ತಳಿರು ತೋರಣ,ವಿವಿಧ ಬಗೆಯ ಹೂವುಗಳಿಂದ ಸಿಂಗರಿಸಲಾಗಿತ್ತು, ಕಲ್ಯಾಣ ಕಾರ್ಯಕ್ರಮ ನಡೆಯುವ ವಸಂತ ಮಂಟಪವನ್ನು ವಿಶೇಷವಾಗಿ ಅಲಂಕರಿಸಲಾಗಿತ್ತು, ದೇವಾಲಯದ ಪ್ರಾಂಗಣ ಹಾಗೂ ದೇವಾಲಯದ ವ್ಯಾಪ್ತಿಯ ಕಟ್ಟಡಗಳನ್ನು ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು.

ರಾತ್ರಿ 7–15 ರಿಂದ 7–45ರವರೆಗೆ ಸಲ್ಲುವ ಶುಭ ಮಕರ ಲಗ್ನದಲ್ಲಿ ಧಾರಾ ಮಹೋತ್ಸವಕ್ಕಾಗಿ ಶ್ರೀಕಂಠೇಶ್ವರ ಸ್ವಾಮಿಯವರ ಉತ್ಸವಮೂರ್ತಿಯನ್ನು ವಜ್ರ, ವೈಢೂರ್ಯ, ಪಚ್ಚೆ, ಮುತ್ತುಗಳಿಂದ ಕೂಡಿದ ಆಭರಣಗಳಿಂದ ಅಲಂಕಾರ ಮಾಡಿ, ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ಋತ್ವಿಕರು ವೇದಘೋಷ ಮಾಡುತ್ತಾ, ದೇವಾಲಯ ಸುತ್ತ ಕಾಶಿ ಯಾತ್ರೆಗೆ ಮೆರವಣಿಗೆಯಲ್ಲಿ ಕರೆದೊಯ್ಯಲಾಯಿತು, ನಂದಿಕಂಬ, ಗಾರುಡಿಗೊಂಬೆ, ಡೋಲು, ಹುಲಿವೇಷ, ನಂದಿಧ್ವಜ ಕುಣಿತ, ವೀರಗಾಸೆ ಕುಣಿತಗಳು ಮೆರವಣಿಗೆಗೆ ರಂಗು ತಂದವು, ಭಕ್ತರು ಪಾರ್ವತಿ ಸಮೇತ ಶ್ರೀಕಂಠೇಶ್ವರ ಸ್ವಾಮಿಯವರಿಗೆ ಜಯಘೋಷ ಕೂಗುತ್ತಾ ಸಾಗಿದರು. ದೇವಾಲಯದ ಮುಂಭಾಗ ಸಂಬಂಧ ಮಾಲೆಯನ್ನು ಗಿರಿಜೆ ಮತ್ತು ಶಿವನ ಮೂರ್ತಿಗಳಿಗೆ ಬದಲಾಯಿಸಿದ ನಂತರ ಕನ್ಯಾದಾನ ವಿಧಿ ನಡೆಸಲಾಯಿತು. ನಂತರ ಋತ್ವಿಕರ ವೇದ ಘೋಷಗಳ ನಡುವೆ ಮಾಂಗಲ್ಯ ಧಾರಣೆ ನಡೆಸುವ ಮೂಲಕ ಗಿರಿಜಾ ಕಲ್ಯಾಣ ಮಹೋತ್ಸವ ಸಂಪನ್ನಗೊಂಡಿತು. ದೇವಾಲಯದ ದಾಸೋಹ ಭವನದಲ್ಲಿ ಭಕ್ತರಿಗೆ ಭೂರಿ ಭೋಜನದ ವ್ಯವಸ್ಥೆ ಮಾಡಲಾಗಿತ್ತು. ಕಾರ್ಯಕ್ರಮದಲ್ಲಿ ದೇವಾಲಯದ ಇಒ ಜಗದೀಶ್ ಕುಮಾರ್, ಶಿವಶಂಕರ ದೀಕ್ಷಿತ್, ನೀಲಕಂಠ ದೀಕ್ಷಿತ್ ಉಪಸ್ಥಿತರಿದ್ದರು.

ನಾಳೆಯಿಂದ ಶ್ರೀ ತ್ರಿಪುರ ಸುಂದರಿ ಅಮ್ಮನವರ ಆಷಾಢ ಮಾಸದ ಪೂಜೆ

ಇನ್ನೂ ಸಿದ್ಧತೆ ಕೈಗೊಳ್ಳದ ತಾಲೂಕು ಆಡಳಿತ, ಮುಜರಾಯಿ ಇಲಾಖೆ

ಮೂಗೂರು, ಜು.10– ಗ್ರಾಮದ ಶ್ರೀ ತ್ರಿಪುರ ಸುಂದರಿ ಅಮ್ಮನವರ ಆಷಾಢ ಮಾಸದ ವಿಶೇಷ ಪೂಜಾ ಕಾರ್ಯಕ್ರಮ ಜು.12 ರಿಂದ ಆ.4 ರವರೆಗೆ ನಡೆಯಲಿದ್ದು, ತಾಲೂಕು ಆಡಳಿತ ಮತ್ತು ಮುಜರಾಯಿ ಇಲಾಖೆ ಯಾವುದೇ ಸಿದ್ಧತೆ ಕೈಗೊಳ್ಳದೆ ಕೈಕಟ್ಟಿ ಕುಳಿತಿದೆ.





ಪ್ರತಿ ವರ್ಷದಂತೆ ಈ ಬಾರಿಯೂ ಆಷಾಢ ಮಾಸದ ವಿಶೇಷ ಪೂಜೆಗೆ ಅಪಾರ ಸಂಖ್ಯೆಯಲ್ಲಿ ಭಕ್ತರು ಆಗಮಿಸುವ ನಿರೀಕ್ಷೆಯ ಹಿನ್ನೆಲೆಯಲ್ಲಿ ತಾಲೂಕು ಆಡಳಿತ, ಮುಜರಾಯಿ ಇಲಾಖೆ ಸಕಲ ಸಿದ್ಧತೆಗೆ ಮುಂದಾಗಬೇಕಿದೆ.

ಹಳೆಯ ಮೈಸೂರು ಭಾಗದ ಧಾರ್ಮಿಕ ಕ್ಷೇತ್ರದಲ್ಲೊಂದಾದ ಶ್ರೀ ತ್ರಿಪುರ ಸುಂದರಿ ಅಮ್ಮನವರ ಆಷಾಢ ಮಾಸದ ಹೂವಿನ ಸೀರೆ ಅಲಂಕಾರ ವೈಶಿಷ್ಟ್ಯತೆಯನ್ನು ಪಡೆದಿದ್ದು, ಅಸಂಖ್ಯಾತ ಭಕ್ತರನ್ನು ಸೆಳೆದಿದೆ. ಶ್ರೀ ತ್ರಿಪುರ ಸುಂದರಿ ಅಮ್ಮನವರಿಗೆ ಆಷಾಢ ಮಾಸದಲ್ಲಿ ಜರುಗಲಿರುವ ಹೂವಿನ ಸೀರೆ ಅಲಂಕಾರ ವೀಕ್ಷಣೆಗೆ ರಾಜ್ಯದ ವಿವಿಧ ಭಾಗಗಳಿಂದ ಭಕ್ತರ ದಂಡೇ ಆಗಮಿಸುವುದಿದೆ. ಆದರೆ ಭಕ್ತರಿಗೆ ಅಗತ್ಯವಿರುವ ಮೂಲಸೌಕರ್ಯ ಕೈಗೊಳ್ಳಲು ತಾಲೂಕು ಆಡಳಿತ ಮುಂದಾಗಿಲ್ಲ.

ಪಾರ್ಕಿಂಗ್ ಅವ್ಯವಸ್ಥೆ: ದೇವಾಲಯದ ಬಳಿ ಇರುವ ಜಾಗದಲ್ಲಿ ಸ್ಥಳೀಯರ ಅನಧಿಕೃತ ಅಂಗಡಿಗಳ ಹಾವಳಿಯಿಂದ ಭಕ್ತರ ವಾಹನ ನಿಲುಗಡೆಗೆ ಸ್ಥಳವಿಲ್ಲದೇ ಅಂಗಡಿ ಬೀದಿಯ ಮನೆಗಳ ಮುಂದೆ ಸಾಲುಗಟ್ಟಿ ನಿಲ್ಲಿಸುವಂತಾಗಿದೆ. ಜನದಟ್ಟಣೆಯಿಂದ ಸಂಚಾರಕ್ಕೆ ತೊಡಕಾಗಿದೆ. ಸೂಕ್ತ ವಾಹನ ನಿಲ್ದಾಣ ವ್ಯವಸ್ಥೆ ಕಲ್ಪಿಸಬೇಕಿದೆ.

ಕುಡುಕರು, ಭಿಕ್ಷುಕರ ಕಾಟ: ದೇವಾಲಯದ ಆವರಣದಲ್ಲಿ ಕುಡುಕರು ಹಾಗೂ ಭಿಕ್ಷುಕರ ಸಂಖ್ಯೆ ಹೆಚ್ಚಾಗಿದ್ದು, ಬರುವ ಭಕ್ತಾದಿಗಳಿಗೆ ಇವರ ಕಾಟ ಹೇಳತೀರದಾಗಿದೆ.

ಶೌಚಾಲಯದ ವ್ಯವಸ್ಥೆ ಇಲ್ಲವಾಗಿದೆ: ಭಕ್ತರಿಗಾಗಿಯೇ ನಿರ್ಮಿಸಿರುವ ಶೌಚಗೃಹ ದೇಗುಲದ ಅನತಿ ದೂರದಲ್ಲಿ ಇರುವುದರಿಂದ ಸಂಜೆ ವೇಳೆ ಭಕ್ತರು ಶೌಚಾಲಯಕ್ಕೆ ಪರದಾಡುವಂತಾಗಿದೆ. ಸಂಜೆ ವೇಳೆ ಶೌಚಾಲಯಕ್ಕೆ ಪರ್ಯಾಯ ವ್ಯವಸ್ಥೆ ಕಲ್ಪಿಸಬೇಕಿದೆ.

ವೃದ್ಧೆ ನಾಪತ್ತೆ

ಹಿರೀಕ್ಯಾತನಹಳ್ಳಿ, ಜು.10– ಹುಣಸೂರು ತಾಲೂಕಿನ ಬಿಳಿಕೆರೆ ಹೋಬಳಿಯ ಶ್ಯಾನಬೋಗನಹಳ್ಳಿ ಗ್ರಾಮದ ಸ್ವಾಮಿ ಗೌಡರ ಪತ್ನಿ ಸಣ್ಣಪುಟ್ಟಮ್ಮ (75) ಯಾರಿಗೂ ಹೇಳದೆ ಮನೆಬಿಟ್ಟು ಹೋಗಿ ಕಾಣೆಯಾಗಿದ್ದಾರೆ.



ಈ ಸಂಬಂಧ ಮಗ ಜಯ ರಾಮಗೌಡ ಬಿಳಿಕೆರೆ ಪೊಲೀಸ್ ಠಾಣೆಗೆ ದೂರು ನೀಡಿದ್ದು, ಇವರ ಬಗ್ಗೆ ಮಾಹಿತಿ ತಿಳಿದಲ್ಲಿ ಬಿಳಿಕೆರೆ ಪೊಲೀಸ್ ಠಾಣೆಯ ದೂರವಾಣಿ ಸಂಖ್ಯೆ, 08222240002, 9480805057 ಅಥವಾ ಜಿಲ್ಲಾ ಪೊಲೀಸ್ ಕಂಟ್ರೋಲ್ ರೂಂ ನಂ. 08212444800 ಗೆ ಸಂಪರ್ಕಿಸಲು ಕೋರಲಾಗಿದೆ.

ಮಲ್ಲಾಜಮ್ಮ ನಿಧನ

ಹುಣಸೂರು, ಜು.10– ತಾಲೂಕಿನ ಗೆಜ್ಜೆಯನ ವಡ್ಡರಗುಡಿ ಗ್ರಾಮದ ಮಲ್ಲಾಜಮ್ಮ (90) ಬುಧವಾರ ನಿಧನರಾದರು.



ಮೃತರು ಮೂವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧುಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಮಧ್ಯಾಹ್ನ 12 ಗಂಟೆಗೆ ಸ್ವಗ್ರಾಮದ ಮೃತರ ತೋಟದಲ್ಲಿ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಗೆದ್ದು ನಾಪತ್ತೆಯಾಗಿದ್ದ ಸಂಸದ ಸುನೀಲ್ ಬೋಸ್ ಇಂದು ಪ್ರತ್ಯಕ್ಷ

ಬಿಜೆಪಿ ಸಭೆಯಲ್ಲಿ ಮಾಜಿ ಶಾಸಕ ಎಸ್. ಬಾಲರಾಜ್ ವಾಗ್ದಾಳಿ

ತಿ.ನರಸೀಪುರ, ಜು.10– ಸಾರ್ವತ್ರಿಕ ಲೋಕಸಭಾ ಚುನಾವಣೆ ಮುಗಿದು, ಫಲಿತಾಂಶ ಪ್ರಕಟಗೊಂಡು ಐದು ವಾರಗಳಾದರೂ ಚಾಮರಾಜನಗರ ಕ್ಷೇತ್ರದಲ್ಲಿ ಗೆದ್ದಿರುವ ಕಾಂಗ್ರೆಸ್ ಕ್ಯಾಂಡಿಡೇಟ್ ಇದುವರೆಗೂ ಕಾಣಿಸಿಕೊಂಡಿರಲಿಲ್ಲ. ಸಿದ್ದರಾಮಯ್ಯನವರು ತಮ್ಮ ಶಕ್ತಿ ಪ್ರದರ್ಶಿಸುವ ಸಲುವಾಗಿ ಕರೆದಿರುವ ಕೃತಜ್ಞತೆ ಸಭೆಯಲ್ಲಿ ಕಾಣಿಸಿಕೊಂಡಿದ್ದಾರೆ ಎಂದು ವಾಗ್ದಾಳಿ ನಡೆಸಿದ ಮಾಜಿ ಶಾಸಕ ಎಸ್.ಬಾಲರಾಜ್, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ(ಮುಡಾ) ಭ್ರಷ್ಟಾಚಾರ ಬಯಲಾದರೆ ಸಿದ್ದರಾಮಯ್ಯ ಜೈಲು ಸೇರುವುದು ಗ್ಯಾರಂಟಿ ಎಂದಿದ್ದಾರೆ.

ಪಟ್ಟಣದ ಬಿಜೆಪಿ ಕಚೇರಿಯಲ್ಲಿ ಬುಧವಾರ ನಡೆದ ಕಾರ್ಯಕರ್ತರು ಹಾಗೂ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ಸಿಎಂ ಸಿದ್ದರಾಮಯ್ಯ ಅವರ ಕುರ್ಚಿ ಅಲುಗಾಡುತ್ತಿದ್ದು, ಹುದ್ದೆಯನ್ನು ಉಳಿಸಿಕೊಳ್ಳಲು ರಾಜ್ಯದಲ್ಲಿ ಶಕ್ತಿ ಪ್ರದರ್ಶನಕ್ಕೆ ಮುಂದಾಗಿದ್ದಾರೆ. ಕೃತಜ್ಞತಾ ಸಮರ್ಪಣೆ ನೆಪದಲ್ಲಿ ಚಾಮರಾಜನಗರದಲ್ಲಿ ಸಮಾರಂಭವನ್ನು ಆಯೋಜಿಸಲಾಗಿದೆ. ನೂತನ ಸಂಸದರಿಗೆ ಲೋಕಸಭಾ ಕ್ಷೇತ್ರದ ಮತದಾರರು ದಂಥೆ ಮಾಡಲಿಕ್ಕೆ ರಾಜಕೀಯ ಅಧಿಕಾರವನ್ನು ಕೊಟ್ಟಿದ್ದಾರೆ ಎಂದು ಟೀಕಿಸಿದರು.

ದಂಥೆ ನಡೆಸಲು ಅವರಿಗೆ ಜನರು ರಾಜಕೀಯ ಅಧಿಕಾರ ಕೊಟ್ಟಿದ್ದಾರೆ

ಸಮಾಜ ಕಲ್ಯಾಣ ಇಲಾಖೆಯಲ್ಲಿ ಪ.ಜಾತಿ/ಪ.ಪಂ ಸಮುದಾಯಗಳ ಜನಸಂಖ್ಯೆಗೆ ಅನುಗುಣವಾಗಿ ದಲಿತರ ಅಭಿವೃದ್ಧಿಗೆ ಬಳಕೆಯಾಗಬೇಕಿದ್ದ 25000 ಕೋಟಿ ಅನುದಾನವನ್ನು ಸಾಮಾನ್ಯ ವರ್ಗದ ಜನರೆಲ್ಲರೂ ಬಳಕೆ ಮಾಡುವ ಗ್ಯಾರಂಟಿ ಯೋಜನೆಗಳಿಗೆ ನೀಡಿರುವ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ಸಂವಿಧಾನ ಮತ್ತು ಅಂಬೇಡ್ಕರ್ ಅವರ ಹೆಸರೇಳುವ ನೈತಿಕತೆ ಮತ್ತು ಯೋಗ್ಯತೆ ಇಲ್ಲ. ಅವರೇನು ಹುಟ್ಟಿನಿಂದಲೇ ಶ್ರೀಮಂತರಲ್ಲ, ರಾಜಕಾರಣಕ್ಕೆ ಭತ್ತ ಬೆಳೆದು, ಕಬ್ಬು ಮಾರಿ ಹಣ ತಂದು ಹಾಕಿದವರಲ್ಲ. ಅಧಿಕಾರದಿಂದ ಹಣ ಮಾಡಿಕೊಂಡು ನಮ್ಮಂತವರ ಮೇಲೆ ಚುನಾವಣೆಯಲ್ಲಿ ಪ್ರಹಾರ ನಡೆಸುತ್ತಿದ್ದಾರೆ ಎಂದು ಹರಿಹಾಯ್ದರು.



ತಿ.ನರಸೀಪುರ ಪಟ್ಟಣದ ಬಿಜೆಪಿ ಕಛೇರಿಯಲ್ಲಿ ನಡೆದ ಕಾರ್ಯಕರ್ತರು ಹಾಗೂ ಮುಖಂಡರ ಸಭೆಯಲ್ಲಿ ಮಾಜಿ ಶಾಸಕ ಎಸ್.ಬಾಲರಾಜು ಮಾತನಾಡಿದರು.

ಸಿದ್ದರಾಮಯ್ಯ ಅವರ ಬಾಲ–ಬೆನ್ನು ಹಿಡಿದು ರಾಜಕೀಯ ಜೀವನ ಕಂಡುಕೊಂಡಿರುವ ಮಹದೇವಪ್ಪ ಅವರು ಈ ಭಾಗದ ದಲಿತ ನಾಯಕರಾಗಿದ್ದ ವಿ ಶ್ರೀನಿವಾಸ್ ಪ್ರಸಾದ್ ಅವರನ್ನು ರಾಜಕೀಯವಾಗಿ ಮೂಲೆಗುಂಪು ಮಾಡಿದ್ದಲ್ಲದೆ, ಮಾನಸಿಕ ಹಿಂಸೆಯನ್ನು ಕೊಟ್ಟು ಆರ್.ಧ್ರುವನಾರಾಯಣಗೂ ತೊಂದರೆ ಕೊಟ್ಟಿದ್ದಾರೆ ಎಂದು ಗಂಭೀರ ಆರೋಪವನ್ನು ಮಾಡಿದರು.

ಚುನಾವಣೆ ಆರಂಭದಿಂದಲೂ ನನ್ನ ವಿರುದ್ಧ ಅಪಪ್ರಚಾರವನ್ನು ಆರಂಭಿಸಿದರು. ಚಾಮರಾಜನಗರದಲ್ಲಿ ಬಿಜೆಪಿ ಗೆದ್ದರೆ, ಆರ್‌ಎಸ್‌ಎಸ್‌ನವರು ಬಂದು ಸಂವಿಧಾನವನ್ನು ಬದಲಾಯಿಸಿ ಬಿಡುತ್ತಾರೆ. ಕಾಂಗ್ರೆಸ್ ಜೊತೆ ಶಾಮೀಲಾಗಿದ್ದೇನೆ, ಉಪ್ಪಾರರು ಬಲಿಷ್ಠರು, ಅವರಿಗೇಕೆ ಮೀಸಲಾತಿ ಎಂಬಂತಹ ಸುಳ್ಳು ಸುದ್ದಿಗಳನ್ನು ನನ್ನ ಹೆಸರಿನಲ್ಲಿ ಸೃಷ್ಟಿಸಿ, ಸಾಮಾಜಿಕ ಜಾಲತಾಣಗಳಲ್ಲಿ ಹರಡುವ ಮೂಲಕ ನನ್ನನ್ನು ರಾಜಕೀಯವಾಗಿ ಸೋಲಿಸುವ ಷಡ್ಯಂತ್ರವನ್ನು ವ್ಯವಸ್ಥಿತವಾಗಿ ರೂಪಿಸಿದರು ಎಂದು ಆಕ್ರೋಶ ವ್ಯಕ್ತಪಡಿಸಿದರು.

ವಿಧಾನಪರಿಷತ್ ಮಾಜಿ ಸದಸ್ಯ ಸಿ.ರಮೇಶ್ ಮಾತನಾಡಿ, ಕಾಂಗ್ರೆಸ್ ಅಧಿಕಾರದಿಂದ ಗಳಿಸಿರುವ ಪಾಪದ ಹಣವನ್ನು ಬಳಕೆ ಮಾಡಿಕೊಂಡು ಕಳೆದ ಲೋಕಸಭಾ ಚುನಾವಣೆಯಲ್ಲಿ ಚಾಮರಾಜನಗರದಲ್ಲಿ ಗೆದ್ದಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಿಂತವರೆಲ್ಲರೂ ಗೆಲ್ಲಲು ಸಾಧ್ಯವಿಲ್ಲವಾದ್ದರಿಂದ ಬಿಜೆಪಿಗೆ ಸೋಲಾಗಿದೆ. ಸೋಲಿಗೆ ಕುಗ್ಗದೆ, ಜನರ ತೀರ್ಪನ್ನು ಸ್ವಾಗತಿಸುತ್ತೇವೆ. ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಸಜ್ಜಾಗಲು ಕಾರ್ಯಕರ್ತರು ಹಾಗೂ ಮುಖಂಡರೊಡನೆ ಪಕ್ಷದ ಸಂಘಟನೆಯ ಕೆಲಸವನ್ನು ಮುಂದುವರಿಸುತ್ತೇವೆ ಎಂದು ತಿಳಿಸಿದರು.

ಬಿಜೆಪಿಯ ಮುಖಂಡ, ನಿವೃತ್ತ ಶಸ್ತ್ರಚಿಕಿತ್ಸಕ ಡಾ.ರೇವಣ್ಣ ಮಾತನಾಡಿ, ಬಿಜೆಪಿ – ಜೆಡಿಎಸ್ ಮೈತ್ರಿಕೂಟ ರಾಜ್ಯದಲ್ಲಿ ಪ್ರಬಲವಾಗಿ ಸಂಘಟನೆ ಆಗುತ್ತಿದ್ದು, ಮುಂದಿನ ಸ್ಥಳೀಯ ಸಂಸ್ಥೆಗಳ ಚುನಾವಣೆ ಸೇರಿದಂತೆ ಸಾರ್ವತ್ರಿಕ ವಿಧಾನಸಭಾ ಚುನಾವಣೆಯಲ್ಲೂ ಬಿಜೆಪಿಯನ್ನು ಅಧಿಕಾರಕ್ಕೆ ತರಲು ತಳಮಟ್ಟದಿಂದ ಪಕ್ಷದ ಸಂಘಟನೆಯನ್ನು ಮಾಡುತ್ತೇವೆ. ಲೋಕಸಭಾ ಚುನಾವಣೆಯ ಫಲಿತಾಂಶದಲ್ಲಿ ಕ್ಷೇತ್ರದ ಜನರು ಮೈತ್ರಿಕೂಟದ ಅಭ್ಯರ್ಥಿಗೆ ಹೆಚ್ಚಿನ ಮತವನ್ನು ಕೊಟ್ಟು ನಮಗೆ ನೈತಿಕ ಸ್ಥೈರ್ಯವನ್ನು ತುಂಬಿದ್ದಾರೆ ಎಂದು ತಿಳಿಸಿದರು.

ಬಿಜೆಪಿ ರಾಜ್ಯ ಉಪಾಧ್ಯಕ್ಷ, ಮಾಜಿ ಸಚಿವ ಎನ್.ಮಹೇಶ್ ಮಾತನಾಡಿದರು. ಬಿಜೆಪಿ ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಕ್ಷೇತ್ರಾಧ್ಯಕ್ಷ ಶಿವಕುಮಾರ (ಸತ್ಯಪ್ಪ), ಜೆಡಿಎಸ್ ಕ್ಷೇತ್ರಾಧ್ಯಕ್ಷ ಸಿ.ಬಿ.ಹುಂಡಿ ಚಿನ್ನಸ್ವಾಮಿ, ಉಸ್ತುವಾರಿ ಹೆಳವರಹುಂಡಿ ಸಿದ್ದಪ್ಪ, ಸೋಸಲೆ ಮಹಾ ಶಕ್ತಿ ಕೇಂದ್ರದ ಅಧ್ಯಕ್ಷ ಪುಟ್ಟಸ್ವಾಮಿ, ಪುರಸಭಾ ಸದಸ್ಯ ಕಿರಣ್, ಮಾಜಿ ಸದಸ್ಯ ಎನ್. ಲೋಕೇಶ್, ದಾಸಯ್ಯ, ವೈದ್ಯ ಡಾ. ಮಲ್ಲಿಕಾರ್ಜುನಸ್ವಾಮಿ, ತಾ.ಪಂ ಮಾಜಿ ಸದಸ್ಯ ಬಸವರಾಜು, ಮುಖಂಡರಾದ ಕರೋಹಟ್ಟಿ ಮಹದೇವಯ್ಯ, ಎನ್.ಎಂ.ರಾಮಚಂದ್ರ, ಕಟ್ಟೆಪುರ ಸಿದ್ಧಪ್ಪ, , ಮೂಗೂರು ಸಿದ್ದರಾಜು, ಜಯಣ್ಣ, ಗೌಡ್ರು ಪ್ರಕಾಶ್ ಹಾಗೂ ಇನ್ನಿತರರು ಹಾಜರಿದ್ದರು.

ವಾಲ್ಮೀಕಿ ನಿಗಮ, ಮುಡಾ ಹಗರಣ ಸಂಬಂಧ
ವಿಧಾನಮಂಡಲದಲ್ಲಿ ಬಿಜೆಪಿ ಹೋರಾಟ

● ವಿಪಕ್ಷ ನಾಯಕ ಆರ್.ಅಶೋಕ್ ಮಾಹಿತಿ ● ನಿಲುವಳಿ ಸೂಚನೆ ಮಂಡನೆಗೂ ನಿರ್ಧಾರ

ಬೆಂಗಳೂರು, ಜು. 10(ಕೆಎಂಶಿ)– ವಾಲ್ಮೀಕಿ ಅಭಿವೃದ್ಧಿ ನಿಗಮ ಮತ್ತು ಮುಡಾ ಹಗರಣದ ವಿರುದ್ಧ ಬಿಜೆಪಿ ಹೋರಾಟ ಮುಂದುವರಿಸಿದ್ದು, ಸದನದಲ್ಲೂ ಈ ಬಗ್ಗೆ ಗಂಭೀರ ಚರ್ಚೆ ನಡೆಸಲಾಗುವುದು ಎಂದು ವಿಧಾನಸಭೆಯಲ್ಲಿನ ಪ್ರತಿಪಕ್ಷ ನಾಯಕ ಆರ್.ಅಶೋಕ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿನ ಭ್ರಷ್ಟಾಚಾರದ ವಿರುದ್ಧ ಹಾಗೂ ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರೇ ಭಾಗಿಯಾದ ಮುಡಾ ಹಗರಣ ಕುರಿತು ಮಾತನಾಡಲು ಸದನದಲ್ಲಿ ಬಿಜೆಪಿಯಿಂದ ನಿಲುವಳಿ ಸೂಚನೆ ಮಂಡಿಸಲಾಗುವುದು. ಜುಲೈ 15ರಿಂದ ನಡೆಯಲಿರುವ ವಿಧಾನಮಂಡಲದ ಅಧಿವೇಶನವನ್ನು ಇನ್ನೂ ಒಂದು ವಾರ ವಿಸ್ತರಣೆ ಮಾಡಲು ಆಗ್ರಹಿಸಲಾಗುವುದು ಎಂದರು.

ರಾಜ್ಯದಲ್ಲಿ ಝೀಕಾ ವೈರಸ್, ಡೆಂಗ್ಯೂ ರೋಗಗಳು ಹೆಚ್ಚಿದ್ದರೂ ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ. ಆರೋಗ್ಯ ತುರ್ತು ಪರಿಸ್ಥಿತಿ ಘೋಷಿಸಬೇಕೆಂದು ಆಗ್ರಹಿಸಿದರೂ ಅದರ ಬಗ್ಗೆ ಗಮನಹರಿಸಿಲ್ಲ. ಅಗತ್ಯ ಸಾಮಗ್ರಿಗಳ ಹಾಗೂ ಬಿತ್ತನೆ ಬೀಜಗಳ ದರ ಏರಿಕೆಯಿಂದಾಗಿ ರೈತರ ಆತ್ಮಹತ್ಯೆ ಪ್ರಕರಣಗಳು ಹೆಚ್ಚಿವೆ.

ರಾಜ್ಯದಲ್ಲಿ ಹಿಂದೂಗಳ ಮೇಲೆ ಹಲ್ಲೆಗಳು ನಡೆಯುತ್ತಿವೆ, ಇಲಾಖೆಗಳ ಅನುದಾನ ಕಡಿತ, 700 ಕೋಟಿ ರೂ. ಹಾಲು ಪ್ರೋತ್ಸಾಹ ಧನ ಬಾಕಿ ಮೊದಲಾದ ಸಮಸ್ಯೆಗಳು ಎದುರಾಗಿದ್ದು, ಆಡಳಿತಕ್ಕೆ ಬಂದ ಒಂದೇ ವರ್ಷದಲ್ಲಿ ಕಾಂಗ್ರೆಸ್ ಶಿಶುಪಾಲನಂತೆ ನೂರು ತಪ್ಪುಗಳನ್ನು ಮಾಡಿದೆ ಎಂದು ದೂರಿದರು.



ಆರ್.ಅಶೋಕ್

ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದಲ್ಲಿ ಕಾಂಗ್ರೆಸ್‌ನ ಯಾರೂ ಭಾಗಿಯಾಗಿಲ್ಲ ಎಂದು ಹೇಳಿಕೊಂಡಿತ್ತು. ಆದರೀಗ ಜಾರಿ ನಿರ್ದೇಶನಾಲಯ ದಾಳಿ ಮಾಡಿದೆ, ಎಸ್‌ಐಟಿ ತನಿಖೆ ನೆಪದಲ್ಲಿ ಎಲ್ಲರಿಗೂ ಕ್ಲೀನ್‌ಚಿಟ್ ನೀಡುವ ಪ್ರಯತ್ನ ನಡೆದಿದೆ. ಇದರಲ್ಲಿ ಇನ್ನೂ ಮೂವರು ಸಚಿವರು ಶಾಮೀಲಾಗಿದ್ದಾರೆ. ನಿಗಮದ ಅಧ್ಯಕ್ಷರೇ ಖಾಸಗಿ ಹೋಟೆಲ್ ಒಂದರಲ್ಲಿ ಸಭೆ ಸೇರಿದ ಬಗ್ಗೆ ಹೇಳಿಕೆ ನೀಡಿದ್ದಾರೆ. ಈ ಕುರಿತ ಆಡಿಯೋದಲ್ಲಿ ಎಲ್ಲವೂ ಬಹಿರಂಗಗೊಂಡಿದೆ ಎಂದರು.

ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಲೂಟಿಯಾದ 187 ಕೋಟಿ ರೂ. ದಲಿತ ಕಾಲೋನಿಗೆ ರಸ್ತೆ, ಮನೆ ನಿರ್ಮಿಸಲು ಮೀಸಲಾಗಿತ್ತು, ದಲಿತರಿಗೆ ಮೀಸಲಿಟ್ಟ ಹಣ ಗ್ಯಾರಂಟಿಗೆ ಬಳಸಿದ್ದು, ಇದು ದೊಡ್ಡ ಲೂಟಿಯ ಪ್ರಯತ್ನ, ಇದರ ವಿರುದ್ಧವೂ ಹೋರಾಟ ನಡೆಸಲಾಗುವುದು.

ರಾಮನಗರ ಜಿಲ್ಲೆಗೆ ಸ್ಥಳ ಮಹಿಮೆ ಇದೆ. ಈ ಹೆಸರನ್ನು ಕಾಂಗ್ರೆಸ್ ನಾಯಕರು ಇಟ್ಟಿಲ್ಲ. ಇದನ್ನು ಬದಲಿಸಲು ಅವರಿಗೆ ಯಾವುದೇ ಹಕ್ಕು ಇಲ್ಲ. ಕರ್ನಾಟಕದಲ್ಲಿ ರಾಮ–ಕೃಷ್ಣ ಎಂಬ ಊರುಗಳ ಹೆಸರುಗಳನ್ನೂ ಬದಲಾಯಿಸುತ್ತಾರಾ, ಶೋಲೆ ಸಿನಿಮಾ ಚಿತ್ರೀಕರಣವಾದಾಗಲೂ ಆ ಪ್ರದೇಶಕ್ಕೆ ರಾಮಘಡ ಎಂಬ ಹೆಸರನ್ನೇ ಇಟ್ಟಿದ್ದರು.

ಹೆಸರು ಬದಲಾಯಿಸುವ ಬದಲು ಬೆಂಗಳೂರು ನಗರದ ಅಭಿವೃದ್ಧಿಗೆ ಹಣ ಬಿಡುಗಡೆ ಮಾಡಲಿ.

ರಾಮನ ಮೇಲೆ ದ್ವೇಷ ಇದ್ದರೆ ಬೇರೆ ದಾರಿ ನೋಡಿಕೊಳ್ಳಲಿ. ಆಯಾಯ ಜಿಲ್ಲೆಗೆ ಅದರದ್ದೇ ಆದ ಘನತೆ ಇದೆ, ಹುಚ್ಚರಂತೆ, ತುಘಲಕ್‌ನಂತೆ ಎಲ್ಲವನ್ನೂ ಬೆಂಗಳೂರಿಗೆ ಸೇರಿಸಬಾರದು ಎಂದು ಎಚ್ಚರಿಕೆ ನೀಡಿದರು.

ಕನ್ನಡ ಪರ ಹೋರಾಟಗಾರರ ಸೋಗಿನಲ್ಲಿ ಪೆಟ್ರೋಲ್ ಬಂಕ್‌ನಲ್ಲಿ ಗಲಾಟೆ

ಕ್ರಮಕ್ಕೆ ಪೊಲೀಸರಿಗೆ ಮನವಿ

ಮೈಸೂರು, ಜು.10(ಜಿಎ)–ಕನ್ನಡ ಪರ ಹೋರಾಟಗಾರರ ಸೋಗಿನಲ್ಲಿ ಪೆಟ್ರೋಲ್ ಬಂಕ್‌ಗಳಿಗೆ ಬಂದು ಗಲಾಟೆ ಮಾಡುವವರ ವಿರುದ್ಧ ಕ್ರಮಕೈಗೊಳ್ಳುವಂತೆ ಮೈಸೂರು, ಚಾಮರಾಜನಗರದ ಇಂಡಿಯನ್ ಆಯಿಲ್ ಡೀಲರ್ ಅಸೋಸಿಯೇಷನ್ ವತಿಯಿಂದ ನಗರ ಮಂಡಿ ಪೊಲೀಸ್ ಠಾಣೆಗೆ ಮನವಿ ಸಲ್ಲಿಸಲಾಯಿತು.



ಮೈಸೂರು, ಚಾಮರಾಜನಗರದ ಇಂಡಿಯನ್ ಆಯಿಲ್ ಡೀಲರ್ ಅಸೋಸಿಯೇಷನ್ ವತಿಯಿಂದ ನಗರ ಮಂಡಿ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್‌ಗೆ ಮನವಿ ಸಲ್ಲಿಸಲಾಯಿತು.

ಕಳೆದ ಸೋಮವಾರ(ಜು.8) ಕನ್ನಡ ಸಂಘಟನೆಯ ಯುವಕರು ಎಂದು ಹೇಳಿಕೊಂಡು ಸುಮಾರು 15 ಮಂದಿ ನಗರದ ಆರ್‌ಎಂಸಿ ವೃತ್ತದ ಬಳಿ ಇರುವ ಬಿ ಅಂಡ್ ಕೆ ಏಜೆನ್ಸೀಸ್‌ನ ಪೆಟ್ರೋಲ್ ಬಂಕ್‌ಗೆ ಭೇಟಿ ನೀಡಿ, ನೀವು ವಿತರಿಸುತ್ತಿರುವ ಪೆಟ್ರೋಲ್ ಪ್ರಮಾಣ ಕಡಿಮೆ ಇದ್ದು, ಪರೀಕ್ಷಿಸಬೇಕೆಂದು ಬಂಕ್ ಸಿಬ್ಬಂದಿಯೊಂದಿಗೆ ವಾಗ್ವಾದ ನಡೆಸಿ, ಇತರ ಗ್ರಾಹಕರಿಗೂ ಪೆಟ್ರೋಲ್ ನೀಡಲು ತಡೆಯೊಡ್ಡಿದ್ದಾರೆ. ಜೊತೆಗೆ ಮೊಬೈಲ್ ನಿಷೇಧಿತ ಸ್ಥಳದಲ್ಲಿ ವಿಡಿಯೋ ಚಿತ್ರೀಕರಣ ಮಾಡಿಕೊಂಡು ಆತಂಕ ಸೃಷ್ಟಿಸಿದ್ದಾರೆ.

ತೂಕ ಮತ್ತು ಅಳತೆ ಇಲಾಖೆಯ ಮಾರ್ಗದರ್ಶನದಂತೆ ನಾವು 5 ಲೀಟರ್ ಮೆಶರ್‌ನಲ್ಲಿ ಅಳತೆ ಮಾಡಿ ಗ್ರಾಹಕರಿಗೆ ತೋರಿಸುವ ಅವಕಾಶವಿದೆ. ಪೊಲೀಸ್ ಇಲಾಖೆಯಿಂದ ಪ್ಲಾಸ್ಟಿಕ್ ಬಾಟಲ್‌ಗಳಲ್ಲಿ ಪೆಟ್ರೋಲ್ ವಿತರಿಸದಂತೆ ಸೂಚನೆ ಇದ್ದರೂ ಹುಡುಗರು ಸಿಬ್ಬಂದಿಗಳಿಗೆ ನಿಂದಿಸಿ ಬಾಟಲ್‌ಗೆ ಪೆಟ್ರೋಲ್ ಹಾಕುವಂತೆ ಒತ್ತಾಯಿಸಿದ್ದಾರೆ. ನಂತರ ಪೆಟ್ರೋಲ್ ಸರಿಯಾದ ಪ್ರಮಾಣದಲ್ಲಿ ವಿತರಿಸಲಾಗುತ್ತಿದೆ ಎಂಬ ವಿಷಯ ತಿಳಿಯುತ್ತಿದ್ದಂತೆ 15 ಮಂದಿಯೂ ಒಬ್ಬೊಬ್ಬರಾಗಿ ಕಾಲ್ಕಿತ್ತಿದ್ದಾರೆ.

ಈ ಹುಡುಗರ ಉದ್ದೇಶವೇ ಬೇರೆಯಾಗಿದ್ದು, ತಾವು ಕೂಲಂಕಷವಾಗಿ ವಿಚಾರಣೆ ಮಾಡಿ ಮತ್ತು ಈ ರೀತಿ ಘಟನೆ ಸಂಭವಿಸದಂತೆ ಮುಂಜಾಗ್ರತೆ ಕ್ರಮ ವಹಿಸಬೇಕಾಗಿ ಮನವಿ ಮಾಡಿದರು. ಈ ವೇಳೆ ಅಸೋಸಿಯೇಷನ್‌ನ ಅಧ್ಯಕ್ಷ ಎಸ್.ಆರ್.ಪಾಟೀಲ್ ಸೇರಿದಂತೆ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಅರ್ಜಿ ಆಹ್ವಾನ

ಮೈಸೂರು, ಜು.10–ಶ್ರೀ ದುರ್ಗಾ ಫೌಂಡೇಶನ್ 2023– 24ನೇ ಸಾಲಿನಲ್ಲಿ ರಾಜ್ಯ ಮಟ್ಟದಲ್ಲಿ ವಿಶೇಷ ಸಾಧನೆ ಮಾಡಿದ ಸಾಧಕರಿಗೆ ರಾಜ್ಯಮಟ್ಟದ ಕರ್ನಾಟಕ ಸೇವಾರತ್ನ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಶಿಕ್ಷಣ, ಕಲೆ, ಸಾಹಿತ್ಯ, ಸಂಗೀತ, ಕ್ರೀಡೆ, ಸಾಂಸ್ಕೃತಿಕ, ಬಹುಮುಖ ಪ್ರತಿಭೆ, ಚಿತ್ರಕಲೆ ಹಾಗೂ ವಿಜ್ಞಾನ ಮತ್ತು ಸಂಶೋಧನೆ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರು, ಅರ್ಹರು ಪ್ರಶಸ್ತಿಗೆ ತಮ್ಮ ಸ್ವಯಂ ದೃಢೀಕೃತ ನಕಲು ದಾಖಲೆಗಳು ಹಾಗೂ ಸ್ವವಿವರದೊಂದಿಗೆ ಜುಲೈ 25 ರೊಳಗೆ 8971389539 ವಾಟ್ಸಪ್ ಮೂಲಕ ಅರ್ಜಿ ಸಲ್ಲಿಸಬೇಕು.

ಜು.29 ಬೆಳಗ್ಗೆ 11 ಗಂಟೆಗೆ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದ, ನಯನ ಸಭಾಂಗಣದಲ್ಲಿ ಕರ್ನಾಟಕ ಸೇವಾರತ್ನ ಪ್ರಶಸ್ತಿ 2024 ರಾಜ್ಯ ಮಟ್ಟದ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದು ಶ್ರೀದುರ್ಗಾ ಫೌಂಡೇಶನ್ ಅಧ್ಯಕ್ಷೆ ರೇಖಾ ಶ್ರೀನಿವಾಸ್ ತಿಳಿಸಿದ್ದಾರೆ

ಮಹದೇವಪುರದಲ್ಲಿ ಅಶುಚಿತ್ವ ಖಂಡಿಸಿ
ಶ್ರೀರಾಂಪುರ ಪ.ಪಂ. ಎದುರು ಪ್ರತಿಭಟನೆ



ಮಹದೇವಪುರ ಬಡಾವಣೆಯಲ್ಲಿ ಅಶುಚಿತ್ವ ತಾಂಡವವಾಡುತ್ತಿದೆ ಎಂದು ಖಂಡಿಸಿ ಮೈಸೂರು ಕನ್ನಡ ವೇದಿಕೆ ವತಿಯಿಂದ ಶ್ರೀರಾಂಪುರ ಪಟ್ಟಣ ಪಂಚಾಯಿತಿ ಕಾರ್ಯಾಲಯದ ಎದುರು ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಜು.10(ಜಿಎ)– ಮೈಸೂರು–ಮಾನಂದವಾಡಿ ರಸ್ತೆಯಲ್ಲಿರುವ ಮಹದೇವಪುರ ಬಡಾವಣೆಯಲ್ಲಿ ಅಶುಚಿತ್ವ ತಾಂಡವವಾಡುತ್ತಿದ್ದು, ಜನಪ್ರತಿನಿಧಿಗಳು, ಅಧಿಕಾರಿಗಳು ಸೂಕ್ತ ಕ್ರಮಗೊಳ್ಳುತ್ತಿಲ್ಲ ಎಂದು ಖಂಡಿಸಿ ಮೈಸೂರು ಕನ್ನಡ ವೇದಿಕೆ ವತಿಯಿಂದ ಶ್ರೀರಾಂಪುರ ಪಟ್ಟಣ ಪಂಚಾಯಿತಿ ಕಾರ್ಯಾಲಯದ ಎದುರು ಪ್ರತಿಭಟನೆ ನಡೆಸಲಾಯಿತು.

ರಾಜ್ಯದೆಲ್ಲೆಡೆ ಡೆಂಗ್ಯೂ ಹೆಚ್ಚಾಗುತ್ತಿದೆ. ಮಹದೇವಪುರ ಬಡಾವಣೆಯಲ್ಲಿ ಅಶುಚಿತ್ವ ತಾಂಡವಾಡುತ್ತಿದ್ದು, ಡೆಂಗ್ಯೂಗೆ ಆಹ್ವಾನ ನೀಡುತ್ತಿದೆ. ಬಡಾವಣೆಯ ರಸ್ತೆಗಳು ಗುಂಡಿ ಬಿದ್ದು ಕೆಸರು ಗದ್ದೆಯಂತಾಗಿವೆ. ಚರಂಡಿಗಳು ಗಬ್ಬು ನಾರುತ್ತಿವೆ. ಸ್ವಚ್ಛತೆಗೆ ಆದ್ಯತೆ ನೀಡಬೇಕಾದ ಅಧಿಕಾರಿಗಳು, ಜನಪ್ರತಿನಿಧಿಗಳು ಇತ್ತ ಗಮನಹರಿಸುತ್ತಿಲ್ಲ. ಪಟ್ಟಣ ಪಂಚಾಯಿತಿ ಖಾತೆ ಮಾಡಿಕೊಟ್ಟು ಹಣ ಲೂಟಿ ಮಾಡುವುದರಲ್ಲಿ ನಿರತವಾಗಿದೆ ಎಂದು ಕಿಡಿಕಾರಿದರು.

ಮಹದೇವಪುರ ಬಡಾವಣೆ ಸುಮಾರು 50 ವರ್ಷಗಳ ರೆವಿನ್ಯೂ ಬಡಾವಣೆಯಾಗಿದೆ. ಹೀಗಾಗಿ ಯಾರೂ ಸಹ ಇತ್ತ ಗಮನಹರಿಸುತ್ತಿಲ್ಲ. ಹೆಚ್ಚಾಗಿ ಬಡವರು, ಮಧ್ಯಮ ವರ್ಗದವರು ವಾಸವಿದ್ದಾರೆ. ಇಲ್ಲಿನ ರಸ್ತೆಗಳಲ್ಲಿ ದಿನನಿತ್ಯ ಶಾಲಾ ಮಕ್ಕಳು, ಕಾರ್ಮಿಕರು ಹೆಚ್ಚು ಓಡಾಡುತ್ತಾರೆ. ಎ,ಬಿ ಬ್ಲಾಕ್‌ನಲ್ಲಿ ನೀರಿನ ಪೈಪ್ ಅಳವಡಿಸಲು ಗುಂಡಿಗಳನ್ನು ತೋಡಿ ಹಳ್ಳವಾಗಿದೆ. ಕೆಲವು ಡ್ರೈನೇಜ್ ಛೇಂಬರ್‌ಗಳು ಕುಸಿದಿವೆ. ಅನೇಕ ಬಾರಿ ದೂರು ನೀಡಿದರೂ ಇದಕ್ಕೆ ಪರಿಹಾರ ದೊರಕುತ್ತಿಲ್ಲ. ಸೊಳ್ಳೆಗಳ ಕಾಟದಿಂದ ಜನ ಬೇಸತ್ತು ಹೋಗಿದ್ದಾರೆ. ಇದರಿಂದ ಡೆಂಗ್ಯೂ ಆಗುವ ಸಂಭವ ಹೆಚ್ಚಾಗಿದೆ. ಈ ಹಿಂದೆ ಡೆಂಗ್ಯೂ ಜ್ವರದಿಂದ 4 ಮಂದಿ ಮೃತಪಟ್ಟಿದ್ದಾರೆ. ಅಲ್ಲದೆ ಇಲ್ಲಿ ಯಾವುದೇ ಸ್ಥಳೀಯ ಚುನಾವಣೆ ನಡೆಯದೆ ದಿಕ್ಕು ದೆಸೆಯಿಲ್ಲದ ಬಡಾವಣೆಯಾಗಿದೆ. ಹೀಗಾಗಿ ಜನಪ್ರತಿನಿಧಿಗಳು, ಅಧಿಕಾರಿಗಳು ಕೂಡಲೇ ಸೂಕ್ತಕ್ರಮ ವಹಿಸಿ ಬಡಾವಣೆಯನ್ನು ಡೆಂಗ್ಯೂ ಮುಕ್ತ ಮಾಡಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ಕಪಿನಿಗೌಡ, ಶಿವಪ್ಪ, ನಾಗರಾಜು, ಕುಮಾರ್, ಕಿರಣ್‌ಕುಮಾರ್, ಚಂದ್ರಶೇಖರ್, ತ್ಯಾಗರಾಜು, ಸ್ವಾಮಿ, ಬೀಡಾಬಾಬು, ಗೋವಿಂದರಾಜು, ಚೆಲುವರಾಜು, ಬಸಪ್ಪ, ಮಧುವನ ಚಂದ್ರು, ಟ್ಯೂಬ್ ಮಹದೇವ್ ಪಾಲ್ಗೊಂಡಿದ್ದರು.

ಪ್ರಜ್ವಲ್ ವಿರುದ್ಧದ ಪ್ರಕರಣ: ಭವಾನಿ ರೇವಣ್ಣಗೆ ಸುಪ್ರೀಂ ನೋಟಿಸ್

ಬೆಂಗಳೂರು, ಜು.10– ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಲೈಂಗಿಕ ದೌರ್ಜನ್ಯ ಮತ್ತು ಅತ್ಯಾಚಾರ ಆರೋಪದ ಪ್ರಕರಣದಲ್ಲಿ ಸಂತ್ರಸ್ತೆಯೊಬ್ಬರ ಅಪಹರಣದ ಆರೋಪಕ್ಕೆ ಗುರಿಯಾಗಿರುವ ಭವಾನಿ ರೇವಣ್ಣ ಅವರಿಗೆ ಸುಪ್ರೀಂ ಕೋರ್ಟ್ ನೋಟಿಸ್ ಜಾರಿ ಮಾಡಿದೆ.



ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಭವಾನಿ ರೇವಣ್ಣ ಅವರಿಗೆ ಹೈಕೋರ್ಟ್ ನಿರೀಕ್ಷಣಾ ಜಾಮೀನು ಮಂಜೂರು ಮಾಡಿತ್ತು. ಆದರೆ ನಿರೀಕ್ಷಣಾ ಜಾಮೀನು ರದ್ದುಗೊಳಿಸಲು ಕೋರಿ ಎಸ್‌ಐಟಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು. ಬುಧವಾರ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಉಜ್ಜಲ್ ಭುಯಾನ್ ಅವರನ್ನೊಳಗೊಂಡ ಪೀಠವು ಕರ್ನಾಟಕ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಕರ್ನಾಟಕ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿಯ ಮೇಲೆ ಭವಾನಿ ರೇವಣ್ಣ ಅವರಿಗೆ ನೋಟಿಸ್ ನೀಡಿದೆ.

ಹೈಕೋರ್ಟ್ ತನ್ನ ಆದೇಶದಲ್ಲಿ ನೀಡಿರುವ ಕಾರಣಗಳನ್ನು ಗಮನಿಸಿದ ನ್ಯಾಯಾಲಯ ರಾಜಕೀಯ ಕಾರಣಗಳನ್ನು ಬಿಟ್ಟುಬಿಡುವಂತೆ ಹೇಳಿದೆ. ಓಡಿ ಹೋಗಿ ಕೊನೆಗೆ ಸಿಕ್ಕಿಬಿದ್ದ ಮಗನ ವಿರುದ್ಧದ ಗಂಭೀರ ಆರೋಪಗಳನ್ನೂ ನ್ಯಾಯಾಲಯ ಗಮನಿಸಿದೆ. ಆ ನಂತರ, ಅಂತಹ ಆರೋಪಗಳಲ್ಲಿ, ತನ್ನ ಮಗ ಮಾಡಿದ ಅಪರಾಧಕ್ಕೆ ಕುಮ್ಮಕ್ಕು ನೀಡುವಲ್ಲಿ ತಾಯಿ ಯಾವ ರೀತಿಯ ಪಾತ್ರವನ್ನು ವಹಿಸಿದ್ದಾಳೆ ಎಂದು ನ್ಯಾಯಾಲಯ ಪ್ರಶ್ನಿಸಿದೆ.

ಕಾರ್ಮಿಕರ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಸಿಐಟಿಯು ಪ್ರತಿಭಟನೆ



ಕಾರ್ಮಿಕರ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್(ಸಿಐಟಿಯು) ಸದಸ್ಯರು ಪುರಭವನದ ಮುಂಭಾಗ ಬುಧವಾರ ಪ್ರತಿಭಟನೆ ನಡೆಸಿದರು.

ಮೈಸೂರು, ಜು.10(ಜಿಎ)– ಕಾರ್ಮಿಕರ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್(ಸಿಐಟಿಯು) ಸದಸ್ಯರು ಪುರಭವನದ ಮುಂಭಾಗ ಬುಧವಾರ ಪ್ರತಿಭಟನೆ ನಡೆಸಿದರು.

ಅಗತ್ಯ ವಸ್ತುಗಳ ಬೆಲೆಯೇರಿಕೆ ನಿಯಂತ್ರಿಸಬೇಕು. ಶ್ರೀಮಂತರ ಮೇಲಿನ ತೆರಿಗೆ ಹೆಚ್ಚಿಸಿ, ಬಡವರಿಗೆ ಬದುಕಲು ಅವಕಾಶ ಕಲ್ಪಿಸುವ ಯೋಜನೆ ಜಾರಿಗೊಳಿಸಬೇಕು. ರೈತ ವಿರೋಧಿ ಕೃಷಿ ಕಾನೂನು ವಾಪಸ್ ಪಡೆಯಬೇಕು. ಕೃಷಿ ಬೆಲೆಗಳಿಗೆ ಲಾಭದಾಯಕ ಬೆಂಬಲ ಬೆಲೆ ಘೋಷಿಸಿ ರೈತಪರವಾದ ನಿಲುವು ಹೊಂದಬೇಕು ಎಂದು ಒತ್ತಾಯಿಸಿದರು.

ನಾಲ್ಕು ಕಾರ್ಮಿಕ ಸಂಹಿತೆ ಹಿಂಪಡೆಯಬೇಕು. ಸಾರ್ವಜನಿಕ ಕ್ಷೇತ್ರದ ಖಾಸಗೀಕರಣ ಕೈಬಿಡಬೇಕು. ಶಿಕ್ಷಣವನ್ನು ದುಬಾರಿಗೊಳಿಸುವ ಹಾಗೂ ಅವೈಜ್ಞಾನಿಕ ಹೊಸ ಶಿಕ್ಷಣ ನೀತಿಯನ್ನು ಜಾರಿಗೊಳಿಸಬಾರದು. ಕಾರ್ಮಿಕರ ಕೆಲಸದ ಅವಧಿಯನ್ನು ವಾರಕ್ಕೆ 36 ಗಂಟೆ ಹಾಗೂ ದಿನದ ಪಾಳಿಯನ್ನು ಮಿತಿಗೊಳಿಸಿ, ಉದ್ಯೋಗ ಸೃಷ್ಟಿಗೆ ಆದ್ಯತೆ ನೀಡಬೇಕು ಎಂದು ಆಗ್ರಹಿಸಿದರು. ಕಾರ್ಮಿಕ ಸಂಘಟನೆಗಳಿಗೆ ಕಡ್ಡಾಯ ಮಾನ್ಯತೆ ನೀಡುವ ಕಾನೂನು ಜಾರಿಗೆ ಬರಬೇಕು. ಇಎಸ್‌ಐ, ಇಪಿಎಫ್, ಗ್ರಾಚ್ಯುಟಿ, ಬೋನಸ್ ಕಾಯಿದೆಯಲ್ಲಿ ವಿಧಿಸಿರುವ ವೇತನದ ಮಿತಿಯನ್ನು ಹಿಂಪಡೆಯಬೇಕು. ಹೊಸ ಪಿಂಚಣಿ ಕಾಯ್ದೆಯನ್ನು ವಾಪಸ್ ಪಡೆದು ಹಳೆ ಪಿಂಚಣಿ ಯೋಜನೆಯನ್ನೇ ಮುಂದುವರೆಸಬೇಕು. ಸಾರಿಗೆ ಕ್ಷೇತ್ರದಲ್ಲಿ ದುಡಿಯುತ್ತಿರುವವರಿಗೆ ಕಲ್ಯಾಣ ಮಂಡಳಿ ರೂಪಿಸಿ. ಕಾರ್ಮಿಕ ಕಾಯ್ದೆಗಳಿಂದ ಐಟಿ ಮತ್ತು ಐಟಿಇಎಸ್‌ಗೆ ವಿನಾಯಿತಿ ನೀಡುವ ಯೋಜನೆ ರದ್ದುಗೊಳಿಸಿ ಎಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಜಿಲ್ಲಾ ಅಧ್ಯಕ್ಷ ಜಿ.ಜಯರಾಂ, ಪ್ರಧಾನ ಕಾರ್ಯದರ್ಶಿ ಬಾಲಾಜಿ ರಾವ್,ಮುಖಂಡರಾದ ಲತಾ, ಬಸವಯ್ಯ, ಚನ್ನಕೇಶವ, ಬಲರಾಂ, ಸುಬ್ರಹ್ಮಣ್ಯ, ಚಂದ್ರಶೇಖರ್ ಮತ್ತಿತರರು ಪಾಲ್ಗೊಂಡಿದ್ದರು.

ಉತ್ತಮ ಪರಿಸರವಿಲ್ಲದೆ ಜನರಿಗೆ ಉಳಿಗಾಲವಿಲ್ಲ

ಹಿರಿಯ ಸಾಹಿತಿ ಬನ್ನೂರು ರಾಜು ಅಭಿಮತ

ಮೈಸೂರು, ಜು. 10–ಸಕಲ ಜೀವಕ್ಕೂ, ಜೀವನಕ್ಕೂ ಪರಿಸರವೇ ಜೀವಧಾತುವಾಗಿದ್ದು, ಸ್ವಚ್ಛ ಪರಿಸರವೇ ಸರ್ವರ ಸಂಪತ್ತಾಗಿದೆ. ಇಂದಿನ ಸಂದರ್ಭದಲ್ಲಿ ತುರ್ತಾಗಿ ಮಾನವ ಕುಲ ಜಾಗೃತಿಗೊಂಡು ಪರಿಸರವನ್ನು ಉಳಿಸಿಕೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಜಗತ್ತು ಆಪತ್ತಿನತ್ತ ತಲುಪುತ್ತದೆಂದು ಪತ್ರಕರ್ತರೂ ಆದ ಸಾಹಿತಿ ಬನ್ನೂರು ಕೆ. ರಾಜು ಅಭಿಪ್ರಾಯಪಟ್ಟರು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಧರ್ಮಪ್ರಕಾಶ ಡಿ.ಬನುಮಯ್ಯ ಬಾಲಕರ ಪ್ರೌಢಶಾಲೆಯಲ್ಲಿ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು ಮೈಸೂರು ಜಿಲ್ಲಾ ಘಟಕದಿಂದ ಆಯೋಜಿಸಿದ್ದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಅವರು, ಪ್ರಸ್ತುತ ದಿನಗಳಲ್ಲಿ ಪ್ರತಿಯೊಬ್ಬರು ಅದರಲ್ಲೂ ವಿಶೇಷವಾಗಿ ವಿದ್ಯಾರ್ಥಿಗಳು ಹಾಗೂ ಯುವಜನರು ಪರಿಸರದ ಮಹತ್ವ ತಿಳಿದು ತಾವು ಜೀವಿಸುತ್ತಿರುವ ಪರಿಸರಕ್ಕೆ ಆಗುತ್ತಿರುವ ಹಾನಿಯನ್ನು ಅರಿತು ಅದರ ಸಂರಕ್ಷಣೆಗೆ ಮುಂದಾಗಬೇಕೆಂದರು.



ಡಿ.ಬನುಮಯ್ಯ ಬಾಲಕರ ಪ್ರೌಢಶಾಲೆಯಲ್ಲಿ ನಡೆದ ಅಂತರರಾಷ್ಟ್ರೀಯ ಪರಿಸರ ದಿನಾಚರಣೆಯಲ್ಲಿ ಸಾಹಿತಿ ಬನ್ನೂರು ಕೆ.ರಾಜು ಮಾತನಾಡಿದರು. ವಿಜ್ಞಾನ ಪರಿಷತ್ತಿನ ಸಂಚಾಲಕ ಅನಂತರಾಮು, ಮಹೇಶ್, ಲಿಂಗರಾಜು, ಗೋವಿಂದರಾಜು ಇದ್ದಾರೆ.

ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಮೈಸೂರು ನಗರ ಸಂಚಾಲಕ ಹಾಗೂ ವಿಜ್ಞಾನ ಲೇಖಕ ಆರ್.ಅನಂತರಾಮು ಮಾತನಾಡಿ, ಕೆ.ಎಂ.ಮುನ್ಷಿಯವರು ಕೇಂದ್ರ ಸಚಿವರಾಗಿದ್ದ ಕಾಲದಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ಪ್ರಾರಂಭ ಮಾಡಿದರು. ಅರಣ್ಯ ನಾಶವನ್ನು ತಡೆಗಟ್ಟುವುದು, ಅರಣ್ಯ ಪೋಷಣೆ ಮಾಡುವುದು ಒಳಗೊಂಡಂತೆ 1972ರಿಂದ ವಿವಿಧ ಯೋಜನೆಗಳನ್ನು ರೂಪಿಸಿ ಸಾಮಾನ್ಯ ಜನರಿಗೆ ತಿಳಿಸುವಂತಹ ಕಾರ್ಯಕ್ರಮ ಇದಾಗಿತ್ತು.

ಅಂದು ಅದನ್ನು ಪ್ರಕೃತಿ ಉತ್ಸವ ಅಥವಾ ವನಮಹೋತ್ಸವ ಎಂದು ಕರೆಯಲಾಗಿತ್ತು. ಅಂದು ಸಸಿಗಳನ್ನು ಪೋಷಿಸುವ ಮೂಲಕ ವೃಕ್ಷ ಸುರಕ್ಷತೆಗೆ ಮಾನ್ಯತೆ, ಗೌರವ ನೀಡುವ ಕಾರ್ಯಕ್ರಮ ಇದಾಗಿತ್ತು. ನಮ್ಮ ಪರಿಸರವನ್ನು ದೇಶದ ಸಮೃದ್ಧಿಗಾಗಿ ಬಳಸಿ ಭವಿಷ್ಯಕ್ಕಾಗಿ ಉಳಿಸಿ ಎಂದು ಕರೆ ನೀಡಿದ್ದರೆಂದ ಅನಂತರಾಮು ಅವರು, ಮೊದಲು ನಮ್ಮ ಕಾಲ ಬುಡದಲ್ಲೇ ನಮ್ಮ ಸುತ್ತಲೂ ಇರುವ ಪರಿಸರವನ್ನು ಸ್ವಚ್ಛಗೊಳಿಸುವ ಮತ್ತು ಗಿಡಮರ ನೆಟ್ಟು ಪರಿಸರವನ್ನು ಹಸಿರಾಗಿಸುವ, ಉಸಿರಾಗಿಸುವ ಕಾರ್ಯ ಮಾಡಬೇಕು ಎಂದು ಕರೆ ನೀಡಿದರು.

ಶಾಲೆ ಮುಖ್ಯ ಶಿಕ್ಷಕ ಜಿ.ಎಸ್.ಕೃಪಾಶಂಕರ್ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶಿಕ್ಷಕರಾದ ಮಹೇಶ್, ಲಿಂಗರಾಜು, ಗೋವಿಂದರಾಜು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ರಕ್ತಂ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಮಹಾರಾಜ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಕಲ್ಕಿ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಜಿಗರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕಲ್ಕಿ (ಕ)	4 ಪ್ರದರ್ಶನಗಳು
ರಾಜಕಮಲ್	
ಕಿಲ್ (ಹಿಂ)	4 ಪ್ರದರ್ಶನಗಳು
ಸಂಗಂ	
ಕಾಡಾಡಿ (ಕ)	4 ಪ್ರದರ್ಶನಗಳು
ಲಿಡೋ	
ಜಿಗರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಗರುಡನ್ (ತ)	4 ಪ್ರದರ್ಶನಗಳು
ಪ್ರಭಾ	
ಕಾಗದ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಡೆಸ್ಪಿಕಬಲ್ ಮಿ 4 (3ಡಿ) (ಇಂ): ಬೆ.11ಕ್ಕೆ, ಸಂ.4.30ಕ್ಕೆ, ಕಲ್ಕಿ 2898 ಎಡಿ (ಕ): ಮ.1ಕ್ಕೆ, ಸಂ.6.45ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 2	ಲವ್ ಲಿ (ಕ): ಬೆ.10.35ಕ್ಕೆ, ಡೆಸ್ಪಿಕಬಲ್ ಮಿ 4 (3ಡಿ) (ಇಂ): ಮ.1.45ಕ್ಕೆ, ಕಲ್ಕಿ 2898 ಎಡಿ(3ಡಿ) (ತೆ): ಸಂ.4.05ಕ್ಕೆ, ಕಿಲ್ (ಹಿಂ): ರಾ.7.35ಕ್ಕೆ, ರಾ.9.55ಕ್ಕೆ.
ಸ್ಕ್ರೀನ್ 3	ಕಲ್ಕಿ 2898 ಎಡಿ (3ಡಿ) (ತೆ): ಬೆ.11.45ಕ್ಕೆ, ಕಲ್ಕಿ 2898 ಎಡಿ (ಕ): ಮ.3.15ಕ್ಕೆ, ಕಲ್ಕಿ 2898 ಎಡಿ (3ಡಿ) (ಹಿಂ): ಸಂ.6.45ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 4	ಕಿಲ್ (ಹಿಂ): ಬೆ.11, ಕಲ್ಕಿ 2898 ಎಡಿ (3ಡಿ) (ತೆ): ಮ.1.15ಕ್ಕೆ, ಸಂ.6.40ಕ್ಕೆ, ರಾ.10.10ಕ್ಕೆ, ಇನ್‌ಸೈಟ್ ಔಟ್ (3ಡಿ)(ಇಂ): ಸಂ.4.40ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಕಲ್ಕಿ 2898 ಎಡಿ (3ಡಿ) (ಹಿಂ): ಬೆ.11.15ಕ್ಕೆ, ಸಂ.6.45ಕ್ಕೆ, ಕಲ್ಕಿ 2898 ಎಡಿ (3ಡಿ) (ತೆ): ಮ.3ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.10.15ಕ್ಕೆ, ಮ.2ಕ್ಕೆ, ಸಂ.5.45ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ಕಲ್ಕಿ 2898 ಎಡಿ (ತೆ): ಬೆ.10.45ಕ್ಕೆ, ಸಂ.6.15ಕ್ಕೆ, ಕಲ್ಕಿ 2898 ಎಡಿ (ಹಿಂ): ಮ.2.30ಕ್ಕೆ, ರಾ.10ಕ್ಕೆ.
ಸ್ಕ್ರೀನ್ 4	ಡೆಸ್ಪಿಕಬಲ್ ಮಿ 4 (3ಡಿ) (ಇಂ): ಬೆ.10.40ಕ್ಕೆ, ಮ.3.20ಕ್ಕೆ, ರಾ.8ಕ್ಕೆ, ರಾ.10.15ಕ್ಕೆ, ಕಿಲ್ (ಹಿಂ): ಮ.12.55ಕ್ಕೆ, ಸಂ.5.35ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಲವ್ ಲಿ (ಕ): ಮ.1ಕ್ಕೆ, ಕಾಗದ (ಕ): ಸಂ.4ಕ್ಕೆ, ಬಿಗ್ ಬೆನ್ (ಮ): ಸಂ.6.55ಕ್ಕೆ, ಕುಂಡಲ ಪುರಾಣಂ (ಮ): ರಾ.9.30ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ(3ಡಿ) (ತೆ): ಮ.2.30ಕ್ಕೆ, ರಾ.9.30ಕ್ಕೆ, ಕಲ್ಕಿ 2898 ಎಡಿ (ಕ): ಸಂ.6ಕ್ಕೆ.
ಸ್ಕ್ರೀನ್ 3	ಕಲ್ಕಿ 2898 ಎಡಿ (ಕ): ಮ.1ಕ್ಕೆ, ಸಂ.4.25ಕ್ಕೆ, ರಾ.7.50ಕ್ಕೆ.
ಸ್ಕ್ರೀನ್ 4	ಕಲ್ಕಿ 2898 ಎಡಿ (3ಡಿ) (ತೆ): ಸಂ.4ಕ್ಕೆ, ರಾ.7.25ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈ ವೇದಿಕೆ ಮೈಸೂರು ವತಿಯಿಂದ ಶಾಲಾ ಮಕ್ಕಳಿಗೆ ವಿವಿಧ ಸ್ಪರ್ಧೆ

ಮೈಸೂರು, ಜು.10(ಜಿಎ)–ಮೈ ವೇದಿಕೆ ಮೈಸೂರು ವತಿಯಿಂದ ಜು.28 ರಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ನಳ ಸಭಾಂಗಣದಲ್ಲಿ ಶಾಲಾ ಮಕ್ಕಳಿಗೆ ವಿವಿಧ ಸ್ಪರ್ಧೆ ಆಯೋಜಿಸಲಾಗಿದೆ ಎಂದು ವೇದಿಕೆಯ ಸಂಸ್ಥಾಪಕ ಮನೀಶ್‌ಗೌಡ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ಪರ್ಧೆಗೆ ರೋಟರಿ ಕ್ಲಬ್ ಮೈಸೂರು ಹಾಗೂ ಸಿಗ್ನೆಚರ್ ಡಾನ್ಸ್ ಕಂಪನಿ ಕೈಜೋಡಿಸಿವೆ. ನೃತ್ಯ, ಹಾಡುಗಾರಿಕೆ, ಭಾಷಣ, ಚಿತ್ರಕಲೆ, ಫ್ಯಾಶನ್ ಶೋ, ನಟನೆ ಹಾಗೂ ವಿಜ್ಞಾನ ಮಾದರಿಗಳ ಸ್ಪರ್ಧೆಗಳಿದ್ದು, ನಾಲ್ಕರಿಂದ 10ನೇ ತರಗತಿ ವಿದ್ಯಾರ್ಥಿಗಳು ಸ್ಪರ್ಧಿಸಬಹುದು ಎಂದರು.

ಈ ಸ್ಪರ್ಧೆಯಲ್ಲಿ ಮೂರು ವಿಭಾಗಗಳಿದ್ದು, ನಾಲ್ಕನೇ ಹಾಗೂ ಐದನೇ ತರಗತಿ ವಿದ್ಯಾರ್ಥಿಗಳು ಒಂದು ವಿಭಾಗವಾದರೆ, ಆರನೇ ತರಗತಿ ಹಾಗೂ ಏಳನೇ ತರಗತಿ ವಿದ್ಯಾರ್ಥಿಗಳು ಎರಡನೇ ವಿಭಾಗ ಮತ್ತು ಪ್ರೌಢಶಾಲೆ ಮಕ್ಕಳು ಮತ್ತೊಂದು ವಿಭಾಗ. ಈ ಮೊದಲು ಉಲ್ಲೇಖಿಸಿದಂತೆ ಪ್ರತಿ ಸ್ಪರ್ಧೆಗಳ ವಿಜೇತರಿಗೆ ಅತ್ಯುತ್ತಮವಾದ ಟ್ರೋಫಿ, ಮೆಡಲ್ಸ್ ಹಾಗೂ ಪ್ರಮಾಣ ಪತ್ರವನ್ನು ನೀಡಲಾಗುವುದು ಎಂದು ತಿಳಿಸಿದರು.

ಕಾರ್ಯಕ್ರಮಕ್ಕೆ ಗಣ್ಯ ವ್ಯಕ್ತಿಗಳು ಕೂಡ ಆಗಮಿಸಲಿದ್ದಾರೆ. ಈ ಸ್ಪರ್ಧೆಗಳಲ್ಲಿ ಭಾಗವಹಿಸಲು ಎಲ್ಲಾ ಶಾಲಾ ಮಕ್ಕಳಿಗೆ ಅವಕಾಶವಿರುತ್ತದೆ. ಆಸಕ್ತಿ ಇರುವ ಮಕ್ಕಳು ಹಾಗೂ ಪೋಷಕರು ಹೆಚ್ಚಿನ ವಿವರಕ್ಕಾಗಿ 8549986439 ಸಂಪರ್ಕಿಸಿ ಎಂದರು. ಸುದ್ದಿಗೋಷ್ಠಿಯಲ್ಲಿ ನಿವಾಸ್ ಗೌಡ, ರಾಜೇಂದ್ರ, ರಾಹುಲ್ ಎಸ್. ರಾವ್, ವಿನೋದ್ ಉಪಸ್ಥಿತರಿದ್ದರು.

ಕೆಆರ್‌ಎಸ್ ನೀರಿನ ಮಟ್ಟ



ಗರಿಷ್ಠ ಮಟ್ಟ	124.80 ಅಡಿ
ಬುಧವಾರ	104.20 ಅಡಿ
ಒಳಹರಿವು	7267 ಕ್ಯೂಸೆಕ್
ಹೊರಹರಿವು	2250 ಕ್ಯೂಸೆಕ್

ಕಬಿನಿ ನೀರಿನ ಮಟ್ಟ



ಗರಿಷ್ಠ ಮಟ್ಟ	2284 ಅಡಿ
ಬುಧವಾರ	2282.73 ಅಡಿ
ಒಳಹರಿವು	5870 ಕ್ಯೂಸೆಕ್
ಹೊರಹರಿವು	5000 ಕ್ಯೂಸೆಕ್

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2859 ಅಡಿ
ಬುಧವಾರ	2850.03 ಅಡಿ
ಒಳಹರಿವು	2377 ಕ್ಯೂಸೆಕ್
ಹೊರಹರಿವು	466 ಕ್ಯೂಸೆಕ್




ಹಸಿರು ನಮ್ಮ ಉಸಿರು

ಇಂದು ಡೆಂಗ್ಯೂ ನಿಯಂತ್ರಣ ಕ್ರಮಗಳ ಬಗ್ಗೆ ಶಾಸಕ ಜಿಟಿಡಿ ಸಭೆ



ಮೈಸೂರು,ಜು.10(ಪಿಎಂ)– ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಡೆಂಗ್ಯೂ ನಿಯಂತ್ರಣಕ್ಕೆ ಕೈಗೊಂಡ ಕ್ರಮಗಳ ಬಗ್ಗೆ ಜು.11 ರಂದು ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಅವರು ತಮ್ಮ ಅಧ್ಯಕ್ಷತೆಯಲ್ಲಿ ಕ್ಷೇತ್ರದ ಎಲ್ಲಾ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳೊಂದಿಗೆ ಸಭೆ ನಡೆಸಲಿದ್ದಾರೆ. ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಅಂದು ಮಧ್ಯಾಹ್ನ 12ಕ್ಕೆ ಸಭೆ ಹಮ್ಮಿಕೊಳ್ಳಲಾಗಿದೆ.

ಗೃಹಿಣಿಯರ ವೈಯಕ್ತಿಕ ಖರ್ಚಿಗೆ ಗಂಡಂದಿರು ಹಣ ಕೊಡಲೇಬೇಕು



ನವದೆಹಲಿ: ತಾಯಿ–ಗೃಹಿಣಿ ಅನ್ನೋದು ರಾಜೀನಾಮೆಯೇ ಕೊಡಲಾಗದ ಬೆನ್ನು ಮುರಿವ ಚಾಕರಿ. ಹೌದು ಬಹುತೇಕ ಮಹಿಳೆಯರ ಪರಿಸ್ಥಿತಿ ಇದು. ಭಾರತೀಯ ಕುಟುಂಬ ವ್ಯವಸ್ಥೆಯಲ್ಲಿ ಸಾಕಷ್ಟು ನೋವುಂಡು, ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ನಿರಂತರವಾಗಿ ದುಡಿಯುತ್ತಿರುವ, ಬದುಕನ್ನು ಸವೆಸುತ್ತಿರುವ ಕೋಟ್ಯಂತರ ಗೃಹಿಣಿಯರ ಬಗ್ಗೆ ಸುಪ್ರೀಂ ಕೋರ್ಟ್ ಮಹತ್ವದ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ. ಗೃಹಿಣಿಯರ ಪಾತ್ರ ಮತ್ತು ಕುಟುಂಬಕ್ಕಾಗಿ ಅವರು ಮಾಡುವ ತ್ಯಾಗವನ್ನು ಭಾರತೀಯ ಪುರುಷರು ಗುರುತಿಸುವ ಸಮಯ ಬಂದಿದೆ ಎಂದು ಸುಪ್ರೀಂ ಕೋರ್ಟ್ ಇಂದು ಹೇಳಿದೆ. ಗೃಹಿಣಿಯರ ಹಕ್ಕುಗಳನ್ನು ಒತ್ತಿ ಹೇಳುವ ಮೂಲಕ ಭಾರತೀಯ ಗೃಹಿಣಿಯರ ಮೂಕವೇದನೆಗೆ ದನಿಯಾಗಿದೆ.

ವೈಯಕ್ತಿಕ ಖರ್ಚಿಗೆ ಹಣ ಕೊಡಬೇಕು: ಕುಟುಂಬದಲ್ಲಿ ಗೃಹಿಣಿಯರ ಪ್ರಮುಖ ಪಾತ್ರವನ್ನು ಒತ್ತಿಹೇಳಿರುವ ನ್ಯಾಯಾಲಯ, ಗಂಡಂದಿರು ತಮ್ಮ ಹೆಂಡತಿಯರಿಗೆ ಆರ್ಥಿಕ ನೆರವು ನೀಡುವುದು ಅಗತ್ಯ ಎಂದು ಹೇಳಿದರು. ನ್ಯಾಯಮೂರ್ತಿ ನಾಗರತ್ನ ಅವರು ತಮ್ಮ ತೀರ್ಪಿನಲ್ಲಿ, ಭಾರತೀಯ ವಿವಾಹಿತ ಪುರುಷನು ತನ್ನ ಹೆಂಡತಿಗೆ ಆರ್ಥಿಕವಾಗಿ ಸಬಲರಾಗಲು ನೆರವು ನೀಡಬೇಕು. ಸ್ವತಂತ್ರ ಆದಾಯದ ಮೂಲವನ್ನು ಹೊಂದಿರದ ತನ್ನ ಹೆಂಡತಿಗೆ, ವಿಶೇಷವಾಗಿ ಅವಳ ವೈಯಕ್ತಿಕ ಅಗತ್ಯಗಳಿಗಾಗಿ ಹಣಕಾಸಿನ ಸಂಪನ್ಮೂಲಗಳನ್ನು ಲಭ್ಯವಾಗುವಂತೆ ಮಾಡಬೇಕು ಎಂಬ ಅಂಶವನ್ನು ಹೇಳಿದ್ದಾರೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಗಂಡನ ಹಣಕಾಸಿನ ಸಂಪನ್ಮೂಲಗಳಿಗೆ ಹೆಂಡತಿಗೂ ಪ್ರವೇಶವನ್ನು ನೀಡುವುದು ಎಂದು ಹೇಳಿದ್ದಾರೆ.

ಕೋರ್ಟ್ ನೀಡಿದ ಪ್ರಮುಖ 3 ನಿರ್ದೇಶನಗಳು: ಭಾರತೀಯ ವಿವಾಹಿತ ಪುರುಷರು ತಮ್ಮ ಸಂಗಾತಿಗೆ ತಮ್ಮ ವೈಯಕ್ತಿಕ ವೆಚ್ಚಗಳಿಗಾಗಿ ಹಣ ನೀಡಬೇಕು. ಮನೆಯ ಖರ್ಚನ್ನು ಹೊರತುಪಡಿಸಿ ಅವರದ್ದೇ ವೈಯಕ್ತಿಕ ಖರ್ಚಿಗೆ ಹಣ ನೀಡಬೇಕು. ಜಂಟಿ ಬ್ಯಾಂಕ್ ಖಾತೆಯನ್ನು ಹೊಂದುವ ಮೂಲಕ ಅಥವಾ ಎಟಿಎಂ ಕಾರ್ಡ್ ನೀಡಬೇಕು.

ಎಸ್‌ಎಸ್‌ಎಲ್‌ಸಿ ಪರೀಕ್ಷೆ–2 ಫಲಿತಾಂಶ ಪ್ರಕಟ

ಬೆಂಗಳೂರು, ಜು.10–ಪ್ರೌಢಶಿಕ್ಷಣ ಮಂಡಳಿ ನಡೆಸುವ ಎಸ್‌ಎಸ್‌ಎಲ್‌ಸಿ ಪರೀಕ್ಷೆ–2ರ ಫಲಿತಾಂಶ ಬುಧವಾರ ಪ್ರಕಟವಾಗಿದೆ. ಅಭ್ಯರ್ಥಿಗಳು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯಮಾಪನ ಮಂಡಳಿಯ ಅಧಿಕೃತ ವೆಬ್‌ಸೈಟ್ kseab.karnataka.gov.in ಮತ್ತು karresults.nic.in ನಲ್ಲಿ ತಮ್ಮ ಅಂಕಗಳನ್ನು ಪರಿಶೀಲಿಸಬಹುದಾಗಿದೆ.

ವಿದ್ಯಾರ್ಥಿಗಳು ಫಲಿತಾಂಶಗಳನ್ನು ಪರಿಶೀಲಿಸಲು ಅಧಿಕೃತ ವೆಬ್‌ಸೈಟ್‌ಗೆ ಭೇಟಿ ನೀಡಬೇಕು. ಅಧಿಕೃತ ವೆಬ್‌ಸೈಟ್‌ಗೆ ಭೇಟಿ ನೀಡಿದ ನಂತರ ಮತ್ತು ಫಲಿತಾಂಶದ ಲಿಂಕ್ ಅನ್ನು ತೆರೆದ ನಂತರ, ವಿದ್ಯಾರ್ಥಿಗಳು ತಮ್ಮ ಜನ್ಮ ದಿನಾಂಕ (DOB) ಮತ್ತು ನೋಂದಣಿ ಸಂಖ್ಯೆಯನ್ನು ನಮೂದಿಸಬೇಕು. ಕರ್ನಾಟಕ ಎಸ್‌ಎಸ್‌ಎಲ್‌ಸಿ ಪೂರಕ ಪರೀಕ್ಷೆಗಳು ಜೂನ್ 14 ಮತ್ತು 21ರ ಅವಧಿಯಲ್ಲಿ ನಡೆದಿದ್ದವು. 1.29 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು.

ಎಂಜೆ ರೂಪಾ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ



ಎಂ.ಜೆ.ರೂಪಾ

ಮೈಸೂರು, ಜು. 10(ಆರ್‌ಕೆ)– ಮೈಸೂರು ಮಹಾನಗರ ಪಾಲಿಕೆ ಉಪ ಆಯುಕ್ತ (ಆಡಳಿತ)ರಾಗಿದ್ದ ಹಿರಿಯ ಕೆಎಎಸ್ ಅಧಿಕಾರಿ ಎಂ.ಜೆ.ರೂಪಾ ಅವರನ್ನು ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿಯನ್ನಾಗಿ ನಿಯೋಜಿಸಲಾಗಿದೆ. ಹೊಸದಾಗಿ ರಚನೆಯಾಗಿರುವ ಪ್ರಾಧಿಕಾರದ ಅಧ್ಯಕ್ಷರಾಗಿ ಮುಖ್ಯಮಂತ್ರಿಗಳಿದ್ದು, ಅವರ ನಿರ್ದೇಶನದಂತೆ ಕಾರ್ಯದರ್ಶಿಗಳು ಹಾಗೂ ಇತರ ಅಧಿಕಾರಿಗಳು ಕ್ಷೇತ್ರದ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನ ಮಾಡಬೇಕಾಗುತ್ತದೆ.

ಗುರು ಪೂರ್ಣಿಮಾ ಪ್ರಯುಕ್ತ ವಿಶೇಷ ಸುದರ್ಶನ ಕ್ರಿಯೆ ಶಿಬಿರ

ಮೈಸೂರು, ಜು. 10– ಮೈಸೂರಿನ ಆರ್ಟ್ ಆಫ್ ಲಿವಿಂಗ್ ವತಿಯಿಂದ ಜುಲೈ 17 ರಿಂದ 21 ರವರೆಗೆ ಆರೋಗ್ಯಕರ ಜೀವನ, ಧ್ಯಾನ, ಯೋಗ, ಪ್ರಾಣಾಯಾಮ, ಸುದರ್ಶನ ಕ್ರಿಯೆಯನ್ನು ಕಲಿಸುವ ಶಿಬಿರವನ್ನು ಲಲಿತಾದ್ರಿಪುರ ರಸ್ತೆಯಲ್ಲಿರುವ ಆರ್ಟ್ ಆಫ್ ಲಿವಿಂಗ್ ಆಶ್ರಮದಲ್ಲಿ ಏರ್ಪಡಿಸಲಾಗಿದೆ. ಶಿಬಿರವು ಬೆಳಗ್ಗೆ 6 ರಿಂದ 8.30 ರವರೆಗೆ ಸಂಜೆ 6 ರಿಂದ 8.30 ರವರೆಗೆ ನಡೆಯಲಿದೆ. ಹೆಚ್ಚಿನ ಮಾಹಿತಿಗೆ 9480476825, 9483589825 ಸಂಪರ್ಕಿಸಬಹುದು.

ತಿಂಗಳ ಮಾಸಿಕ ಸಭೆ

ಮೈಸೂರು, ಜು. 10–ಮೈಸೂರಿನ ರೈಲ್ವೆ ಪೆನ್ಷನರ್ಸ್ ವೆಲ್‌ಫೇರ್ ಅಸೋಸಿಯೇಷನ್‌ನ ಮಾಸಿಕ ಸಭೆಯು ಜು. 13 ರಂದು ಬೆಳಗ್ಗೆ 11.30ಕ್ಕೆ ಕಾರ್ಯಾಲಯದ ಆವರಣದಲ್ಲಿ ನಡೆಯಲಿದೆ. ಸಂಘದ ಅಧ್ಯಕ್ಷ ಪಾರ್ಥಸಾರಥಿ ಅಧ್ಯಕ್ಷತೆ ವಹಿಸಲಿದ್ದಾರೆ.

7ನೇ ವರ್ಷದ ಸವಿನೆನಪು




ದಿ|| ಶ್ರೀಮತಿ ಸುಂದರಮ್ಮ
ನಿಧನ: 07.06.2017
ದುಃಖತಪ್ತರು: ರಾಜಮ್ಮ ಮತ್ತು ಕುಟುಂಬವರ್ಗದವರು

ಪ್ರಮಾಣ ಪತ್ರ

ರಾಧಿಕಾ ನಂಜುಂಡಸ್ವಾಮಿ W/O ಪ್ರತಾಪ್ ಮನಕುಲವಾಳು ಸುರೇಶ್ #53, LIG 2ನೇ ಎ ಮೈನ್, ಶಾರದದೇವಿನಗರ, ಮೈಸೂರಿನಲ್ಲಿ ವಾಸಿಸುತ್ತಿರುವ ನಾನು ನನ್ನ ಪಾಸ್‌ಪೋರ್ಟ್ No: T5782398 ನಲ್ಲಿ ನನ್ನ ಪತಿಯ ಹೆಸರು ಪ್ರತಾಪ್ ಮನಕಲು ಸುರೇಶ್ ಎಂದು ನಮೂದಿಸಲಾಗಿದೆ. ಆದರೆ ಸರಿಯಾದ ಹೆಸರು ಪ್ರತಾಪ್ ಮನಕುಲವಾಳು ಸುರೇಶ್ ಈ ದಿನ ಅಫಿಡವಿಟ್ ಮಾಡಿಸಿರುತ್ತೇನೆ.

ಸಹಿ/–ರಾಧಿಕಾ ನಂಜುಂಡಸ್ವಾಮಿ
ಮೊ: 9972661425



AFFIDAVIT

I, Deepak Vashdev, residing in Mysore City, Vijayanagar 1st Stage, Near Main Corporation Bank, 5th Main, No. 412, declare that my son has his full name as Puneet D. Dodeja in school and other documents. In his passport and other documents, his name appears as Puneet D. Hence I declare this in front of Notary Ramadevi M. on 5-7-2024, that both Puneet D. Dodeja and Puneet D. refer to the same person. Therefore, I request a correction for the above mentioned names to Puneet Deepak.

Sd/- Deepak Vashdev

PUBLIC NOTICE

Notice is hereby given on behalf of My Clients Smt. Prabha rani W/o Late Suresh Chandra, Mohan Kumar and Ashok Kumar residing at No 5488, 2 nd Main, 2nd Cross, Vijayanagar, Mysore that the Allot ment Letter and Possession Certificate Executed by City Improvement Trust Board (Now Mysore Urban Development Authority) in Favour of Planter Association of Southern India has been lost and Not traceable yet. The report of the same has been lodged at the Vijaya nagar Police Station on 08/07/2024 in Ref No. 881/2024.

Anybody if found kindly inform to Smt. Prabha rani W/o Late Suresh Chandra, Mohan Kumar and Ashok Kumar residing at No 5488, 2nd Main, 2nd Cross, Vijayanagar, Mysore or the Undersigned immediately.

Description of lost original document.

1. Allotment Letter.
2. Possession Certificate.

All the piece and parcel of land bearing No. 2624/A, D7, 2624/B ,D7/B,2627/C, D7/C, measuring East to West 129 feet and North to South160 feet bounded on, East: Road,West: Site No.2, North: Road, South:Conservancy, situated at K.R.S Main Road, V.V Puram Devaraje Mohalla, Mysore.

Sd/- M.N.Sreenivas
Advocate, #5, Ground floor, Behind Maramma Temple,Bajjanna lane, Chamarajapurm, Mysore
Date:09/07/2024, Place: Mysore

ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿ.,
ಗಾಂಧಿಚೌಕ, ಮೈಸೂರು
ಮುಖ್ಯ ಕಛೇರಿ:0821-2521631 ಶಾಖೆ :0821-2563851

ಪ್ರಕಟಣೆ

ತಾ|| 10.07.2024 ರಿಂದ ಒಂದು ವರ್ಷದ ಅವಧಿಗೆ ಖಾಯಂ ಠೇವಣಿಗಳ ಮೇಲೆ ನೀಡುವ ಬಡ್ಡಿ ದರವನ್ನು ಶೇ.8% ರಿಂದ ಶೇ.8.5%ಗೆ ಹೆಚ್ಚಿಸಲಾಗಿದೆ. (ಹಿರಿಯ ನಾಗರೀಕರಿಗೆ) ಹಾಗೂ ಸಾಮಾನ್ಯರಿಗೆ 7.5% ರಿಂದ 8%ಗೆ ಹೆಚ್ಚಿಸಲಾಗಿದೆ.

1) ಇದು ಸೀಮಿತ ಅವಧಿಯ ಕೊಡುಗೆಯಾಗಿದ್ದು ರೂ.5,00,000/- ಮತ್ತು ಮೇಲ್ಪಟ್ಟು ಠೇವಣಿ ಮಾಡುವ ಠೇವಣಿದಾರರಿಗೆ ನಿಬಂಧನೆಯ ಮೇರೆಗೆ ಬ್ಯಾಂಕಿನ ಷೇರು ಸದಸ್ಯತ್ವವನ್ನು (ಹಿರಿಯ ನಾಗರೀಕರನ್ನು ಹೊರತು ಪಡಿಸಿ) ನೀಡಲಾಗುವುದು ಆದ್ದರಿಂದ ಮಾನ್ಯ ಸದಸ್ಯರು/ ಗ್ರಾಹಕರು ಇದರ ಸದುಪಯೋಗ ಪಡೆಯಬೇಕೆಂದು ಕೋರಲಾಗಿದೆ.

2) ಮಾನ್ಯ ಸದಸ್ಯರುಗಳಿಗೆ ಬ್ಯಾಂಕಿನ ಮುಖ್ಯ ಕಛೇರಿ ಮತ್ತು ಶಾಖಾ ಕಛೇರಿಯಲ್ಲಿ ಲಾಕರ್ ಸೌಲಭ್ಯ ದೊರೆಯುತ್ತದೆ

ಆಡಳಿತ ಮಂಡಲಿಯ ಅಪ್ಪಣೆ ಮೇರೆಗೆ
ಸಹಿ/– ಕೆ.ಹರ್ಷಿತ್ ಗೌಡ, ಮುಖ್ಯಕಾರ್ಯನಿರ್ವಹಣಾಧಿಕಾರಿ
ಮೊ.9148037007

IN THE COURT OF THE VI ADDI.. SENIOR CIVIL JUDGE AND JMFC, AT MYSURU

O.S. NO. 867 OF 2022

Plaintiff: K.P.Prasanna Kumar v/s
Defendants: Smt.Jayamma and others To
(a) Smt.Mahadevamma daughter of late Siddappa, Lingaythara Street, Vajamangala Village and Post, Varuna Hobli, Mysuru Taluk. (Proposed Lr of defendant no.14 Siddappa)
(b) Smt. Renuka daughter of late Siddappa, Lingaythara Street, Vajamangala Village and Post, Varuna Hobli, Mysuru Taluk. (Proposed Lr of defendant no. 14 Siddappa)

NOTICE TO APPEAR IN PERSON

Whereas, the plaintiff has instituted this suit for the reliefs of specific performance in relation to the suit schedule property against the defendants inclusive of your late father Siddappa who died during the pendency of the suit. An application to bring you on record as the legal representatives of the deceased Siddappa is filed. Hence, you are hereby summoned to appear in this court in person or by an Advocate duly instructed and able to answer all the material questions in relation to the suit or who shall be accompanied by some person able to answer all such question on 27 day of 07 2024 at 11 A.M. in the forenoon to answer all the claims.

Take notice that in default of your appearance on that day before mentioned, the application will be heard and determined in your absence. Given under my hand and seal of the Court this 10th day July of 2024.

By Order of the Court, Sd/- Chief Ministerial Officer Court of Senior Civil Judge & CJM., Mysuru

Sd/- S.Nataraj, B.Sc, LLM
Advocate, No.116, 1st Floor, Banumaiah Chowk, Mysore.

IN THE COURT OF THE VI ADDI.. SENIOR CIVIL JUDGE AND JMFC, AT MYSURU

O.S. NO. 868 OF 2022

Plaintiff: K.P.Prasanna Kumar v/s
Defendants: Smt.Jayamma and others To
(a) Smt.Mahadevamma daughter of late Siddappa, Lingaythara Street, Vajamangala Village and Post, Varuna Hobli, Mysuru Taluk. (Proposed Lr of defendant no.14 Siddappa)
(b) Smt. Renuka daughter of late Siddappa, Lingaythara Street, Vajamangala Village and Post, Varuna Hobli, Mysuru Taluk. (Proposed Lr of defendant no. 14 Siddappa)

NOTICE TO APPEAR IN PERSON

Whereas, the plaintiff has instituted this suit for the reliefs of specific performance in relation to the suit schedule property against the defendants inclusive of your late father Siddappa who died during the pendency of the suit. An application to bring you on record as the legal representatives of the deceased Siddappa is filed. Hence, you are hereby summoned to appear in this court in person or by an Advocate duly instructed and able to answer all the material questions in relation to the suit or who shall be accompanied by some person able to answer all such question on 27 day of 07 2024 at 11 A.M. in the forenoon to answer all the claims.

Take notice that in default of your appearance on that day before mentioned, the application will be heard and determined in your absence. Given under my hand and seal of the Court this 10th day July of 2024.

By Order of the Court, Sd/- Chief Ministerial Officer Court of Senior Civil Judge & CJM., Mysuru

Sd/- S.Nataraj, B.Sc, LLM
Advocate, No.116, 1st Floor, Banumaiah Chowk, Mysore.



ಪ್ರಕಟಣೆ

ಭಾರತೀಯ ವೈದ್ಯಕೀಯ ಮಂಡಳಿಯ ಪ್ರಕಾರ ವೈದ್ಯಕೀಯ ದಾಖಲೆಗಳ ನೀತಿಗೆ ಸಂಬಂದಿಸಿದಂತೆ ಗೋಪಾಲಗೌಡ ಶಾಂತವೇರಿ ಸ್ಮಾರಕ ಆಸ್ಪತ್ರೆ, ಮೈಸೂರು. ಇಲ್ಲಿನ 2018 ನೇ ವರ್ಷದ ಒಳರೋಗಿ ಹಾಗೂ ಹೊರ ರೋಗಿ ಕಡತಗಳನ್ನು (IN PATIENT AND OUT PATIENT FILES) ಗಳನ್ನು ವಿಲೇವಾರಿ ಮಾಡುತ್ತಿದ್ದು, ಆಸಕ್ತಿಯುಳ್ಳ ರೋಗಿಗಳು ಸದರಿಯವರ ಒಳರೋಗಿ ಹಾಗೂ ಹೊರ ರೋಗಿ ಕಡತವನ್ನು ಪಡೆದುಕೊಳ್ಳಲು ಈ ಪ್ರಕಟಣೆಗೊಂಡ 15 ದಿನಗಳ (26.07.2024) ಒಳಗಾಗಿ ವೈದ್ಯಕೀಯ ದಾಖಲೆಗಳ ವಿಭಾಗದಲ್ಲಿ ಸಂಪರ್ಕಿಸಬಹುದಾಗಿ ಈ ಮೂಲಕ ತಿಳಿಯಪಡಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ : ವೈದ್ಯಕೀಯ ದಾಖಲಾತಿ ವಿಭಾಗ, ಗೋಪಾಲಗೌಡ ಶಾಂತವೇರಿ ಸ್ಮಾರಕ ಆಸ್ಪತ್ರೆ, ನಜರ್ ಬಾದ್, ಮೈಸೂರು- 570010

ದೂರವಾಣಿ ಸಂಖ್ಯೆ: 0821-4001600.

ಸಹಿ/–
ಆಡಳಿತಾಧಿಕಾರಿಗಳು

ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವ ವಿದ್ಯಾಲಯ
ಮೈಸೂರು–570 004
Email : musicuniversitymys@gmail.com, Website: https://www.musicuniversity.ac.in

ಸಂಖ್ಯೆ:ಕೆಎಸ್‌ಜಿಎಚ್/ಸಂಪ್ರಕವಿ/ ಪ ಪ್ರ/2024–25 ದಿನಾಂಕ: 09–07–2024

ಪ್ರಕಟಣೆಗಾಗಿ ಕೋರಿ

ವಿಷಯ:–2024–25 ನೇ ಶೈಕ್ಷಣಿಕ ಸಾಲಿಗೆ ಅತಿಥಿ/ಅರೆಕಾಲಿಕ ಉಪನ್ಯಾಸಕ ಹುದ್ದೆಗಳಿಗೆ ಅರ್ಜಿ ಆಹ್ವಾನ.

ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ಮೈಸೂರು & ಹುಬ್ಬಳ್ಳಿ ಕೇಂದ್ರ(ಗುರುಕುಲ)ಉಣ್ಕಲ್ ಹಾಗೂ ದೇವನಳ್ಳಿಯ ಡೋಲು ನಾದಸ್ವರದ ಕೋರ್ಸುಗಳಾದ ಸರ್ಟಿಫಿಕೆಟ್, ಡಿಪ್ಲೋಮ, ಬಿ.ಪಿ.ಎ **Bachelor of Performing Arts (BPA)** ಸ್ನಾತಕ ಪದವಿ **Master of Arts (MPA)** ಎಂ.ಪಿ.ಎ ಸ್ನಾತಕೋತ್ತರ ಪದವಿ ತರಗತಿಗಳಿಗೆ ಅತಿಥಿ ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಯು.ಜಿ.ಸಿ ನಿಯಮಾವಳಿಗಳ ಅನ್ವಯ (**'A' grade artist of AIR/TV**) ಅರ್ಹತೆ ಹೊಂದಿರುವವರು ಭರತನಾಟ್ಯ, ಹಿಂದೂಸ್ತಾನಿ ಗಾಯನ, ಕರ್ನಾಟಕ ಸಂಗೀತ, ನಾಟಕ, ವೀಣೆ, ತಬಲ, ಹಾರ್ಮೋನಿಯಂ, ಕನ್ನಡ, ಸಂಸ್ಕೃತ ಮತ್ತು ಆಂಗ್ಲ ಭಾಷಾ ವಿಷಯಗಳಿಗೆ ಸಂಬಂಧಿಸಿದಂತೆ ಅರ್ಜಿ ಸಲ್ಲಿಸಬಹುದು.

ಭರ್ತಿ ಮಾಡಿದ ಅರ್ಜಿಗಳನ್ನು ದಿನಾಂಕ:–20–07–2024 ರೊಳಗೆ ಕಛೇರಿಗೆ ಸಲ್ಲಿಸತಕ್ಕದ್ದು. ಈ ಸಂಬಂಧ ಹೆಚ್ಚಿನ ವಿವರಗಳನ್ನು ನಮ್ಮ ವಿಶ್ವವಿದ್ಯಾಲಯದ ಅಧಿಕೃತ ಜಾಲತಾಣ **https://musicuniversity.ac.in** ದಿಂದ ಪಡೆಯಬಹುದು.

ಸಹಿ/–
ಕುಲಸಚಿವರು

ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವ ವಿದ್ಯಾಲಯ
ಮೈಸೂರು–570 004
Email : musicuniversitymys@gmail.com, Website: https://www.musicuniversity.ac.in

ಸಂಖ್ಯೆ:ಕೆಎಸ್‌ಜಿಎಚ್/ಸಂಪ್ರಕವಿ/ಪ.ಪ್ರ/2024–25 ದಿನಾಂಕ: 09 .07.2024

ಪತ್ರಿಕಾ ಪ್ರಕಟಣೆಗಾಗಿ

ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ಮೈಸೂರು ಹಾಗೂ ಡಾ. ಗಂಗೂಬಾಯಿ ಹಾನಗಲ್ ಹುಬ್ಬಳ್ಳಿ ಕೇಂದ್ರ (ಗುರುಕುಲ) ಕ್ಕೆ 2024–25ನೇ ಶೈಕ್ಷಣಿಕ ಸಾಲಿನಿಂದ ನಡೆಸುವ ಸ್ನಾತಕ, ಸ್ನಾತಕೋತ್ತರ, ಡಿ.ಲಿಟ್, ಡಿಪ್ಲೋಮಾ, ಮತ್ತು ಸರ್ಟಿಫಿಕೇಟ್ ಕೋರ್ಸುಗಳ ಪ್ರವೇಶಕ್ಕೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ.ಸಂ	ಕೋರ್ಸುಗಳು	
1	ಬಿ.ಪಿ.ಎ. ಕೋರ್ಸ್ (Bachelor of Perfoming Arts):	ಕರ್ನಾಟಕ ಸಂಗೀತ, ಭರತನಾಟ್ಯ, ಹಿಂದೂಸ್ತಾನಿ ಸಂಗೀತ, ತಬಲ, ವೀಣೆ, ನಾಟಕ
2	ಎಂ.ಪಿ.ಎ ಕೋರ್ಸ್ (Masters of Performing Arts):	ಕರ್ನಾಟಕ ಸಂಗೀತ, ಭರತನಾಟ್ಯ, ಹಿಂದೂಸ್ತಾನಿ ಸಂಗೀತ, ತಬಲ, ನಾಟಕ
3	ಡಿ.ಲಿಟ್ (D.Litt):	ಸಂಗೀತ , ನೃತ್ಯ, ನಾಟಕ ಹಾಗೂ ಪ್ರದರ್ಶಕ ಕಲೆಗಳ ಅಂತರ್ ಶಿಸ್ತೀಯ ಅಧ್ಯಯನಗಳು.
4	ಡಿಪ್ಲೋಮಾ ಕೋರ್ಸ್ (ಒಂದು ವರ್ಷ) ಸಂಜೆ ತರಗತಿಗಳು, & ಸರ್ಟಿಫಿಕೇಟ್ ತರಗತಿಗಳು (ಆರು ತಿಂಗಳು)ವಾರದ ಕೊನೆಯ 3ದಿನಗಳು.	ನೃತ್ಯ, ನಾಟಕ, ಸಂಗೀತ, ಹಿಂದೂಸ್ತಾನಿ, ತಬಲ, ಹಾರ್ಮೋನಿಯಂ ಗೀಟಾರ್, ಕೀ ಬೋರ್ಡ್, ಜಾನಪದ, ಬಾವಗೀತೆ, ಭಕ್ತಿಗೀತೆ ಮತ್ತು ಇತರ ಪ್ರದರ್ಶನ ಕಲೆಗಳು.

ಈ ಸಂಬಂಧ ಹೆಚ್ಚಿನ ವಿವರಗಳನ್ನು ನಮ್ಮ ವಿಶ್ವವಿದ್ಯಾಲಯದ ಅಧಿಕೃತ ಜಾಲತಾಣ **https://musicuniversity.ac.in** ದಿಂದ ಪಡೆಯಬಹುದು.

ಸಹಿ/–
ಕುಲಸಚಿವರು

